ಕರ್ಮವೀರ

ಹುಬ್ಬಳ್ಳಿ ತಾ. ೯—೬—೪

ಸಂಪುಟ ೨೦] [ಸಂಚಿಕೆ ೧

ಜನಪ್ರಿಯ ಸಚಿತ್ರ ವಾರಪತ್ರಿಕೆ

ಸಂಪಾದಕರು:
. ಪುರೋಹಿತ]

[ಸಂಸ್ಥಾಪಕರು— ನಿರ್ದೇಶಕರು
ರಂ. ರಾ. ದಿವಾಕರ

ನೆನಪಿನ ನಿಧಿಗಾಗಿ

ಮೌನವೆಂಬುದು ನಿದ್ದೆಯಂತೆ; ಅದು ಜ್ಞಾನಕ್ಕೆ ಚೈತನ್ಯ ಕೊಡುತ್ತದೆ.

—ಬೇಕನ್

ನಾಗರಿಕತೆಯು ನಿಜವಾದ ಒರೆಗಲ್ಲು ಜನಗಣನೆಯೂ ಅಲ್ಲ, ನಗರಗಳ ಬೆಳವಣಿಗೆಯೂ ಅಲ್ಲ, ಬೆಳೆದ ಪೈರೂ ಅಲ್ಲ; ಆ ದೇಶ ಹಡೆದ ಮನುಷ್ಯನ ಸ್ವರೂಪವೊಂದೇ ಅದರ ಒರೆಗಲ್ಲಾಗಬಲ್ಲದು.

—ಎಮರ್ಸನ್

ಜ್ಞಾನಿಗಳ ಸಂಖ್ಯೆ ಯಾವಾಗಲೂ ಕಡಿಮೆಯೆ. ಅದು ಹೆಚ್ಚುತಿರುವದೇನೋ ನಿಜ. ಆದರೆ ಮೂರ್ಖರ ಸಂಖ್ಯೆಯೊಡನೆ ಹೋಲಿಸಿದರೆ ಅದು ಎಲ್ಲಿಗೂ ಬಾರದು. ಅದರಲ್ಲಿಯೂ ತೀರ ದುರ್ದೈವದ ಸಂಗತಿಯೆಂದರೆ, ಸೈನ್ಯಬಲವುಳ್ಳವನಿಗೇ ದೈವಬಲವೂ ಇದೆಯೆಂದು ಮೂರ್ಖರು ನಂಬುತ್ತಾರೆ.

—ವಾಲ್ಟೇರ

ಧಾರ್ಮಿಕ ಸಂಪ್ರದಾಯಕ್ಕೆ ಅವನತಿ ಬಂತೆಂದರೆ ಧರ್ಮಬುದ್ಧಿಯ ಜಾಗೃತಿಯಾಗತೊಡಗಿತೆಂದು ತಿಳಿಯಬೇಕು.

—ಡಿಲೈಲ್ ಬರ್ನ್ಸ್



ಡಾ. ವಿಜಯೀಂದ್ರರಾವ್.


ಭಾರತದ ಪ್ರಮುಖ ಅರ್ಥಶಾಸ್ತ್ರಜ್ಞರ ಸಾಲಿನಲ್ಲಿ ಸೇರಿರುವ ಶ್ರೀ. ರಾಯರು ಶ್ರೀರಂಗದವರು. ನ್ಯೂಯಾರ್ಕಿನಲ್ಲಿ ನಡೆದ ಸಂಯುಕ್ತ ರಾಷ್ಟ್ರಸಂಘದ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ವಿಭಾಗದ ಸಭೆಗೆ ಹೋದ ಭಾರತದ ಪ್ರತಿನಿಧಿಗಳಲ್ಲಿ ಇವರೊಬ್ಬರೆಂಬುದರಿಂದ ಇವರ ಪ್ರಾಶಸ್ತ್ಯವನ್ನು ತಿಳಿಯಬಹುದು.

ಅರಬಸ್ತಾನದಲ್ಲಿ ಇನ್ನೂ ಗುಲಾಮಗಿರಿ

— ಪುಟ ೫

ನನ್ನ ಬೆನ್ನು

(ಹರಟೆ) ಪುಟ ೨



KARMAVEER

ನನ್ನ ಬೆನ್ನು

[ಲೇ:— ಶ್ರೀ ನಾ. ಕಸ್ತೂರಿ]

"ಸ್ವಾಮಿ !"

ನಾನು ಹಿಂತಿರುಗಿ ನೋಡಿದೆ. ಸಣ್ಣ ಕಿರಿಯುತ್ತ ಜುಟ್ಟೆಯನ್ನು ತೀಡುತ್ತ, ಮುಗುಳ್ನಗೆಯನ್ನು ಬೀರುತ್ತ ಒಬ್ಬರು ನನ್ನೆಡೆಗೆ ಓಡಿಬರುತ್ತಿದ್ದರು. ಎಷ್ಟೋ ದಿನಗಳ ವಿರಹದಿಂದ ಬಳಲಿದವರಂತೆ, ಕಡೆಗೂ ತಮ್ಮ ಪ್ರೇಮಪಾತ್ರ ಕೈಗೆ ಸಿಕ್ಕಿತೋ ಎಂಬಂತೆ, ಅವರ ಕಣ್ಣುಗಳು ಅರಳಿದ್ದುವು. ನನ್ನ ಹಿಂದೆಯೋ ಅವರು ಬಹಳ ದೂರ ಓಡಿ ಬಂದಿರಬೇಕು. ಏಕೆಂದರೆ, ಅವರು ಬೆವರುತ್ತ ಏದುಸಿರುಬಿಡುತ್ತ, ಬರುತ್ತ ತಮ್ಮ ದಪ್ಪ ಹೊಟ್ಟೆಯನ್ನು ಕುಣಿಸಿಕೊಂಡು ವೇಗವೇಗವಾಗಿ ಸಾಗಿ ಬರುತ್ತಿದ್ದರು.

ಧಾರವಾಡ ನನಗೆ ತೀರ ಹೊಸದು. ಯಾವುದೋ ಒಂದು ಅಗತ್ಯ ಕೆಲಸಕ್ಕಾಗಿ ನಾನು ಅಲ್ಲಿಗೆ ಅದಿನ ಬೆಳಗ್ಗೆ ಹೋಗಿ ಸೇರಿದ್ದೆ. ಅಷ್ಟೆ, ಅಲ್ಲಿ ನನಗೆ ಪರಿಚಿತರು ಯಾರೂ ಇರಲಿಲ್ಲ. ಆದರೂ ನನ್ನ ಬೆನ್ನ ಹಿಂದೆ ನನ್ನನ್ನು ಗುರುತಿಸಿದ ಮಹನೀಯರು ಯಾರು, ಎಂದು ಅರಿಯಲು ನಾನೂ ಕುತೂಹಲನಾದೆ. "ಸ್ವಾಮಿ !" ಎನ್ನುತ್ತ, ಅವರು ನನ್ನ ಸಮೀಪಕ್ಕೆ ಬಂದರು. ನನ್ನನ್ನು ಹತ್ತಿರದಿಂದ ನೋಡಿದರು.., ಚಾಚಿದ ಕೈ ಹಿಂದಕ್ಕೆ ಹೋಯಿತು. ಅರಳಿದ ಕಣ್ಣುಗಳು ಬಾಡಿದವು.... "ಕ್ಷಮಿಸಿ ! ಗುರುತು ತಪ್ಪಿತು ! ತಮ್ಮನ್ನು ನಾನು ಬೇರೊಬ್ಬರು ಅಂತಾ ತಿಳಿದುಕೊಂಡುಬಿಟ್ಟೆ !" ಎಂದು ಹೇಳುತ್ತ, ನಾಚಿ ತಲೆತಗ್ಗಿಸಿ ಅವರು ಹಿಂದಕ್ಕೆ ನಡೆದರು.

ನಾನು ನನ್ನ ದಾರಿ ಹಿಡಿದೆ. ಅವನ ಮೇಲೆ ನನಗೆ ಕೋಪ ಬರಲಿಲ್ಲ. ಏಕೆಂದರೆ, ಇಂಥ ಅನುಭವ ನನಗೆ ಇದು ವರೆಗೆ ನೂರಾರು ಆಗಿವೆ. ನನ್ನ ಬೆನ್ನಿಗೆ ಏನೋ ಒಂದು ರೀತಿಯ ವಿಶೇಷ ಗುಣವಿದೆ. ಅದನ್ನು ಕಂಡು, ಅನೇಕರು ಮೋಸಹೋಗಿದ್ದಾರೆ. ಅದರ ಅಗಲ, ದಪ್ಪನೆ, ಬಾಗು, ಬಿಗಿ, ಅದರ ಮೇಲೆ ನನ್ನ ತಲೆ ಬುರುಡೆ ಪ್ರತಿಷ್ಠಿತವಾಗಿರುವ ಭಂಗಿ, ಅದರಡಿಯ್ಲೆ ಸಹಜವೆ ಬೆಳೆದಿರುವ ನನ್ನ ಕತ್ತಿನ ಉದ್ದ, ಸುತ್ತಳತೆ, ಬಳುಕು, ಬಿಂಕ, ಅಲ್ಲದೆ, ನನ್ನ ನಡಿಗೆಯ ಠೀವಿ, ಠೇಂಕಾರ, ಅದರ ಒಯ್ಯಾರ, ಇವೆಲ್ಲದರ ಮೂಲಕ ಕರ್ನಾಟಕದ ಒಳಗೂ ಹೊರಗೂ ಎಲ್ಲ ಊರುಗಳಲ್ಲೂ ಜನ ನನ್ನನ್ನು ಬೇರೊಬ್ಬನೆಂದು ಗುರುತಿಸಿ ಮೋಸಹೋಗಿದ್ದಾರೆ. ನಸುಕಿನಲ್ಲಿ ಮಾತ್ರವೇ ಅಲ್ಲ, ಉರಿ ಹಗಲಲ್ಲೂ ಮೋಸ ಹೋಗಿದ್ದಾರೆ; ನಿಬಿಡ ಸ್ಥಳಗಳಲ್ಲಿ ಮಾತ್ರವಲ್ಲ, ನಿರ್ಜನ ಪ್ರದೇಶಗಳಲ್ಲೂ ಕೂಡ. ಆದರೆ, ಒಂದು ಸೋಜಿಗ. ನನ್ನೆದುರು, ನನಗಭಿಮುಖವಾಗಿ ಬರುವವರೊಬ್ಬರೂ ನನ್ನನ್ನು ಬೇರೆ ಹೆಸರಿನವನೆಂದು ತಿಳಿಯುವುದೇ ಇಲ್ಲ. ನನ್ನ ಹಣೆ, ಮುಖ, ಮೂಗು ಎದೆ ಮುಂತಾದ ಮುಂಭಾಗಕ್ಕೆ ಒಂದು ವ್ಯಕ್ತಿತ್ವ, ಒಂದು ವೈಶಿಷ್ಟ್ಯ ಇದೆ ! ಅದು ನನ್ನದೇ ಅದ, ಬೇರೊಬ್ಬರಿಗೂ ಇಲ್ಲದ ರೂಪರೇಖೆಗಳಿಂದ ವಿರಾಜಿಸುತ್ತಿದೆ. ನನ್ನನ್ನು ಮುಖಾಮುಖಿ ನೋಡುವವರಿಗೆಲ್ಲ ನಾನು ನಾನೇ !... ನನ್ನನ್ನು ಹಿಂಬಾಲಿಸುವವರಿಗೆ ಮಾತ್ರ ನಾನು ಅವರವರ ಕಲ್ಪನಾಶಕ್ತಿಯಂತೆ, ಬೇರೆ ಬೇರೆ ವ್ಯಕ್ತಿಯಾಗಿ ಕಾಣುತ್ತೇನೆ. ಇದು ನನ್ನ ದೌರ್ಭಾಗ್ಯ; ನನ್ನದೇ ಅದ ನನ್ನತನ.

"ಸ್ವಾಮಿ !", "ಸಾರ್", "ರೀ", "ಲೋ", "ಏ, ಅಪಾ", "ಏ ಅಣ್ಣ", "ಏಂತುಕೊಳ್ಳ", "ಹಲೋ !", "ಹೇ",— ಎಂಬ ಬಗೆಬಗೆಯ ಸಂಬೋಧನಪದಗಳನ್ನೆಸೆದು ಜನ ನನ್ನನ್ನು ಕೂಗಿ ನಿಲ್ಲಿಸಿದಾರೆ. ಹಿಂತು, ಹಾಗೆ ಕರೆದವರನ್ನು ನಾನು ತಿರುಗಿ ನೋಡುವುದೇ ತಡ, ಅವರು ಪೆಚ್ಚಾಗಿ, ಜೋಲು ಬಿದ್ದು, ಮುಖಕ ಕ್ಷಮಾಪಣೆ ಕೇಳಿ ತಪ್ಪಿಸಿಕೊಳ್ಳುವರು. ಬೆನ್ನೇ ಇಲ್ಲದೆ ನಾನು ದ್ವಿಮುಖನಾಗಿ ಹುಟ್ಟಿದ್ದರೆ, ಪಶ್ಚಾತ್ತಾಪಗುತ್ತಿರುವ ಈ ಕಾಟ ತಪ್ಪುತಿದಲ್ಲಾ, ಎಂದು ಅನೇಕ ಸಾರಿ ನನಗೆ ಅನ್ನಿಸಿದೆ. ಆದರೇನು ಮಾಡುವುದು ? ಅನಕ್ಷನೆಂದುಕೊಳ್ಳುವ್ಯಾ ! ಅವರೂ ಅಷ್ಟೆ; ನಾನೂ ಅಷ್ಟೆ !

ಧಾರವಾಡದಲ್ಲಿ ನನ್ನನ್ನು ಹಿಂಬಾಲಿಸಿದ ಮಹನೀಯರು ಬೇಗ ಪಕ್ಕಕ್ಕೆ ಪಲಾಯನ ಮಾಡಿದರು. ಅವರೇ ಅನೇಕರು ಹಾಗೆ ಮಾಡುವುದಿಲ್ಲ. ಅವರಿಗೆ ಆಶಾಭಂಗ ಉಂಟುಮಾಡಿದ್ದಕ್ಕೆ, ಅವರು ನನ್ನ ಮೇಲೆ ರೇಗಾಡುವರು. "ಇದ್ಯಾಕ್ರಿ ಹಿಂಗಾಡ್ತೀರಿ! ಹಿಂದೊಂದು ಮುಂದೊಂದು, ಬಿಟಾಟಿಕೆ ಮಾಡಿ ಅಡ ಜೇಡ್ರಿ" ಎಂದು ಕೋಪಕಾರುವರು. ನನ್ನ ಗ್ರಹಚಾರವನ್ನೇ ಶಪಿಸುತ್ತ ನಾನು ಕಾಲಿಗೆ ಬುದ್ಧಿ ಹೇಳುವೆ. ಯಾರಾದರೂ ಹಿಂದೆ ಬಂದು ನನ್ನನ್ನು ಬೇರೊಬ್ಬನೆಂದೆಣಿಸಿ, ಅವರಿಗೆ ಸಲ್ಲಿಸಬೇಕಾದ ಪೂಜೆಯನ್ನು ನನಗರ್ಪಿಸಿ ಎರಡು ಬಾರಿಸಿದರೆ, ಗತಿ ಏನಪ್ಪಾ, ಎಂದು ಹೆದರುವೆ.

ಎಂಟು ಹತ್ತು ಬಾರಿ, ನಾನು ನನ್ನ ಸಂಬೋಧಕರನ್ನು ಮಾತನಾಡಿಸಿದ್ದೂ ಉಂಟು. "ಚಿಂತೆ ಇಲ್ಲ! ನೀವೆಣಿಸಿದ ವ್ಯಕ್ತಿ ಅಲ್ಲದಿದ್ದರೂ ನಾನೂ ಒಬ್ಬ ವ್ಯಕ್ತಿ; ಸಂಸಾರಿ; ಮಕ್ಕಳೊಂದಿಗ; ತಾವು ನನ್ನನ್ನು ಯಾರು ಅಂತ ತಿಳಿದಿರಿ?" ಎಂದು ಕೇಳಿದ್ದೇನೆ. ಆಗ, ನನಗೆ ಬಗೆ ಬಗೆಯ ಉತ್ತರಗಳು ಸಿಕ್ಕಿವೆ. ಚಿತ್ರದುರ್ಗದ ಒಬ್ಬರು ವರ್ತಕರು ನನ್ನನ್ನು ಬಸ್ ಮಾಲಿಕರೆಂದು ಬಗೆದರಂತೆ; ಜ್ಯಾಡ್ಗಿಯಲ್ಲಿ ಮತ್ತೊಬ್ಬರಿಗೆ ನಾನು ಸ್ಟೇಷನ್ ಮಾಸ್ತರಾಗಿ ಕಂಡೆ; ಮೈಸೂರಲ್ಲಿ ಅರಸುಗಳೊಬ್ಬರು ನನ್ನನ್ನು ಅಕ್ಕಸಾಲಿಗನೆಂದು ಮೋಸಹೋದರು; ಅನೇಕರು ನನ್ನನ್ನು ತಮಗೆ ಸಾಲ ಹಿಂದಕ್ಕೆ ಕೊಡಬೇಕಾದ ತಮ್ಮ ಹಳೆಯ ಗೆಳೆಯನೆಂದು ಭಾವಿಸಿದ್ದರು. ತಾವು ಸಾಲ ಹಿಂದಕ್ಕೆ ಮುಟ್ಟಿಸಿ ತೀರಿಸಬೇಕಾದ ಸಾಹುಕಾರ ಎಂದು ಒಬ್ಬರೂ ನನ್ನನ್ನು ತಿಳಿದುಕೊಳ್ಳದೆ ಇದ್ದುದೇ ಆಶ್ಚರ್ಯ.

ಬೆನ್ನ ವೈವಿಧ್ಯದಿಂದ ನನಗೆ ಹೆಚ್ಚು ತೊಂದರೆಯಾಗುತ್ತಿರುವುದು ಬಸ್ ಪ್ರಯಾಣದಲ್ಲಿ! ನನ್ನ ಹಿಂದಿನ ಸೀಟದಲ್ಲಿ ಮಂಡಿಸಿರುವ ಮಹಾಜನಗಳ ಪೈಕಿ, ಪ್ರತಿ ಬಸ್‌ನಲ್ಲೂ ಒಬ್ಬಿಬ್ಬರು ನನ್ನನ್ನು "ಓ ಹೋ ಹೊ! ತಿಮ್ಮಣ್ಣಯ್ಯನವರು ಎಲ್ಲಿಗೆ ಹೊರಟಿರಿ?" ಎಂದು ಮುಂತಾಗಿ ಮಾತು ತೆಗೆದು, ಆ ಉತ್ಸಾಹದಲ್ಲಿ ಸಲಿಗೆಯಿಂದ ಬೆನ್ನ ಮೇಲೆ ಬಲವಾಗಿ ಗುದ್ದಿದ್ದೂ ಉಂಟು. ಸರಕ್ಕನೆ ನಾನು ಹಿಂತಿರುಗುವಾಗ ಅವರ ಮುಖದಲ್ಲಿ ಆಶ್ಚರ್ಯವೂ ನಿರಾಶೆಯೂ ಒಮ್ಮೆಲೆ ಮೂಡುವದನ್ನು ನಾನು ನೂರಾರು ಭಾರಿ ಕಂಡಿದ್ದೇನೆ. ಇಂಥ ಅನಾಹುತಗಳನ್ನು ತಪ್ಪಿಸುವದಕ್ಕಾಗಿ ನಾನು ಮೊದಲೇ ಕುಳಿತ ಕಡೆಯಿಂದ ಎದ್ದು, ಇಡೀ ಬಸ್ಸನ್ನು ಒಂದು ಸಲ ಅವಲೋಕಿಸಿ, ಎಲ್ಲರಿಗೂ ನನ್ನ ಮುಖವನ್ನು ತೋರಿಸಿ, ಮತ್ತೆ ಕುಳಿತುಕೊಳ್ಳುವ ಅಭ್ಯಾಸ ಇಟ್ಟುಕೊಂಡಿದೇನೆ. ಆದರೂ ನಡುವೆ ಬಸ್ ಹತ್ತಿದವ ಯಾವನಾದರೂ ಒಬ್ಬ "ಅಲ್ಲಿ ನೋಡಿರಿ ! ನಮ್ಮ ಪಟೇಲರು ಮುಂದಿನ ಸೀಟ್‌ನಲ್ಲಿ ತೆಪ್ಪಗೆ ಕೂತಿರೋದನ್ನ .. ತುಟಿಪಿಟಕೆನ್ನದೆ!" ಎಂದು ಕೂಗೇ ಕೂಗುತ್ತಾನೆ; ಪೆಟ್ಟು ತಿಂದೇ ತಿನ್ನುತ್ತಾನೆ !

ನನಗೆ ಹೆಚ್ಚು ವ್ಯಥೆಯನ್ನು ಕೊಡುವ ಅಂಶವೇನಂದರೆ, ಇದುವರೆಗೂ ನನ್ನನ್ನು ಯಾರೂ ಗಣ್ಯವ್ಯಕ್ತಿಗಳಾದ ಮಂತ್ರಿ, ಕಲೆಕ್ಟರ, ಪೋಲೀಸ ಇನಸ್ಪೆಕ್ಟರ, ರೇಷನಿಂಗ ಅಫೀಸರ್, ಅಡ್ವೋಕೇಟ್ ಇತ್ಯಾದಿಯೆಂದು ಮೋಸಹೋಗಿಯೇ ಇಲ್ಲ. ಏಟು ತಿಂದರೂ ಉಂಗುರ ಧರಿಸಿರುವ ಕೈಯಿಂದಾದರೆ, ತಿಂದವನೂ ತುಸು ತೇಗುತ್ತಾನೆ. "ಕ್ಷಮಿಸಿ ! ತಮ್ಮನ್ನು ನಾನು ನಮ್ಮೂರ ಸೇಂದೀ ಕಂಟ್ರಾಕ್ಟರು ಅಂತ ತಿಳಿದೆ" ಎಂದು ಒಬ್ಬರು ನಮ್ಮನ್ನು ನಡುರಸ್ತೆಯಲ್ಲಿ ನಿಲ್ಲಿಸಿಕೊಂಡು ಹೇಳಿದರೆ, ಅಂದು ನಿದ್ರೆ ಹೇಗೆ ಬರುತ್ತೆ ? ಊಟ ಹೇಗೆ ಸೇರುತ್ತೆ ? ನಿಜವಾದ ಮಂತ್ರಿಗಳಾಗಲು ಹಣೆಯಲ್ಲಿ ದೇವರು ಬರೆಯಲಿಲ್ಲ. ಹೋಗಲಿ, ಅಪ್ಪಿ ತಪ್ಪಿ ಒಬ್ಬನ ಮೆಳ್ಳಗಣ್ಣಿಗಾದರೂ ಹಾಳು ಬೆನ್ನು, ಮಂತ್ರಿ ಬೆನ್ನ ಹಾಗೆ ಕಾಣಸಬಾರದೆ ? ಊಹೂಂ! ಅಗಲಕ್ಕೇನೂ ಕಡಿಮೆ ಇಲ್ಲ, ಹಾಳಾದ್ದಕ್ಕೆ! ಇಡೀ ಪ್ರಾಂತದ ಭಾರವನ್ನೆಲ್ಲ ಹೇರಿದರೂ ಹೊರುವಷ್ಟು ಅಗಲ ಇದೆ, ಧಡೂತಿ ಇದೆ; ಭುಜಬಲವಿದೆ, ಪರಾಕ್ರಮ ಕಡಮೆಯಾದರೂ ಆದರೂ ಅವಲಕ್ಷಣದ ಜಾತಕ, ಪ್ರತಿಷ್ಠಾವಂತರಾದ ಒಬ್ಬರ ಬೆನ್ನ ಸಾಮ್ಯವೂ ಇಲ್ಲ, ಅದಕ್ಕೆ.

ಒಬ್ಬ ಮಾತ್ರ, ಒಂದೇ ಒಂದುದಿನ ಮಾತ್ರ, ಬಳ್ಳಾರಿಯಲ್ಲಿ, ಹಿಂದಿನಿಂದ ಚಪ್ಪಾಳೆ ತಟ್ಟಿ 'ಸ್ವಾಮಿ!' ಅಂತ ಕೂಗಿ, ತಕ್ಷಣವೇ ನನ್ನ ಬೆನ್ನ ಹಿಂದೆ ಕನ್ನಡ ಕವಿಗಳೊಬ್ಬರ ಹೆಸರನ್ನು ಎತ್ತಿದ. ನಾನು ದಿರದಿರನೆ ಮುಂದಕ್ಕೆ ನಡೆದೆ, ಇನ್ನೂ ಎರಡುಮೂರು ಬಾರಿಯಾದರೂ ಅತ ಆ ಕವಿಯ ಹೆಸರನ್ನು ಹೇಳಿ ಅಪ್ಪಾನಿಸಲಿ, ಅಂತ! ನನಗೆ ಪರಮಾನಂದವಾಯಿತು. "ಭಲಾ ! ನನ್ನ ಬೆನ್ನಿಗೆ ಎಂಥ ಇಂಥ ಪ್ರಖ್ಯಾತ ಕವಿಯ ಹೆಸರನ್ನು ಅಂಟಿಸುತ್ತಿರುವನಲ್ಲಾ ! ಈ ದಿನವೇ ಸುದಿನ !' ಎಂದು ಹಿಗ್ಗಿದೆ. ಕವಿ ಎಂಬ ಸ್ಥಾನ ಅಷ್ಟು ಲಾಭದಾಯಕವಲ್ಲದಿದ್ದರೂ ಕೇವಲ ಜನ ಕಲೆಕ್ಟರಿಗೆ ಮಾತ್ರ ಆ ತೆರನ ಜನರ ಪರಿಚಯ ಇರುವದಾದರೂ, ಋಷಿ ಎಂಬ ಬಿರುದಿಗೆ ಅರ್ಹರಾದ ಜಾತಿಗೆ ಸೇರಿದವರ ಆ ಹೆಸರು ನನಗೆ ಕರ್ಣರಸಾಯನವಾಗಿತ್ತು. ಕಡೆಗೆ, ಅತ ಓಡೋಡುತ್ತ, ನನ್ನ ಪಕ್ಕಕ್ಕೆ ಬಂದ. ನನ್ನ ಮುಖವನ್ನು ಅವನೆದುರು ಹಿಡಿಯದೆ ವಿಧಿ ಇಲ್ಲ ಎಂಬ ಘಟ್ಟಕ್ಕೆ ಬಂತು, ಸನ್ನಿವೇಶ. ಆಗ ಅವರು ಎಲ್ಲರಂತೆ ನಾಚಿ ತಲೆ ತಗ್ಗಿಸಿ ಪಶ್ಚಾತ್ತಾಪವನ್ನು ನುಂಗಿಕೊಂಡ. "ಕ್ಷಮಿಸಿ ! ತಮ್ಮನ್ನ ನಾನು ನಮ್ಮ ಕರ್ನಾಟಕ ಸಾಹಿತ್ಯದ ಸಿಕ್ರೆಟರಿಗಳು ಅಂತ ತಿಳಿದೆ; ತಪ್ಪಾಯ್ತು. ಬೇಂದ್ರೆಯವರು ಈ ಊರಿಗೆ ಬರುತ್ತಾರಂತಲ್ಲಾ, ಎಂದು, ಅಂತ ಪತ್ರಿಕೆಯಿಂದ ವರ್ತಮಾನ ತಿಳಿದುಕೊಳ್ಳೋಣ ಅಂತ ಕೂಗಿದೆ." ಎಂದ. ನನ್ನನ್ನೇ ತನ್ನು ಹೊತ್ತಾದರೂ ಬೇಂದ್ರೆ ಎಂದು ಮೋಸ ಹೋದನಲ್ಲಾ, ಯಾವನೋ ಒಬ್ಬ ಸಹಜೀವಿ ಎಂಬ ನನ್ನ ಸಂತೋಷ, ಬೇಗನೆ ಕೊನೆಗಂಡಿತು. . . ಆಂದೂ ಬೆನ್ನು ತೋರಿಸಿದರೆ, ಭೇಸ್ತು. .. ಇತರರಿಗೆ.

"ಮಕ್ಕಳಿಗೆ ಸ್ಕೂಲ್ ಮನೇಲಲ್ವೇ"

ಲೇ:— ಎಚ್. ಎಸ್. ಮೂದಿಹಳ್ಳಿ ಬಿ. ಎ., ಬಿ. ಟಿ., ಧಾರವಾಡ)

ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಗಳನ್ನು ಕಾಣುವ ಈ ದಿನಗಳಲ್ಲಿ, ಈ ಲೇಖನದ ತಲೆಬರಹದಲ್ಲಿ ಅಡಕವಾಗಿರುವ ತತ್ವವು ಪ್ರತಿಯೊಬ್ಬ ಪಾಲಕನಿಗೂ ತಿಳಿಯತಕ್ಕ ವಿಷಯವಾಗಿದೆ. ಮೇಲಿನ ವಾಕ್ಯವನ್ನು ಕೆಲವು ಕಾಲದ ಹಿಂದೆ, ಕೈ. ಕೈಲಾಸಂರವರು, ಒಂದು ನಾಟಕ ಬರೆದು ಜನತೆಯ ಅವಗಾಹನೆಗೆ ತಂದುಕೊಟ್ಟರು. ಮಕ್ಕಳ ಶಿಕ್ಷಣವು ಶೈಶವಾವಸ್ಥೆಯಿಂದಲೇ ಕೊಡಲು ಪ್ರಾರಂಭವಾಗುತ್ತದೆಂದು ಇದರ ತಾತ್ಪರ್ಯ. ಶಾಲೆಗಳು ಮಗುವಿನ ಶಿಕ್ಷಣದಲ್ಲಿ ಕೆಲವು ಕಾಲಾವಧಿಯನ್ನು ಮಾತ್ರ ಹಿಡಿಯುವವು.

ಈಗಿನ ಕುಟುಂಬಗಳು

ಮಗುವು ಜನಿಸಿ ಜಗತ್ತಿನ ಬೆಳಕನ್ನು ಕಾಣುತ್ತಲೆ, ತಾಯಿಯು ಅದಕ್ಕೆ ಪ್ರಥಮ ಪರಿಚಯಿದವಳು. ತಂದೆ, ತಾಯಿ, ಅಣ್ಣ, ತಮ್ಮ ಮತ್ತೆ ಬೇರೆ ಬಳಗದವರಿಂದ ಕೂಡಿದ ಕುಟುಂಬವೇ ಮಗುವಿಗೆ ಪ್ರಥಮ ಪಾಠಶಾಲೆಯಾಗುವದು. "ಮೂರು ವರ್ಷದ ಬುದ್ಧಿ ನೂರು ವರ್ಷಗಳ ತನಕ" ಎಂಬ ನಾಣ್ಣುಡಿಯು ಈ ಅವಧಿಯ ಮಹತ್ವವನ್ನು ಬಿಚ್ಚಿ ಹೇಳುತ್ತದೆ. ಚಿಕ್ಕ ಮಕ್ಕಳು ಬೆಳೆದು ಪರಿಪುಷ್ಟವಾಗಲು ಅವಕ್ಕೆ ಸಾಕಷ್ಟು ಪರಿಪೋಷಕವಾಗುವಂಥ ಆಹಾರವು ಬೇಕು. ಇವುಗಳಲ್ಲಿ ಹಾಲು ಅತಿ ಮಹತ್ವದ ಆಹಾರವಾಗಿದೆ. ಹಾಲು ಅಥವಾ ಅದರಿಂದಾಗುವ ಪದಾರ್ಥಗಳನ್ನು ಹುಡುಗರಿಗೆ ಸಾಕಷ್ಟು ಸೇವಿಸಲು ಕೊಡಬೇಕು. ಆದರೆ, ಏರಿಕೆಯ ಬೆಲೆಯ ಈ ದಿನಗಳಲ್ಲಿ ಇದನ್ನು ಪೂರೈಸಲು ಸಾಮಾನ್ಯ ಕುಟುಂಬಗಳಿಗೆ ಸಾಧ್ಯವೆ? ಈ ರೀತಿಯಲ್ಲಿ ಅಪರಿಪೋಷಿತ ಅಂಗಾಂಗಗಳಿಂದ ಕೂಡಿದವರಾಗಿ ಬಾಲಕರು ಶಾಲೆಯನ್ನು ಸೇರಿ ಅಧ್ಯಯನವನ್ನು ಪ್ರಾರಂಭಿಸುವರು. ಇದೇ ಕಾರಣದಿಂದ ಬಲವಿಲ್ಲದ ಮನಸ್ಸಿನ ಹುಡುಗರು ಯಾವ ವಿದ್ಯೆಯನ್ನೂ ಗ್ರಹಿಸದೆ ಹೋಗುವರು. ಆದುದರಿಂದ ಹೆತ್ತವರು ಭಾವೀ ಪೀಳಿಗೆಯನ್ನು ಸುದೃಢವಾಗಿ ಮಾಡುವದಕ್ಕಾಗಿ ಮಕ್ಕಳ ಆಹಾರದ ವಿಷಯವನ್ನು ಗಮನಿಸಬೇಕು.

ಮಗುವಿನ ಭಾವನಾ - ಪೋಷಣೆ

ಚಿಕ್ಕಂದಿನಲ್ಲಿ ಮಕ್ಕಳಿಗೆ ಅಂಟಿಕೊಂಡ ಭಾವನೆಯೇ ದಿನಗಳು ಕಳೆದಂತೆ ಬೆಳೆಯುತ್ತ ಹೋಗುತ್ತದೆ. ಪ್ರತಿಯೊಂದು ಕುಟುಂಬದಲ್ಲಿಯು ಚಿಕ್ಕ ಮಕ್ಕಳು ತಮ್ಮದೇ ಅದ ವಿಶಿಷ್ಟತೆ, ವೈಚಿತ್ರ್ಯಗಳನ್ನು ತೋರಿಸುವದರ ಹಿನ್ನೆಲೆಯಾದರೂ ಇದೇ ಆಗಿದೆ. ತಂದೆ-ತಾಯಿಯರ ನಡಾವಳಿ, ಮನೆಗೆ ಬರು-ಹೋಗುವವರ ನಡಾವಳಿ, ನೆರೆ-ಹೊರಿಕೆಯ ಸಂದರ್ಭಗಳು ಮಕ್ಕಳ ಮನಸ್ಸಿನಲ್ಲಿ ಎಂದೂ ಅಳಿಸದ ಕಲ್ಪನೆಗಳನ್ನು ಒಡಮೂಡಿಸುತ್ತವೆ. ಮಲತಾಯಿಯ ಮತ್ಸರ, ವ್ಯಸನಿ ತಂದೆಯ ಅನಾದರ, ಬಂಧುಬಳಗದವರ ದ್ವೇಷ, ಅವಹೇಲನಗಳು ಮಕ್ಕಳಿಗೆ ಗೊತ್ತಾಗದಂತೆ ಅವರ ಮನಸ್ಸಿನ ಮೇಲೆ ಪರಿಣಾಮವನ್ನುಂಟು ಮಾಡುತ್ತವೆ. ಈ ರೀತಿಯ ಅಸಾಮಾಜಿಕ ಭಾವನೆಗಳ ಪರಿಣಾಮವಾಗದಂತೆ ನೋಡಿಕೊಳ್ಳುವದು ಜಾಣ ತಾಯಿ-ತಂದೆಗಳ ಕರ್ತವ್ಯವಾಗಿದೆ.

ನಮ್ಮ ಸಮಾಜದಲ್ಲಿ ಎಷ್ಟೋ ಜನರು ತಮ್ಮ ಮಕ್ಕಳ ವಿಷಯವಾಗಿ ಅಪ್ರೀತಿಯನ್ನು ತಳೆದಿರುವರು, ಅಥವಾ ಅತಿಪ್ರೀತಿಯನ್ನು ಸುರಿಸುವರು. ಅತಿ ಅಚ್ಚೆ ಮಾಡಿ ಮಕ್ಕಳನ್ನು ದುರ್ಮಾರ್ಗಕ್ಕೆ ಹಚ್ಚಿದ ತಂದೆಯನ್ನು ಕಾಣಬಹುದು. ಅಪ್ರೀತಿಯಿಂದ ಮಕ್ಕಳನ್ನು ದ್ವೇಷದ ಮಟ್ಟಕ್ಕೆ ತಂದಿಟ್ಟ ತಂದೆ-ತಾಯಿಗಳೂ ವಿರಲವಲ್ಲ. ತನ್ನ ಮನಸ್ಸಿಗೆ ತೃಪ್ತಿಯಾಗುವಂತೆ ವಾತ್ಸಲ್ಯ ತೋರಿಸಲು ಮಗುವಿಗೆ ಅನುವುಗೊಡುವದೇ ತಾಯಿ-ತಂದೆಗಳ ಕೆಲಸವಾಗಿದೆ. ತಾಯಿಯು ಸ್ತನಪಾನ ಮಾಡುವಾಗ ಆಗುವ ಮಗುವಿನ ಮನೋಭಾವವನ್ನು ಇಲ್ಲಿ ಉದಾಹರಣೆಗಾಗಿ ಹೇಳಬಹುದು. ಈ ವೇಳೆಯಲ್ಲಿ ಅದು ತಾಯಿಯನ್ನೆ ನುಂಗುವಂತೆ ಬಾಯಿಯನ್ನು ಅಡ್ಡಗಲವಾಗಿ ತೆಗೆಯಬಹುದು. ಇದನ್ನು ಯಾವದೇ ರೀತಿಯಿಂದ ಅಲ್ಲಗಳೆದಾಗ ಮಾತ್ರ ಮಗುವಿಗೆ ಅಳುವು ಬರುವದು.

ಬಾಲಕನು ತೀರ ಚಿಕ್ಕವನಿರುವಾಗ ಅಸಹಾಯ ಸ್ಥಿತಿಯಲ್ಲಿರುವನಲ್ಲವೆ ? ನ್ನ ಸುರಕ್ಷಿತತೆಗೆ ಯಾವದೇ ತರದಿಂದ ಧಕ್ಕೆ ಬಂದಲ್ಲಿ, "ಅಮ್ಮಾ" ಎಂಬ ಕೂಗು ಅವನ ಬಾಯಿಂದ ತಟ್ಟನೆ ಹೊರಬೀಳುವದು. ಈ ಭಾವನೆಯ ವಿಷಯವಾಗಿ ತಾಯಿಯು ಮಾತ್ರ ಬಹಳ ಜಾಗರೂಕಳಾಗಿರಬೇಕು. ಈ ಭಾವನೆಯಿಂದ ಬಾಲಕರಲ್ಲಿ ಶೌರ್ಯ ಧೈರ್ಯಾದಿ ಗುಣಗಳು ಹುಟ್ಟುವವು. ಆದ್ದರಿಂದ ತಾಯಿಯು ಮಗುವನ್ನು ಅಂಜಿಸುವದು, ಕತ್ತಲೆ ಕೋಣೆಯಲ್ಲಿ ಹಾಕುವುದು ಮುತ್ತಾವುದೇ ರೀತಿಯಿಂದ ಮಗುವನ್ನು ಹೆದರಿಸುವದು ತಿಲಮಾತ್ರವೂ ಯೋಗ್ಯವಲ್ಲ.

ಮಕ್ಕಳಿದ್ದ ಮನೆಗಳಲ್ಲಿ, ಅವರ ಗೊಂದಲವೇನೂ ಅರಿಯದ ವಿಷಯವಲ್ಲ. ಅದರೆ ತಾವು ಮಾಡಿದ ಪ್ರತಿಯೊಂದು ಕೃತಿಯೂ ಹಿರಿಯರಿಂದ ಮನ್ನಣೆ ಪಡೆಯಬೇಕೆಂದು ಅವರು ತವಕಬಡುತ್ತಾರೆ. ಕೆಲವು ಪಾಲಕರು ತಮ್ಮ ಹುಡುಗರನ್ನು ಪ್ರತಿಯೊಂದು ಕಾರ್ಯದಲ್ಲಿಯೂ ಹೊಗಳುವದುಂಟು. ಮತ್ತೆ ಕೆಲವರು ಮಕ್ಕಳ ಕೃತಿಯು ಎಷ್ಟೇ ಶ್ರೇಷ್ಠವಿದ್ದರೂ ಅದಕ್ಕೆ ಎಳ್ಳಷ್ಟು ಪ್ರೋತ್ಸಾಹನೆಯನ್ನು ಕೊಡುವದಿಲ್ಲ. ಇವೆರಡರ ಮಧ್ಯಾಂತರದಲ್ಲಿದ್ದು, ಪಾಲಕರು ತಮ್ಮ ಮಗುಗಳಿಗೆ ಯೋಗ್ಯ ಮತ್ತು ಸಾಕಷ್ಟು ಪ್ರೋತ್ಸಾಹನೆ ಕೊಡುವದು ಉಚಿತ.

ಕಲ್ಪನೆಯ ರಾಜ್ಯ

ಕೊನೆಯದಾಗಿ, ಮಕ್ಕಳಿಗೆ ಆಟದ ಪ್ರವೃತ್ತಿಯು ಬಹಳ ಬಲವತ್ತರವಿರುತ್ತದೆ. ಮಗುವು ಬೆಳೆದಂತೆ, ಕಳ್ಳನ ಆಟ, ಅಂಗಡಿಯ ಆಟಗಳು ಅವರ ದಿನದ ಕೆಲಸಗಳಾಗುತ್ತವೆ. ಇವೆಲ್ಲದರ ಹಿನ್ನೆಲೆಯೆಂದರೆ, ಮಕ್ಕಳ ಮನಸ್ಸು 'ಮನೋರಾಜ್ಯ' ದಿಂದ ಕೂಡಿದ್ದು. ವಾಸ್ತವತೆಯ ಚೌಕಟ್ಟನ್ನು ದಾಟಿ, ಅವರ ಮನಸ್ಸು ಕೆಲ ಕಾಲ ಅವರವೇ ಆದ ಮನೋರಾಜ್ಯದಲ್ಲಿ ವಿಹರಿಸುವದು, ಆನಂದಬಡುವದು. ಈ ವಿಷಯದಲ್ಲಿಯೂ ತಾಯಿತಂದೆಗಳು ಬಹಳಜಾಗರೂಕರಾಗಿರಬೇಕು. ಮಕ್ಕಳ ಆಟಗಳನ್ನು ತಡೆಗಟ್ಟಿ ಅವರ ಆಟಿಗೆಗಳನ್ನು ಬೀದಿಗೆಸೆಯುವ ತಂದೆ-ತಾಯಿಯರು ವಿರಲವಲ್ಲ. ಹೀಗೆ ಮಾಡುವದರಿಂದ ಅವರ ಮನಸ್ಸಿನ ಮೇಲೆ ಬಲವಾದ ಆಘಾತವಾಗುವದು. ಅಲ್ಲದೆ ಅವರ ಕಲ್ಪನಾಶಕ್ತಿಯು ದಿನೇ ದಿನೇ ಕುಗ್ಗಹತ್ತುವದು. ಕಾಲಗತಿಯಲ್ಲಿ, ಜಾಣನಾದ ಪಾಲಕನು ತನ್ನ ಮಗುವಿಗೆ ಸಕ್ಕದ ಚೌಕಟ್ಟಿನ ಅರಿವನ್ನು ತಂದು ಕೊಡಹತ್ತುವನು.


ಮೇಲೆ ಹೇಳಿದ ವಿಷಯಗಳಿಗಾಗಿ ಪಾಲಕರು ಹೆಚ್ಚು ಗಮನ ಕೊಟ್ಟಲ್ಲಿ, ಶಾಲೆಯಲ್ಲಿ ಶಿಕ್ಷಕರ ಕೆಲಸವು ತಾನಾಗಿಯೇ ಹಗುರಾಗುವದು. ಈಗಿನ ದಿನಗಳಲ್ಲಿ ಬಾಲಕರ ವೈಸ್ಥಿತಿಯ ಪರೀಕ್ಷೆಯು ಸಾಧಾರಣವಾಗಿ ಎಲ್ಲ

—೧೩ನೆಯ ಪುಟಕ್ಕೆ

ದೇಶಾಂತರಗಳಿಂದ

ಪಾಲಿಸ್ತಾನದ ಕಥೆ

ಪಾಲಿಸ್ತಾನವು ಟ್ರಾನ್ಸ್‌ಜೋರ್ಡನ್ನಿನ ಪಶ್ಚಿಮಕ್ಕಿದೆ. ಅದರ ವಿಸ್ತಾರ ೧೦,೪೩೦ ಚದುರ ಮೈಲು; ಜನಸಂಖ್ಯೆ ೧೭,೩೯,೦೦೦; ಅದರಲ್ಲಿ ಯೆಹೂದಿಗಳು ೬ ಲಕ್ಷ ಇದ್ದಾರೆ. ೧೯೧೭ ರಲ್ಲಿ ತುರ್ಕಿಯ ಆಧಿಪತ್ಯದಿಂದ ಪಾಲಿಸ್ತಾನ ಮುಕ್ತವಾದಾಗ ಒಟ್ಟು ೭॥ ಲಕ್ಷ ಜನರು ಅಲ್ಲಿ ವಾಸವಾಗಿದ್ದರು; ಅವರಲ್ಲಿ ಕೇವಲ ೧೦ ಸಾವಿರ ಯೆಹೂದಿಗಳಿದ್ದರು. ಆಗ ಲೀಗ್ ಆಫ್ ನೇಶನ್ಸಿನವರು ಪಾಲಿಸ್ತಾನದ ಆಡಳಿತೆಯನ್ನು ಬ್ರಿಟಿಶರಿಗೆ ಒಪ್ಪಿಸಿದರು. ಆಗಲೇ ಬಾಲ್ಫರ್ ಘೋಷಣೆಯಾಗಿ ಅದರಲ್ಲಿ ಪಾಲಿಸ್ತಾನದಲ್ಲಿ ಮಾತೃಭೂಮಿಯನ್ನು ಕೊಡುವದಾಗಿ ಯೆಹೂದಿಗಳಿಗೆ ವಚನ ಸಿಕ್ಕಿತು. ಬ್ರಿಟಿಶರು ಯೆಹೂದಿಗಳಿಗೆ ಅಲ್ಲಿ ವಸತಿ ನಿಲ್ಲಲು ಅವಕಾಶ ಕೊಟ್ಟರೂ ಅವರಿಗಿಂತ ಹೆಚ್ಚು ಸಂಖ್ಯೆ



ಅಮೇರಿಕದ ಪ್ರಾತಿನಿಧ್ಯ ವಹಿಸಿ ಬರ್ಲಿನ್ ಬಿಕ್ಕಟ್ಟನ್ನು ಬಿಡಿಸಲು ಸಂಧಾನ ನಡೆಸುತ್ತಿರುವ ಜನರಲ್ ಬಾಡಿ ಸ್ಮಿತ್.

ಯಲ್ಲಿ ಅರಬರು ಬಂದಿರಲು ಅನುಕೂಲಮಾಡಿ ಕೊಟ್ಟರು. ಆದರಿಂದಲೇ ೧೯೧೬ ರಲ್ಲಿ ೬ ಲಕ್ಷವಿದ್ದ ಅರಬರು ಈಗ ೧೧ ಲಕ್ಷಕ್ಕೆ ಏರಿದ್ದಾರೆ.

ಅಮೇರಿಕ, ಬ್ರಿಟನ್ ಮತ್ತು ರಶಿಯಂಗಳು ಮಧ್ಯ ಪ್ರಾಚ್ಯದಲ್ಲಿ ತಮಗಿರುವ ಔದ್ಯಮಿಕ ಸೌಕರ್ಯಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಪಾಲಿಸ್ತಾನದ ಪ್ರಶ್ನೆಯನ್ನು ಬಿಡಿಸಹೊರಟದ್ದು ರಾಜನೀತಿಯ ಅಲ್ಪ ಪರಿಚಯ ಉಳ್ಳವರಿಗೂ ಹೊಳೆದಿರಬಹುದಾದ ಸಂಗತಿ. ಅರೇಬಿಯದ ಎಣ್ಣೆ ಅಮೇರಿಕಕ್ಕೆ ಬೇಕು; ಮಧ್ಯಪ್ರಾಚ್ಯದ ಎಣ್ಣೆಗಣಿಗಳಲ್ಲಿ ಪಾಲು ತೆಗೆದುಕೊಳ್ಳುವ ರಶಿಯದ ಆಸೆಯನ್ನು ಹೊಸದಾಗಿ ಹೇಳಬೇಕಿಲ್ಲ. ಇಲ್ಲಿಯ ವರೆಗೆ ಫ್ರೆಂಚರ ಆಡಳಿತದಲ್ಲಿದ್ದ ಸಿರಿಯ ಮತ್ತು ಲಿಬನಾನುಗಳು ಮತ್ತು ಫ್ರಾನ್ಸ್ ಇವುಗಳ ನಡುವೆ ಆರ್ಥಿಕ ಸಂಬಂಧವಿರುವಾಗ, ಹೊರಗೆ ಅದಷ್ಟು ಪ್ರಭಾವವನ್ನಿಟ್ಟುಕೊಳ್ಳುವುದು ಅವಶ್ಯಕವೆಂದು ಬ್ರಿಟನ್ನು ಪಾಲಿಸ್ತಾನದಲ್ಲಿ ಆಸಕ್ತಿವಹಿಸಿದೆ; ಆದ್ದರಿಂದ ಅದು ಅರಬ ರಾಜ್ಯಗಳೊಡನೆ "ಅಧರ್ಮದ" ಕರಾರುಗಳನ್ನು ಗುಪ್ತವಾಗಿ ಮಾಡಿಕೊಂಡಿದೆ. ಟ್ರಾನ್ಸ್‌ಜೋರ್ಡನ್ನಿಗೆ ಅದು ಅಂಟಿಕೊಂಡದ್ದಂತೂ ಸುಸ್ಪಷ್ಟವಿದೆ. ಇರಾಕಿನಲ್ಲಿ ಅದರ ಎಣ್ಣೆ ಕಂಪನಿಗಳಿವೆ, ಸೂಯೆಜ ಕಾಲುವೆ ಅದರ ಹಡಗು ಪಯಣಕ್ಕೆ ಬೇಕು, ಹೈಫಾ ವಿಮಾನ ನಿಲ್ದಾಣ ಸಮರ ನೈತಿಕವಾಗಿ ಅತಿಮುಖ್ಯವೆನಿಸಿದ್ದರಿಂದ ಕೆಲ ಮಟ್ಟಿಗಾದರೂ ಅದರ ಮೇಲೆ ಹಕ್ಕಿರಬೇಕು. ಹೀಗೆ ಒಂದಲ್ಲ ಒಂದು ನೆವದಿಂದ ಪಾಶ್ಚಾತ್ಯ ರಾಷ್ಟ್ರಗಳಿಗೆ ಪಾಲಿಸ್ತಾನದ ಪ್ರಶ್ನೆಯು ಮಹತ್ವದ್ದೂ ಲಾಭಾಲಾಭ ನಿರ್ಣಾಯಕವೂ ಆಗಿದೆ.

ಸಂ. ರಾ. ಸಂಘದ ಮಧ್ಯಸ್ಥರಾದ ಕೌಂಟ್ ಬರ್ನದೊತ್ತೆಯವರು ಸೈನ್ಯೋಪಸಂಹಾರ ಮತ್ತು ನಿರಾಶ್ರಿತರ ರಕ್ಷಣೆ ಇವುಗಳ ಬಗ್ಗೆ ವಿಚಾರ ಮಾಡಲು ಅಮ್ಮಾನ್, ಜೆರೂಸಲೇಂ, ಅಲೆಕ್ಸಾಂಡ್ರಿಯ, ಹೈಫಾ ಮತ್ತು ಟೆಲ್ ಅವೀವಗಳಿಗೆ ಭೆಟ್ಟಿಕೊಡಲಿರುವ ಸುದ್ದಿಯ ಜೊತೆಗೇ ಪಾಲಿಸ್ತಾನದಲ್ಲಿಯ ಅರಬ ಪರಿಷತ್ತಿಯು ಪುನಃ ಧರ್ಮಯುದ್ಧವನ್ನು ಸಾರುವುದಾಗಿ ಹೇಳಿಕೊಟ್ಟ ಸಮಾಚಾರವೂ ಬಂದಿದೆ. ಅರಬರೂ ಯಹೂದಿಗಳೂ ತತ್ವತಃ ಜೆರೂಸಲೇಮಿನಲ್ಲಿ ನಿಃಶಸ್ತ್ರೀಕರಣಕ್ಕೆ ಒಪ್ಪಿದ್ದಾರೆಂದು ತಿಳಿದಿದೆ. ಈ ಜಗ್ಗಾಟ ಎಲ್ಲಿಯವರೆಗೆ ಹೀಗೇ ಸಾಗುವುದೋ ಹೇಳಬರದಂತಾಗಿದೆ.

ಒಲಿಂಪಿಕ್ ಪಂದ್ಯ

ಲಂಡನ್ನಿನಲ್ಲಿ ಒಲಿಂಪಿಕ್ ಪಂದ್ಯವೀಗ ಒಳ್ಳೆಯ ಹುರುಪಿನಿಂದ ಸಾಗಿದೆ. ಮೊದಲಿನ ನಾಲ್ಕು ದಿನಗಳಲ್ಲಿ ೩೦ ಲಕ್ಷ ಪ್ರೇಕ್ಷಕರು ಬಂದಿದ್ದರು. ಸ್ಪರ್ಧೆಗಿಟ್ಟ ಮುಖ್ಯವಾದ ಆಟಗಳೆಂದರೆ ಪೋಲ್‌ವಾಲ್ಟ್, ಡಿಸ್ಕಸ್‌ಥ್ರೋ, ಕುಸ್ತಿ ಈಸುವುದು (ಹೆಂಗಸರಿಗೆ ೧೦೦ ಮೀಟರ್ ದೂರ, ಗಂಡಸರಿಗೆ ೫೦೦೦ ಮೀಟರ್ ದೂರ– ಡಿಸ್ಕಸ್ ಎಸೆಯುವುದರಲ್ಲಿ).

ಕುಸ್ತಿಯ ಫ್ಲೈವೇಟ್ ಪೈಲವಾನಗಿರಿಯನ್ನು ಕಡೆಯ ಆಟದಲ್ಲಿ ಫಿನ್ಲೆಂಡಿನ ಜಟ್ಟಿಯು ಗೆದ್ದನು.

ವಾಟರ್‌ಪೋಲೋದಲ್ಲಿ ಭಾರತದ ಆಟಗಾರರು ಬಹಳ ಮುನ್ನಡೆಯನ್ನು ತೋರಿದ್ದಾರೆ. ಮೊದಲ ಸಲ ಚೈಲಿನ ಆಟಗಾರರನ್ನು ಭಾರತೀಯರು ಹಿಂದೆ ಹಾಕಿದರೂ ಡಚ್ಚರ ಮುಂದೆ ಸ್ವಲ್ಪ ಹಿಂದೇಟು ಹಾಕಬೇಕಾಯಿತು. ಒಳ್ಳೆಯ ಗೋಲ್‌ಕೀಪರ್ ಇದ್ದರೂ ಸ್ಪೆಯಿನನ್ನು ಭಾರತವು ಹಿಂದೆ ಹಾಕಬಹುದೆಂದು ಹೇಳಲಾಗುತ್ತಿದೆ.

ಆಸ್ಟ್ರೇಲಿಯನ್ನರು ರಿಲೇ ಈಸಾಟದಿಂದ ಹೆಸರನ್ನು ಹಿಂತೆಗೆದುಕೊಂಡರು. ಕಾರಣ ತಿಳಿಯದು. ಡಿಸ್ಕಸ್ ಎಸೆಯುವುದರಲ್ಲಿ ಪಾಕಿಸ್ತಾನದ ಇಬ್ಬರು ಆಟಗಾರರು ಸಾಹಸ ತೋರಿದರೂ ಅವರು ಇಟಲಿಯವರ ಮುಂದೆ ಹಿಂಜರಿಯಬೇಕಾಯಿತು.

೨೬ ಮೈಲು ಮತ್ತು ೩೮೫ ಗಜದ "ಮರಥಾನ್"ನಲ್ಲಿ ಭಾಗವಹಿಸಲು ಶಕ್ತಿ ಉಳಿಸಿಕೊಳ್ಳುವುದರ ಸಲುವಾಗಿ ಸಂಯುಕ್ತಪ್ರಾಂತದ ಜಮಾದಾರ್ ಛೋಟಾಸಿಂಗನು ೧೦ ಸಾವಿರ (೬೧ ಮೈಲು) ಮೀಟರಿನ ಓಟದ ಪಂದ್ಯದಿಂದ ಹೆಸರನ್ನು ಹಿಂತೆಗೆದುಕೊಂಡನು.

೧೦೦ ಮೀಟರಿನ (೧೦೯–೩ ಗಜ) ಹೆಂಗಸರ ಓಟದಲ್ಲಿ ಹಾಲೆಂಡಿನ ಎರಡು ಮಕ್ಕಳ ತಾಯಿಯಾದ ಶ್ರೀಮತಿ ಫ್ಯಾನಿ ಬ್ಲಾಂಕರ್ಸ್ ಕೋಯಿನಳು ಕೊನೆಯವಾಗಿ ಗೆದ್ದು ಬಂಗಾರದ ಪದಕವನ್ನು ಪಡೆದಳು.

೫ ಸಾವಿರ ಮೀಟರಿನ ಡಿಸ್ಕಸ್‌ಥ್ರೋದಲ್ಲಿ ಬೆಲ್ಜಿಯಮ್ಮಿನ ಆಟಗಾರನು ಗೆದ್ದನು. ಫುಟ್‌ಬಾಲ್ ಸಾಕ್ಕರಿನಲ್ಲಿ ಫ್ರಾನ್ಸಿನ ವಿರುದ್ಧ ಭಾರತವು ಬಹಳ ಸಾಹಸ ಪ್ರದರ್ಶನ ಮಾಡಿತು. ಆದರೂ ಕೊನೆಯ ವಿಜಯದ ಬಗ್ಗೆ ಈಗಲೇ ಏನನ್ನೂ ಹೇಳುವಂತಿಲ್ಲ. ಹಾಕಿ ಆಟದಲ್ಲಿ ಆಸ್ಟ್ರೇಲಿಯದ ವಿರುದ್ಧ ಭಾರತವು ಗೆಲವನ್ನು ಪಡೆಯಿತು. ಕಡೆಯ ಆಟದಲ್ಲಿ ಭಾರತವನ್ನು ಪಾಕಿಸ್ತಾನವು ಎದುರಿಸಲಿದೆ.

ರಶಿಯದ ಮಹತ್ವಾಕಾಂಕ್ಷೆ

ಮಾಸ್ಕೋದ ಸೋವಿಯಟ್ ವಿದೇಶ ಶಾಖೆಯ ಕಾರ್ಯಾಲಯದಲ್ಲಿ ಬ್ರಿಟನ್, ಅಮೇರಿಕ ಮತ್ತು ಫ್ರಾನ್ಸುಗಳ ಪ್ರತಿನಿಧಿಗಳು ಮೊಲಟೋವರನ್ನು ಕಂಡು ಬರ್ಲಿನ್ನಿನ ಬಿಕ್ಕಟ್ಟನ್ನು ಬಿಡಿಸಲು ಪ್ರತ್ಯೇಕವಾಗಿ ಮಾತುಕತೆ ನಡೆಸಿದರೆಂದು ತಿಳಿಯುತ್ತದೆ. ಅದರ ಫಲವಾಗಿ ಅವರಿಗೆ ಸ್ಟಾಲಿನ್ನರನ್ನು ನೋಡುವ ಅವಕಾಶ ಸಿಕ್ಕಿದೆ.

ಬರ್ಲಿನ್ನಿನಲ್ಲಿರುವ ಪಾಶ್ಚಾತ್ಯ ಅಧಿಕಾರಿಗಳು ರಶಿಯನ್ನರು ನಗರವನ್ನು ಸಂಪೂರ್ಣವಾಗಿ ಆಕ್ರಮಿಸಲು ಎಲ್ಲ ಸಿದ್ಧತೆಯನ್ನು ಮಾಡಿದ್ದಾರೆಂದು ನಂಬಿದ್ದಾರೆ!

ಬೆಲ್‌ಗ್ರೇಡಿನಲ್ಲಿ ಈ ಸಂಬಂಧದಲ್ಲಿ ನಡೆವ ಪರಿಷತ್ತಿಗೆ ಮಹಾರಾಷ್ಟ್ರ ಚತುಷ್ಟಯ, ಡ್ಯಾನ್ಯೂಬ್ ರಾಜ್ಯಗಳಾದ ಬಲ್ಗೇರಿಯ, ಯುಕ್ರೇನ್, ರುಮೇನಿಯ, ಯುಗೋಸ್ಲೇವಿಯ, ಹಂಗರಿ ಮತ್ತು ಜೆಕೊಸ್ಲೋವೇಕಿಯಗಳ ಪ್ರತಿನಿಧಿಗಳು ಹೋಗಿದ್ದಾರೆ. ಡ್ಯಾನ್ಯೂಬ್ ನದಿಯಲ್ಲಿ ಹಡಗು ಪಯಣದ ಸೌಲತ್ತು ತಮಗಿರಬೇಕೆಂಬ ಬ್ರಿಟನ್ ಮತ್ತು ಫ್ರಾನ್ಸುಗಳ ಬೇಡಿಕೆಯನ್ನು ರಶಿಯದ ಕಡೆಯಿಂದ ವಿಶಿನಸ್ಕಿ ಉಗ್ರವಾಗಿ ಪ್ರತಿಭಟಿಸಿದ್ದಾನೆ; ಅದು ಬೇಡಿಕೆಯಲ್ಲ, ಬೆದರಿಕೆ; ಅದಕ್ಕೆ ಅಂಟಿಕೊಂಡರೆ ಆ ದೇಶಗಳು ಬಂದ ದಾರಿಗೆ ಸುಂಕವಿಲ್ಲೆಂದು ಪರಿಷತ್ತಿನಿಂದ ಹಿಂದಕ್ಕೆ ಹೋಗಬೇಕು– ಎಂದು ಗರ್ಜಿಸಿದ್ದಾನೆ. ೧೯೨೧ ರ ರಾಷ್ಟ್ರಪರಿಷತ್ತಿನಲ್ಲಿ ಗೊತ್ತಾದಂತೆ ತಮಗೆ ಸಿಕ್ಕಿದ ಹಕ್ಕುಗಳನ್ನು ಬ್ರಿಟನ್ ಮತ್ತು ಫ್ರಾನ್ಸುಗಳು ಈಗ ಮುಂದಿಟ್ಟದ್ದಕ್ಕೆ ರಶಿಯ ಕೊಟ್ಟದ್ದು ಇಂಥ ಉತ್ತರ.

ಬ್ರಿಟನ್ ಮತ್ತು ರಶಿಯಗಳೊಡನೆ ಇತ್ತೀಚಿಗೆ ಭಿನ್ನಾಭಿಪ್ರಾಯ ಹೆಚ್ಚಾಗಿರುವುದರಿಂದ ಅದನ್ನು ಪರಿಹರಿಸದೆ ಬಿಡುವುದರಿಂದ ಗಂಡಾಂತರವಿದೆಯೆಂದು ಅಲ್ಲಿಗೆ ರಾಯಭಾರಿಯಾಗಿ ಲಾರ್ಡ್ ಲೂಯಿ ಮೌಂಟ ಬ್ಯಾಟನ್ನರನ್ನು ಕಳಿಸಲಾಗುವುದೆಂದು ಸುದ್ದಿಯಿದೆ.

ಬರ್ಲಿನ್ನಿನಲ್ಲಿ ರಶಿಯನ್ನರು ತಮ್ಮ ಪ್ರದೇಶಕ್ಕೆ ಬೇರೆಯೊಬ್ಬ ಪೋಲೀಸು ಮುಖ್ಯಾಧಿಕಾರಿಯನ್ನು ನಿಯಮಿಸಿಕೊಂಡದ್ದಲ್ಲದೆ ಮೊದಲಿದ್ದ ಮುಖ್ಯಾಧಿಕಾರಿಯ ಮಾತನ್ನು ಕೇಳಬಾರದೆಂದು ಅಲ್ಲಿಯ ಪ್ರಜೆಗಳಿಗೆ ಆಜ್ಞೆ ಕೊಟ್ಟಿದ್ದಾರೆ.



ಭಾರತದಿಂದ ಲಂಡನ್ನಿಗೆ ಹೋಗುವಾಗ [illegible] ವಿಮಾನ ನಿಲ್ದಾಣದಲ್ಲಿ ಭಾರತದ ನೌಕಾಪಡೆಯ ಗೌರವ ರಕ್ಷೆಯನ್ನು ಲಾರ್ಡ್ ಮೌಂಟ್‌ಬ್ಯಾಟನ್ನರು ಪರಿಶೀಲಿಸುತ್ತಿರುವುದು. ಚಿತ್ರದಲ್ಲಿ ಲಂಡನ್ನಿನಲ್ಲಿ ಭಾರತದ ಹೈಕಮಿಶನರ್ ಆಗಿರುವ ಶ್ರೀ ವಿ. ಕೆ. ಕೃಷ್ಣಮೆನನ್ನರನ್ನು ಕಾಣಬಹುದು.

ವಿಚಿತ್ರ ವಿಶ್ವ

ಜಿರಾಫೆ ಹೆಂಗಸು

ಇವಳು ಬ್ರಹ್ಮದೇಶದ ಕೆರಾಪಾಂಗ್ ಜಾತಿಯವಳು. ಅವರು ಕೊರಳಸುತ್ತ ಹಿತ್ತಾಳೆಯ ಪಟ್ಟಿಗಳನ್ನು ಸುತ್ತಿಕೊಂಡು ಒಂಟೆ



ಕತ್ತನ್ನು ಬೆಳೆಸಿಕೊಂಡು ತ್ರಿಭುವನ ಮೋಹಿನಿಯರಾಗುವರಂತೆ !

ಸಾವಿತ್ರಿಯ ಪ್ರತ್ಯವತಾರ

ಸಾವಿತ್ರಿಯು ಸತ್ಯವಂತನ ಆಯುಷ್ಯವನ್ನು ಹೆಚ್ಚಿಸಿ ಯಮನ ಕೈಯಿಂದ ಅವನನ್ನು ಬಿಡಿಸಿಕೊಂಡು ಬಂದುದು ಪುರಾಣ ಪ್ರಸಿದ್ಧವಿದೆ. ಅವಳ ಪಾತಿವ್ರತ್ಯಮಹಿಮೆ ಅನ್ಯಾದೃಶವೆಂದು ಭಾರತೀಯರು ನಂಬುತ್ತಾರೆ.

ಈ ಸಾವಿತ್ರಿಯಂತೆಯೇ ಈಗೊಬ್ಬಾಕೆ ಪತಿವ್ರತೆ ಸೇಲಮ್ಮಿನಲ್ಲಿ ಇದ್ದಾಳೆ! ಅವಳ ಹೆಸರು ಶ್ರೀಮತಿ ಮೇರಿಯೋಫ್. ಅವಳ ಗಂಡನನ್ನು ಕಾರಣಾಂತರದಿಂದ ಜೈಲಿಗೆ ಹಾಕಿದಾಗ ಬಿಡಿಸಿಕೊಳ್ಳುವ ಉಪಾಯವನ್ನು ಕಾಣದೆ ಅವಳ ಗಂಡನೂ ಅವಳೂ ಆತ್ಮಹತ್ಯೆಗೆ ನಿರ್ಧರಿಸಿದರು. ಜೇಲಿನ ಸರಳಿನ ನಡುವೆ ನಿಂತ ಗಂಡನಿಗೆ ನಿರ್ದಿಷ್ಟ ಸ್ಥಳದಿಂದ (ಬಹು ಹತ್ತಿರದಲ್ಲಿ) ನಿರ್ದಿಷ್ಟ ಕಾಲದಲ್ಲಿ ಸಂಕೇತ ಮಾಡಿ ಆ ಗುಂಡು ಹಾರಿಸಿದಳು. ಅವು ಒಂದೂ ತಾಗಲಿಲ್ಲ. ಆ ಕ್ಷಣ ಅವಳು ತನಗೂ ಗುಂಡು ಹಾಕಿಕೊಂಡಳು. ಅದೂ ತಾಗಲಿಲ್ಲ. ಹೀಗೆ ಈ ಲೋಕದಲ್ಲಿ ಗಂಡನನ್ನು ಸ್ವತಂತ್ರನನ್ನಾಗಿ ಉಳಿಸಿಕೊಳ್ಳಲಾರದ ಈ ಪ್ರತಿಸಾವಿತ್ರಿಯು ಪರಲೋಕಕ್ಕೆ ಅವನನ್ನು ಕರೆದುಕೊಂಡು ಹೋಗಲು ಯತ್ನಿಸಿ, ಕಲಿಯುಗ ಮಹಿಮೆಯಿಂದ ವ್ಯರ್ಥಪ್ರಯತ್ನಳಾದಳು. ಈಗ ಅವಳು ಅದೇ ಜೈಲಿನ ಹೆಂಗಸರ ಶಾಖೆಯಲ್ಲಿ ಸೆರೆಯಲ್ಲಿದ್ದಾಳೆ!

ವಿಚಿತ್ರ ಸ್ತ್ರೀ

ಅಮೇರಿಕದ ಸೈಮೂರ್ ಹೊಟೇಲಿನಲ್ಲಿ ಕುಮಾರಿ ಪದರ್ಸ್ ಎಂಬೊಬ್ಬ ಸನ್ಯಾಸಿನಿಯಿದ್ದಳು. ಅವಳನ್ನು ಕಾಣುವವರೆಂದರೆ ಕಸಗುಡಿಸುವಾಕೆ, ಊಟ ತರುವ ಹುಡುಗ; ವರ್ಷಕ್ಕೆ ನಾಲ್ಕು ಬಾರಿ ಬಾಡಿಗೆ ವಸೂಲು ಮಾಡುವ ಹೊಟೇಲಿನ ವ್ಯವಸ್ಥಾಪಕ ಮತ್ತು ವರ್ಷಕ್ಕೊಮ್ಮೆ ಬಂದು ಆರೋಗ್ಯ ಪರೀಕ್ಷೆಮಾಡುವ ವೈದ್ಯನೊಬ್ಬ.

೧೫ ಕ್ಕಿಂತ ಹೆಚ್ಚು ವರ್ಷಕಾಲ ಅವಳು ಈ ಪ್ರಕಾರ ಅಜ್ಞಾತವಾಸಿನಿಯಾಗಿದ್ದಳು. ಅವಳ ಕೊಠಡಿ ಬಾಡಿಗೆ ದಿನಕ್ಕೆ ೧೫ ರೂಪಾಯಿಗಳು ಪೆನ್ಸಿಲ್ವೇನಿಯದ ಒಂದು ಕಂಪನಿಯಲ್ಲಿ ೬ ವರ್ಷ ಕಾಲ ಕೂಡಿದ ಅವಳ ಹಣದ ಬಡ್ಡಿ ೮೫೪೭೦ ರೂಪಾಯಿಗಳಾಗಿದ್ದವು. ಮೊದಲು ಅದು ತನಗೆ ಅಗತ್ಯವೇ ಇಲ್ಲೆಂದು ಬಿಟ್ಟುಬಿಟ್ಟಿದ್ದಳು. ಕಡೆಗೆ ಯಾವ ಕಾರಣದಿಂದಲೋ ಅದನ್ನು ಸ್ವೀಕರಿಸಿದಳಂತೆ! ಅವಳ ಐಶ್ವರ್ಯದ ಮೊತ್ತ ೫೦ ಕೋಟಿ ರೂಪಾಯಿಗಳಷ್ಟಿದ್ದು, ಸತ್ತ ಮೇಲೆ ಕೂಡ ಆವಳ ವಕೀಲನು ತನ್ನ ವಿಷಯವನ್ನು ಹೊರಗೆಡಹಬಾರದೆಂದು ಆಕೆ ಕಟ್ಟಾಜ್ಞೆ ಕೊಟ್ಟಿದ್ದಾಳೆಂದು ಹೇಳಿ ಬಿಟ್ಟನು!

ಒಂದು ಹಳ್ಳಿಯಲ್ಲಿ ಒಬ್ಬನ ಹಂದಿ ನಾಯಿಯಂತೆ ತೋರುವ ಮತ್ತು ಹಾಗೇ ಬೊಗಳುವ, ಮೈಮೇಲೆ ಕೂದಲಿಲ್ಲದ ಒಂದು ಮರಿಯನ್ನು ಈದಿತಂತೆ !



ಬಾಲ—ಕಥೆ !

ಮಗು,

ಮೇಲಿನ ತಲೆಬರಹವನ್ನು ನೋಡಿ ನೀನು ಮೋಸಹೋದೀಯೆ ! ಬಾಲ-ಕಥೆಯೆಂದರೆ ಬಾಲರ ಕಥೆ, ಅಂದರೆ ಮಕ್ಕಳ ಕಥೆಯೆಂದು ತಿಳಿಯಬೇಡ. ಇದು ಬಾಲರ ಕಥೆಯಲ್ಲ, ಬಾಲದ ಕಥೆ !

ಬಾಲವೆಂಬುದು ಪ್ರಾಣಿಯ ತುತ್ತತುದಿಯಲ್ಲಿರುವ ಕೆಲಸಕ್ಕೆ ಬಾರದ ಜೋಡಣೆಯೆಂದು ಕೆಲವರು ತಿಳಿದಿರಬಹುದು. ಅದು ಸರಿಯಲ್ಲ. ಎಷ್ಟೋ ವೇಳೆ ಅದು ಪ್ರಾಣಿಯ ಇನ್ನೊಂದು ತುದಿಯಲ್ಲಿರುವ ತಲೆಯಷ್ಟೇ ಕೆಲಸ ಕೊಡುತ್ತವೆ.

ಮಂಗನು ಮನುಷ್ಯನ ಅಜ್ಜನೆಂದು ಬಲ್ಲವರು ಹೇಳುತ್ತಾರೆ. ಮಂಗಗಳಲ್ಲಿ ಒಂದು ಪಂಗಡ ಬುದ್ಧಿವಂತರಾಗುತ್ತ ಕೆಲವು ಕೋಟಿ ವರ್ಷಗಳಲ್ಲಿ ಮನುಷ್ಯರಾದವಂತೆ. ಹೆಡ್ಡ ಹುಡುಗರು ವರ್ಷಗಟ್ಟಲೆ ಬಿನ್-ಇಯತ್ತೆಯಲ್ಲೇ ಉಳಿದಾಗ ಬುದ್ಧಿವಂತರು ಮುಲ್ಕಿ ಪರೀಕ್ಷೆ ಪಾಸಾಗಿರುವದಿಲ್ಲವೆ ? ಹಾಗೆಯೆ ಕೆಲ ಮಂಗಗಳು ಮಂಗಗಳಾಗಿಯೆ ಉಳಿದಾಗ ಉಳಿದವು, ಅವುಗಳ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಬದಲಾಗುತ್ತ ಆಗುತ್ತ ಮನುಷ್ಯರಾದವು. ಈ ಬದಲಾವಣೆಯಲ್ಲಿ ಮನುಷ್ಯನ ತಲೆ ದೊಡ್ಡದಾಯಿತು, ಮೆದುಳು ಬೆಳೆಯಿತು. ದೇಹ ನೆಟ್ಟಗಾಯಿತು.



ಆದರೆ ಇಷ್ಟೆಲ್ಲ ಲಾಭದ ನಡುವೆ "ಮಂಗ-ಮನುಷ್ಯ"ನ ಬಾಲ ಮಾತ್ರ ಚಿಕ್ಕದಾಗುತ್ತ ಹೋಗಿ ಕೊನೆಗೆ ಮನುಷ್ಯ ಬಾಲವನ್ನು ಸಂಪೂರ್ಣವಾಗಿ ಕಳೆದುಕೊಂಡುಬಿಟ್ಟ. ಆದರೆ ಭೂಮಿಯ ಒಡೆಯನಾದ ಮನುಷ್ಯ ಬಾಲ ಕಳೆದುಕೊಂಡರೂ ಅದೇನೂ ದೊಡ್ಡ ನಷ್ಟವಾಗಲಿಲ್ಲ. ಪಾಪ, ಮೃಗಗಳಾಗಿಯೆ ಉಳಿದ ಮೃಗಗಳಿಗೆ ಬಾಲವೆಂಬುದು ಬಹಳ ಅವಶ್ಯವಾಗಿದೆ.

ಬಾಲಗಳು ಮೃಗಗಳಿಗೆ ಅನೇಕ ಕೆಲಸಗಳಿಗೆ ಬರುತ್ತವೆ. ಎಲ್ಲಕ್ಕಿಂತ ಅಂದವಾದ ಬಾಲಗಳು ಮರದ ಮೇಲಿರುವ ಪ್ರಾಣಿಗಳವು. ಬ್ರೇಝಿಲ್ಲಿನ ಮಂಗಗಳು ಬಾಲವನ್ನು ಕಾಂಗುಡಿಯಂತೆ ರೆಂಬೆಗಳಿಗೆ ಸುತ್ತಿ ತಲೆ ಕೆಳಗಾಗಿ ಜೋತಾಡುತ್ತ ಕೈ ಕಾಲುಗಳಿಂದ ಬೇಕಾದ ಕೆಲಸ ಮಾಡುತ್ತವೆ, ತಿನ್ನುತ್ತವೆ. ನಿಜವಾಗಿ ಬಾಲವೆಂಬುದು ಅದರ ಮೂರನೆ ಕೈ ! ಕೈಬೆರಳುಗಳಂತೆ ಆ ಬಾಲಕ್ಕೂ ಬಹಳ ಸೂಕ್ಷ್ಮವಾದ ಪ್ರಜ್ಞೆ ಇರುತ್ತದೆ. ಇಲಿಗಳೂ ಹಾಗೆಯೇ. ಗೋವಿನಜೋಳದ ದಂಟಿನ ಮೇಲೇರಿ ಕಾಂಡದ ತುದಿಗೆ ಬಾಲ ಸುತ್ತಿ ಜೋತಾಡುತ್ತ ತೆನೆಯನ್ನು ಹಿಡಿದು "ಫರಾಳ" ಮಾಡುತ್ತವೆ.

ಮರಗಿಡಗಳಿಂದ ನೀರಿಗೆ ಹೋಗೋಣ. ಮೀನಕ್ಕೆ ಬಾಲವೆಂಬುದು ಈಸಲು ಚುಕ್ಕಾಣಿಯೂ ಹೌದು, ಹುಟ್ಟೂ ಹೌದು. ಮತ್ತೆ ಮೊಸಳೆಗಳಿಗೋ ! ಅವುಗಳಿಗೆ ಬಾಲವೆಂದರೆ ಚುಕ್ಕಾಣಿ ಮಾತ್ರವಲ್ಲ ಒಂದು ಆಯುಧವೂ ಹೌದು. ಶತ್ರುವಾಗಲಿ ಅಪಾಯಕರವಾದ ಬೇಟೆಯಾಗಲಿ ಎದುರಾದರೆ ಅದು ಬಾಲವನ್ನು ಅಪ್ಪಳಿಸುವ ಭರವನ್ನು ನೋಡಿ ಆದರ ವಿರೋಧಿಗಳು ಬಾಲದ ಬಳಿ ಹೋಗುವ ಧೈರ್ಯವನ್ನೇ ಮಾಡುವದಿಲ್ಲ !

ನೆಲದ ಮೇಲಿನ ಪ್ರಾಣಿಗಳನ್ನು ತೆಗೆದುಕೊಂಡರೆ, ಕಾಂಗರೂ ಎಂಬ ಆಸ್ಟ್ರೇಲಿಯದ ಪ್ರಾಣಿಗೆ ಬಾಲವೆಂಬುದು ಐದನೇ ಕಾಲೆಂದೇ ಹೇಳಬಹುದು. ಅದು ಬರಿ ಬಾಲದ ಮೇಲೆಯೇ ನಿಲ್ಲಬಲ್ಲದು. ಹೀಗೆ ನಿಂತು ಅದು ಮೇಲಕ್ಕೆ ನೆಗೆದರೆ ೩೦ ಅಡಿ ಎತ್ತರವನ್ನು ಮುಟ್ಟಬಲ್ಲದು. ಹಾವುಗಳೂ ಕೇವಲ ಬಾಲದ ಆಧಾರನಿಂದ ನಿಂತು ಎದುರಾಳಿಯನ್ನು ಗದರಿಸುವವು. ದನಕರುಗಳೂ ಆನೆ ಕುದುರೆಗಳೂ ಬಾಲದಿಂದ ನೊಣ ಝಾಡಿಸುವ ಚಮತ್ಕಾರವನ್ನು ನೀನು ನೋಡಿಯೆ ಇದ್ದೀ.

ಗಿಡದಿಂದ ಗಿಡಕ್ಕೆ ಚಂಗನೆ ಹಾರುವ ಅಳಿಲಿನ ಬಾಲ ಅದಕ್ಕೆ ಎಷ್ಟು ಒಪ್ಪುತ್ತದೆ !

ಬೆಕ್ಕವ್ವನ ಪ್ರೀತಿ-ಭೀತಿ, ಸಿಡುಕು ಇವೆಲ್ಲ ಅವಳ ಬಾಲದ ತುದಿಯಿಂದಲೇ ಮೇಲ್ಮೊಗವಾಗಿ ಹರಿಯುತ್ತವೆನ್ನಬಹುದು. ಬಾಲ ಅರಳಿದ್ದರೆ ಅವಳಿಗೆ ಭಾರಿ ಕೋಪ ಬಂದಿದೆಯೆಂದು ತಿಳಿಯಬೇಕು. ಹುಲಿ, ಚಿರತೆಗಳ ಮಾತೂ. ಹಾಗೆಯೆ ಬೆಕ್ಕವ್ವ ಪ್ರಸನ್ನಳಾದರೆ ಅವಳು ನಿನ್ನ ಕಾಲಿಗೆ ಪ್ರದಕ್ಷಿಣೆ ಹಾಕುತ್ತ ಬಾಲವನ್ನು ಕಾಲುಗಳಿಗೆ ತಗಲಿಸುವಳು. ನಾಯಣ್ಣನು ಬೆದರಿದಾಗ ಬಾಲವನ್ನು ಕಾಲುಗಳ ನಡುವೆ ಸೇರಿಸುತ್ತಾನೆ. ಇದರಿಂದಲೇ "ಬಾಲ ಮಡಚಿದ" ನೆಂಬ ಮಾತು ಹುಟ್ಟಿತು. ಮೇಲೆತ್ತಿ ಬಾಲವನ್ನು ಸುರುಳಿಸುತ್ತಿ ನಾಯಿ ಓಡುತ್ತದೆ.

ಹಕ್ಕಿಗಳಿಗೆ ಬಾಲದಿಂದಾಗುವ ಪ್ರಯೋಜನ ಗೊತ್ತೇ ಇದೆ. ದಿಕ್ಕು ಬದಲಿಸಲಿಕ್ಕೂ ಇಳಿಯಲಿಕ್ಕೂ ಅದನ್ನು ಅವು ಉಪಯೋಗಿಸುತ್ತವೆ.

ಹಿಂದುಸ್ತಾನದ ನವಿಲೇ ಮೊದಲಾದ ಕೆಲ ಪ್ರಾಣಿಗಳು ತಮ್ಮ ಬಾಲದ ಚೆಲುವಿನಿಂದ ನಮ್ಮನ್ನು ಮರಮರ ಮರುಳು ಮಾಡುವದಿಲ್ಲವೆ

ಇದನ್ನೆಲ್ಲ ನೋಡಿದರೆ ಬಾಲವನ್ನು ಕಳೆದುಕೊಂಡು ಮನುಷ್ಯ ಅಷ್ಟೇನೂ ಲಾಭಪಡೆಯಲಿಲ್ಲೆಂದು ನಿನಗನಿಸುವದಿಲ್ಲವೆಷ್ಟೇ ?

— ನಿನ್ನ ಮಾಮಾ

ಪಾಕಿಸ್ತಾನದ ವಿರುದ್ಧ ಹಿಂದುಸ್ತಾನವು ಕೈಕೊಂಡ ಕ್ರಮವನ್ನು ಪ್ರತಿಬಂಧಿಸಲು ಮತ್ತು ಹಿಂದೀ ಸೈನ್ಯ ಪಾಕಿಸ್ತಾನದ ಗಡಿಯಲ್ಲಿ ಪ್ರವೇಶಿಸದಾರದೆಂದು ಪಾಕಿಸ್ತಾನವು ತನ್ನ ಸೈನ್ಯವನ್ನು ಕಾಶ್ಮೀರ ರಂಗಕ್ಕೆ ಕಳಿಸಲೇಬೇಕಾಯ್ತೆಂದು ಕುಂಟು ಕಾರಣ ತೋರಿಸಿ ಕಾಶ್ಮೀರ ಸಮಿತಿಗೆ ಈ ಸಂಗತಿಯನ್ನು ಈಗ ತಿಳಿಸಿದೆ.

ಪುಂಡರನ್ನು ಎದುರಿಸಿರಿ

ಪ್ರೊ. ಭನಸಾಲಿಯವರ ಸಂದೇಶ

ಪ್ರೊ. ಭನಸಾಲಿಯವರು ತಮ್ಮ ಸಂಗಡಿಗರೊಂದಿಗೆ ಹೈದರಾಬಾದದ ಹಳ್ಳಿಗಳಲ್ಲಿ ಅಧ್ಯಾತ್ಮಿಕ ಉದ್ದೇಶದಿಂದ ೩ ಮೈಲಿನ ದೂರದಲ್ಲಿರುವ ಒಂದು ಹಳ್ಳಿಗೆ ತಾ. ೨೭ ಕ್ಕೆ ಹೋಗಿ ಅಲ್ಲಿ ಹರಿಜನರ ವಸತಿಗಳನ್ನು ಸ್ವಚ್ಛಗೊಳಿಸಿ ಸ್ವಚ್ಛತೆಯ ಮಹತ್ವವನ್ನು ತಿಳಿಸಿ ಹೇಳಿದರು. ಪುಂಡರು ಪೋಲೀಸ ಬಂದರೆ ಸ್ತ್ರೀಯರೂ ಧೈರ್ಯದಿಂದ ಅವರನ್ನು ಎದುರಿಸಬೇಕೆಂದೂ ಪುರುಷರು ಸನ್ನದ್ಧರಾಗಿ ಅವರನ್ನು ದಂಡಿಸಬೇಕೆಂದೂ ಶ್ರೀಮತಿ ಗ್ಯಾನಕುಮಾರಿ ಹೆಡ್ಡಾ ಮತ್ತು ಪ್ರೊ. ಭನಸಾಲಿಯವರು ಭಾಷಣ ಮಾಡುತ್ತ ಹೇಳಿದರು.

ನಿಜಾಮರಿಗೆ ಹಕ್ಕಿಲ್ಲ

ಹೈ. ಸಂ. ಕಾಂ. ಕ್ರಿಯಾ ಸಮಿತಿಯ ನಿರ್ಣಯ

ಹೈದರಾಬಾದ ಸಂಸ್ಥಾನ ಕಾಂಗ್ರೆಸಿನ ಕ್ರಿಯಾ ಸಮಿತಿಯು ತಾ. ೩೦ ಕ್ಕೆ ಒಂದು ಗೊತ್ತುವಳಿಯ ಮುಖಾಂತರ, ಪ್ರಜಾ ಪ್ರಭುತ್ವದ ತತ್ವದ ತಳಹದಿಯ ಮೇಲೆ ನಿಂತ ಯುಕ್ತರಾಷ್ಟ್ರ ಸಂಘಕ್ಕೆ ಹೈದರಾಬಾದದ ಪ್ರಶ್ನೆಯನ್ನು ಒಯ್ಯಲು ಜಾತ್ಯಂಧ ಮತ್ತು ನಿರಂಕುಶ ನಿಜಾಮ ಸರಕಾರಕ್ಕೆ ನೈತಿಕ ಬಲವಾಗಲಿ ಹಕ್ಕಾಗಲೀ ಇಲ್ಲವೆಂದು ಸಾರಿದೆ.

ಇನ್ನು ಸಂಧಾನಕ್ಕೆ ನಿಜಾಮರೇ ಬರಲಿ

ಸರ ಮಿರ್ಝಾ ಇಸ್ಮಾಯಿಲ ಹೈದರಾಬಾದದ ಸಂಧಾನ ಪ್ರಸಕ್ತಿಯನ್ನು ಮತ್ತೆ ಎತ್ತಲು ಭಾರತ ಸರಕಾರದ ಬಳಿ ಸಾರಿದ್ದರಷ್ಟೆ? ಹಿಂದುಸ್ತಾನ ಸರಕಾರದ ಸಂಸ್ಥಾನ ಶಾಖೆಯು ಹೈದರಾಬಾದದ ಬಗ್ಗೆ ಇನ್ನು ಮೇಲೆ ಮಧ್ಯಸ್ಥರೊಡನೆ ಮಾತನಾಡಲು ಸಿದ್ಧವಿಲ್ಲವೆಂದೂ ಸಂಧಾನವೇ ಬೇಕಿದ್ದರೆ ನಿಜಾಮರೇ ದಿಲ್ಲಿಗೆ ಬರಲಿ ಎಂದೂ ಸರ ಮಿರ್ಝಾರಿಗೆ ಖಂಡಿತೋಕ್ತಿಯನ್ನು ಹೇಳಿದೆಯೆಂದು ತಿಳಿಯುತ್ತದೆ. ಹೈದರಾಬಾದಕ್ಕೆ ಶಾಂತಿ ಬೇಕಾಗಿದೆಯೆಂದು ಜಗತ್ತಿಗೆ ತೋರಿಸಲು ಹೂಡಿದ ಮತ್ತೊಂದು ಕಪಟ ನಾಟಕವಿದೆಂದು ಇದಕ್ಕೆ ಮುದ್ರೆಯೊತ್ತಲಾಗಿದೆ.

ಹೈದ್ರಾಬಾದಕ್ಕೆ ಅಂಚೆ ವ್ಯವಹಾರವಿಲ್ಲ

ಹಿಂದುಸ್ತಾನ ಸರಕಾರದ ಅಂಚೆ ಹಾಗು ತಂತಿ ಶಾಖೆಯ ಡಾಯರೆಕ್ಟರ ಜನರಲರು ತಾ. ೨೯ ಕ್ಕೆ ಒಂದು ಪ್ರಕಟನೆ ಹೊರಡಿಸಿ ಹೈದರಾಬಾದ ಸಂಸ್ಥಾನದಲ್ಲಿಯ ಹಿಂದಿ ವಸಾಹತು ಅಂಚೆ ಕಚೇರಿಗಳ ಮತ್ತು ಹಿಂದುಸ್ತಾನದಲ್ಲಿಯ ಅಂಚೆ ಕಚೇರಿಗಳ ನಡುವಿನ ಮನಿ ಆರ್ಡರ, ಪೋಸ್ಟಲ ಆರ್ಡರ, ಇನ್ಸ್ಯೂರ್ಡ ಆರ್ಟಿಕಲ್ಸ, ಮೊದಲಾದವುಗಳ ವಿನಿಮಯವನ್ನೂ ಕ್ಯಾಶ ಸರ್ಟಿಫಿಕೇಟ್ಸ ಮತ್ತು ಸೇವಿಂಗ್ಸ ಬ್ಯಾಂಕ ಅಕೌಂಟ್ಸಗಳ ವ್ಯವಹಾರವನ್ನೂ ತಾತ್ಕಾಲಿಕ ನಿಲ್ಲಿಸಲಾಗಿದೆಯೆಂದು ಪ್ರಸಿದ್ಧಿಸಿದ್ದಾರೆ.

ನಾನಜ ಹಿಂದುಸ್ತಾನದ ವಶಕ್ಕೆ

ಹಿಂದುಸ್ತಾನದ ಸೈನಿಕರು ತಾ. ೨೪ರಂದು ಹೈದರಾಬಾದದ ಗಡಿಯಲ್ಲಿದ್ದ ನಾನಜ ಎಂಬ ಹಳ್ಳಿಯನ್ನು ಆಕ್ರಮಿಸಲೇಬೇಕಾದ ಸಂದರ್ಭ ಒದಗಿತು. ಸೊಲ್ಲಾಪೂರ ಬಾರ್ಶಿ ರಾಜಮಾರ್ಗದಮೇಲೆ ನಿತ್ಯದ ಕೆಲಸದಲ್ಲಿದ್ದ ಹಿಂದೀ ಸೈನಿಕರ ಮೇಲೆ ನಾನಜದ ಹತ್ತಿರ ೫೦ ಶಸ್ತ್ರಸಜ್ಜಿತ ಜನರು ದಾಳಿ ಮಾಡಿದರು. ಕೂಡಲೇ ಹಿಂದೀ ಸೈನಿಕರೂ ಸಿದ್ಧರಾಗಿ ಹಳ್ಳಿಯನ್ನು ಸುತ್ತುವರಿದು ೩೦ ರಜಾಕಾರರನ್ನು ಕೊಂದು ಉಳಿದವರನ್ನು ಓಡಿಸಿ ನಾನಜವನ್ನು ವಶಪಡಿಸಿಕೊಂಡರು. ಈ ಹಳ್ಳಿಯನ್ನು ಆಕ್ರಮಿಸಿದ ನಂತರ ಅದನ್ನು ಯುದ್ಧಕ್ಕಾಗಿ ಅಣಿಗೊಳಿಸಲಾಗಿತ್ತೆಂದು ತಿಳಿದು ಬಂದಿತು.

ಸೊಲ್ಲಾಪೂರ ಬಾರ್ಶಿ ರಸ್ತೆಯು ಹೈದರಾಬಾದದ ಗಡಿಯಲ್ಲಿ ಹಾಯುತ್ತಿದ್ದರೂ ಅದನ್ನು ಹಿಂದುಸ್ತಾನ ಸರಕಾರವು ರಚಿಸಿದ್ದು ಅದರ ಮೇಲೆ ಹಿಂದುಸ್ತಾನದ ಒಡೆತನವೇ ಇದೆ. ಅದರ ಮೇಲೆ ನಡೆಯುವ ಮಿಲಿಟರಿ ಮತ್ತು ಸಿವಿಲ್ ಸಾರಿಗೆಯ ರಕ್ಷಣೆಗಾಗಿ ಹಿಂದುಸ್ತಾನ ಸೈನ್ಯವು ಆ ಊರಲ್ಲಿ ನೆಲೆಯೂರುವದು ಕ್ರಮಪ್ರಾಪ್ತವಾಗಿದೆ. ನಿಜಾಂ ಸರಕಾರವು ಈ ಬಗ್ಗೆ ಆಕ್ಷೇಪವೆತ್ತಿದಾಗ ಸಂರಕ್ಷಣ ಶಾಖೆಯವರು ಇದೇ ಉತ್ತರ ಹೇಳಿದ್ದಾರೆ.

ಜಿನ್ನಾರ ವಿಚಾರಣೆಯಾಗಲಿ

ಪ್ರಮುಖ ಮುಸಲ್ಮಾನರ ಆಗ್ರಹ

ದಿಲ್ಲಿಯ ೫೫ ಪ್ರಮುಖ ಮುಸಲ್ಮಾನರು ತಾ. ೩ ಕ್ಕೆ ಒಂದು ಮನವಿ ಹೊರಡಿಸಿ, ಕೋಟ್ಯಂತರ ಜನರ ಕೊಲೆಗೂ ರಕ್ತಪಾತಕ್ಕೂ ಹೊಲಮನೆ ಆಸ್ತಿಪಾಸ್ತಿಗಳ ನಾಶಕ್ಕೂ ಸ್ತ್ರೀ ಮಾನಭಂಗಕ್ಕೂ ಪಾಕಿಸ್ತಾನದ ಗವರ್ನರ ಜನರಲರಾದ ಜಿನ್ನಾರ ದ್ವಿರಾಷ್ಟ್ರವಾದವೇ ಕಾರಣವಾಗಿದ್ದರಿಂದ ಹಿಟ್ಲರನಂತೆ ಅವರನ್ನೂ ವಿಚಾರಣೆಗೆ ಗುರಿಪಡಿಸಬೇಕೆಂದೂ ಅಜ್ಞ ಮುಸಲ್ಮಾನರ ಧಾರ್ಮಿಕ ಭಾವನೆಯನ್ನು ಕೆರಳಿಸಿ ಸಾರ್ವತ್ರಿಕ ವಿನಾಶಕ್ಕೆ ಕಾರಣರಾದ ಜಿನ್ನಾರನ್ನು ಹಾಗೇ ಬಿಡಬಾರದೆಂದೂ ಹೇಳಿ ಯುಕ್ತರಾಷ್ಟ್ರ ಸಂಘದ ಕಾಶ್ಮೀರ ಸಮಿತಿಗೆ ಬಿನ್ನವಿಸಿಕೊಂಡಿದ್ದಾರೆ.

ಈ ಬಿನ್ನಹಕ್ಕೆ ಅಂಕಿತ ಹಾಕಿದವರಲ್ಲಿ ಸಯ್ಯದ ಆಜೀಜ ಹಸನ ಬಕಾಯಿ ಸಂಪಾದಕ 'ಹರಿಯತ್' ಮೀರ ಮುಸ್ತಾಕ ಅಹಮ್ಮದ, ದಿಲ್ಲಿ ಪ್ರಾಂತಿಕ ಸಮಾಜವಾದಿ ಪಕ್ಷದ ಕಾರ್ಯದರ್ಶಿ ಮೌ ಮಹಮ್ಮದ ಸಯ್ಯದ, ತಯ್ಯಬ ಅಲಿ ಹಾಶೀಮ, ಮೌ ಅಬ್ದುಲ ಸತ್ತಾರ ಮೊದಲಾದವರಿರುವರು.

ಆ್ಯಟ್ಲೀಯವರ ಬುದ್ಧಿವಾದ

ಒಣ ಆಡಂಬರ ಬೇಡ

ಒಣ ಆಡಂಬರಕ್ಕೆ ಬೀಳದೆ ಯುಕ್ತರಾಷ್ಟ್ರ ಸಂಘಕ್ಕೆ ಹೈದರಾಬಾದ ಪ್ರಶ್ನೆಯನ್ನು ಒಯ್ಯಬೇಕೆಂಬ ಹಂಬಲವನ್ನು ತಾಳದೆ ನಿಜಾಮರು ನೇರವಾಗಿ ಹಿಂದೀ ಒಕ್ಕೂಟಕ್ಕೆ ಸೇರುವದೇ ಯುಕ್ತವೆಂದು ಬ್ರಿ. ಮುಖ್ಯ ಮಂತ್ರಿ ಆಟ್ಲೀಯವರು ನಿಜಾಮರಿಗೆ ಬುದ್ಧಿವಾದ ಹೇಳಿದ್ದಾರೆ. ಹೈದರಾಬಾದ ಪ್ರಶ್ನೆಯನ್ನು ಯುಕ್ತರಾಷ್ಟ್ರಕ್ಕೆ ಒಯ್ಯಲು ಬ್ರಿಟಿಶ ಸರಕಾರವು ಯಾವ ಸಹಾಯವನ್ನೂ ನೀಡಲು ಸಿದ್ಧವಿಲ್ಲವೆಂದು ಸ್ಪಷ್ಟಪಡಿಸಿದ್ದಾರೆಂದೂ ತಿಳಿಯುತ್ತದೆ.



ಬ್ರಿಟಿಶ ಬಾಲಬಾಲಿಕೆಯರ ನೃತ್ಯ ಮೇಳ: [illegible] ಕ್ರೀಡೆಯಲ್ಲಿ ಭಾಗವಹಿಸಲು ಆರು ವರ್ಷದೊಳಗಿನ ಈ ಮಕ್ಕಳು ಲಂಡನ್ನಿಗೆ ಬಂದಿದ್ದಾರೆ. ಈ ಸ್ಪರ್ಧೆ [illegible] ಮಕ್ಕಳ ಕಲಾಪ್ರದರ್ಶನ ಜರೆಗಲಿದೆ.

ಗುಲಾಮಗಿರಿಯ ಕೊನೆಯ ಕೂಪ!

ಧರ್ಮದ ಆಧಾರದಿಂದ ಅಧರ್ಮ— ಅರಬಸ್ತಾನದಲ್ಲಿ ವಿಚಿತ್ರ ದಾಂಪತ್ಯಜೀವನ— ಮನುಷ್ಯಜೀವಿಗಳ ಮಾರಾಟ

ಅರಬರು ಮೊದಲು ನಾಗರಿಕತೆಯುಳ್ಳ ಜನರು; ಅವರು ಖಗೋಲಶಾಸ್ತ್ರ, ಬೀಜಗಣಿತ ಗಳಲ್ಲಿ ಪ್ರಾಚೀನಕಾಲದಲ್ಲಿ ಪಾಶ್ಚಾತ್ಯರಿಗಿಂತ ಮುಂಬರಿದಿದ್ದರು; ಮಸಾಲೆಯ ಸಾಮಾನು ಗಳನ್ನಲ್ಲದೆ ಹಿಂದೀ ಸಂಸ್ಕೃತಿಯ ಹಲವು ಅಂಶ ಗಳನ್ನು ಪಾಶ್ಚಾತ್ಯ ಲೋಕಕ್ಕೆ ಒಯ್ದು ಮುಟ್ಟಿಸುತ್ತಿದ್ದವರು. ಆದರೆ ಇಂಥ ಅರಬ ರಾಜ್ಯದಲ್ಲಿ ಮಹಾ ಪ್ರವಾದಿ ಮಹಮ್ಮದ ಹುಟ್ಟಿದ ಬಳಿಕ ಸ್ತ್ರೀ ಪುರುಷರ ದಾಂಪತ್ಯ ಜೀವನದಲ್ಲಿ ಅಸ್ವಾಭಾವಿಕತೆ ತಲೆ ದೋರಿತು. ಅವರ ಮಾನಸಿಕ ಭಾವ ಭಾವನೆ ಗಳ ಕಟ್ಟುಗಳೇ ಬದಲಾಗಿ ಅರಾಜಕ ಪರಿ ಸ್ಥಿತಿಯುಂಟಾಗಿದೆ. ಮಾನಸಶಾಸ್ತ್ರ ರೀತ್ಯಾ ಅವರ ಕಾಮಜೀವನವು ಒಂದು ಅಭೇದ್ಯ ವಾದ ದುರ್ದಂತ ಚಕ್ರವಾಗಿ ಪರಿಣಮಿಸಿರುವು ದಕ್ಕೆ ಜಗತ್ತಿನಲ್ಲಿ ಉಳಿದೆಲ್ಲ ರಾಜ್ಯಗಳಲ್ಲಿ ಗುಲಾಮರ ಮಾರಾಟ ನಿಂತರೂ ಅಲ್ಲಿ ಇನ್ನೂ ನಿಲ್ಲದೆ ಅನಿರ್ಬಂಧವಾಗಿ ಸಾಗಿರುವುದು ಸ್ಪಷ್ಟ ವಾದ ನಿದರ್ಶನವಾಗಿದೆ. ಅದರಲ್ಲೂ ವಿಲಾಸ ದಾಸಿಯರನ್ನು ಕಾರಖಾನೆಯಲ್ಲಿ ತಯಾರಿಸಿ ದಂತೆ ತಯಾರಿಸಿ ಮಾರುವುದು ಅತ್ಯಂತ ಕುತ್ಸಿತವಾದ ರೂಢಿ. ಇಲ್ಲಿ ಇಂಥ ವಿಲಾಸ ದಾಸಿಯರ ಐದು ಮಾದರಿಗಳನ್ನು ಕೊಡಲಾ ಗಿದೆ.

ಮೊದಲನೆಯವಳಾದ "ಅಹಲ್ಯೆ" ದಕ್ಷಿಣ ಅಬಿಸೀನಿಯದಾಕೆ. ಅವಳ ಹಣೆಯ ಮೇಲಿ

ದಿಂದ ಬಂದು ಸುಂದರಿಯರೊ ಎಂಬುದು! ಊಹೆ ಕೂಡ ಊಹಿಸಿಯೂ! ತನ್ನ ಕಾನೆ ನಂಬದು!" ಎಂಬಾತಿರುವ ಗುಲಾಮ ಹುಡುಗಿಯರ ಸಂಖ್ಯೆ ೧೫ ಲಕ್ಷವಿದೆ. ಅವರು ಕೆಲಸದಾಳುಗಳೂ ಹೌದು, ವೇಶ್ಯೆಯರೂ ಹೌದು. ಸಾಧಾರಣ ಹುಡುಗಿಯೊಬ್ಬಳ ಬೆಲೆ ೧೫–೩೦ ಡಾಲರಾದರೂ (ಸುಮಾರು ೫೦–೬೦ ರೂ.) ಎತಿಯೋಪಿಯದ ಇಲ್ಲವೆ ಸೋಮಾ ಲಿಯ ಸುಂದರಿಯ ಬೆಲೆ (ಅವಳು ಎಂಟರಿಂದ ೨೦ ನೆಯ ವರ್ಷ ವಯಸ್ಸಿನೊಳಗಿದ್ದರೆ) ನೂರರಿಂದ ಐನೂರು ಡಾಲರ್ ವರೆಗಿದೆ. ಇವರು ಕುಟುಂಬದಲ್ಲಿರುವಾಗ ಗೃಹಲಕ್ಷ್ಮಿಯ ಮತ್ಸರದಿಂದ ನರಳಬೇಕಾಗುವುದಾದರೂ ಯಜಮಾನ ಮತ್ತು ಇತರರಿಂದ ಮರ್ಯಾದೆ ಯಿಂದಲೂ ದಯೆಯಿಂದಲೂ ನೋಡಲ್ಪಡುವ ರಲ್ಲದೆ ಅವರ ಮಕ್ಕಳು ಸ್ವತಂತ್ರರಾಗಿ ಉಳಿ ಯುತ್ತಾರೆ. ಸ್ವತಂತ್ರ ವೇಶ್ಯೆಯರಿಗೆ ಇನ್ನೂ ಸ್ವಾತಂತ್ರ್ಯ ಹೆಚ್ಚೆಂತೆ. ಇಲ್ಲಿಯ ಹಾಗೆ. ಆದರೆ ಪೂರ್ವದಲ್ಲಿ ಹಿಂದುಗಳಲ್ಲಿ ಸೂಳೆಗೂ ಒಂದು ಧರ್ಮ ನಿಯಮಾಚರಣೆಯಿದ್ದಂತೆ "ವಿವಾಹ ನೀತಿಗಳನ್ನು" ಅರಬಸ್ತಾನದಲ್ಲೂ ವೇಶ್ಯೆಯರು ಕೆಲ ಮಟ್ಟಿಗೆ ಪಾಲಿಸಬೇಕಾಗಿದೆಯೆಂದು ಜಾನ್ ಲೆವಿಸ್ ಕಾರ್ಸ್ವರರು ಬರೆಯುತ್ತಾರೆ. ಸೂಡಾನ್ ಮುಸಲ್ಮಾನರಲ್ಲಿ! ಒಂದು ವರ್ಷ ದಲ್ಲಾದ ೬॥ ಸಾವಿರ ಮದುವೆಗಳಲ್ಲಿ ೫ ಸಾವಿರ ಸೋಡಚೀಟಿ ಪ್ರಕರಣಗಳು ನಡೆದವಂತೆ!

ಯಿತಲ್ಲವೆ? ಇದರ ಮೇಲೆ ಅವಳ ಕಾಮ ಪ್ರವೃತ್ತಿ ಪ್ರಕ್ಷುಬ್ಧವಾದಾಗ ತಿರಸ್ಕೃತ ಗಂಡ ನನ್ನು ಪ್ರಸನ್ನೀಕರಿಸಿಕೊಳ್ಳಲಾರದೆ ಅವಳಾ ದರೂ ವೇಶ್ಯಾವೃತ್ತಿಗೆ ಶರಣುಹೊಗಬೇಕಾ ಯಿತು. ಈ ರೀತಿಯಲ್ಲಿ ಒಕ್ಕಿದ ಅರಬ ಕುಟುಂಬಜೀವನದ ಅನಾಗರಿಕತೆಯ ಫಲ ವಾಗಿ ಗುಲಾಮರ ವ್ಯಾಪಾರ ಅಲ್ಲಿ ಅನಿವಾರ್ಯ ವೆನಿಸಿದೆ. ಇದು ಮಾನಸಶಾಸ್ತ್ರೀಯ ವಿವರ ವಾಯಿತು.

ಒಂದು ಉದ್ಯೋಗ

ಆರ್ಥಿಕ ಮತ್ತು ಔದ್ಯೋಗಿಕ ದೃಷ್ಟಿಯಿಂದ ಗುಲಾಮರ ಮಾರಾಟವೊಂದು ಲಾಭದ ವ್ಯಾಪಾರ, ಅಲ್ಲದೆ ಅದೊಂದು ಜೀವಿಕಾನಿರ್ವ ಹಣದ ಉದ್ಯೋಗವೂ ಎನಿಸಿದೆ ಆ ಅರಬ ಪ್ರಪಂಚದಲ್ಲಿ— ಅದೂ ಈ ೨೦ ನೆಯ ಶತ ಮಾನದಲ್ಲಿ! ಸೂಡಾನ್, ಸೋಮಾಲಿಲ್ಯಾಂಡ್ ಸೌದಿ ಅರೇಬಿಯ, ಯೆಮೆನ್ ಮುಂತಾದ ಮುಸಲ್ಮಾನ ಪ್ರಭುತ್ವಗಳಲ್ಲಿ ದಾಸವಿಕ್ರ ಯವು ನಡೆಯುತ್ತಿರುವುದು ಮಾನವ ಕುಲಕ್ಕೇ ಅವಮಾನ ತರುವಂಥದೆನಿಸಿದೆ. ೩ ರಿಂದ ೮ ವರ್ಷದೊಳಗಿನ ಮಕ್ಕ ಳನ್ನು ಕಳುಹುದು ಅಲ್ಲಿ ಜನಜನಿತವಾಗಿ ಸಾಗಿದೆ. ಕದ್ದ ಮಕ್ಕಳನ್ನು ದೂರ ಸಾಗಿಸಿ ಅವರಿಗೆ ತಮ್ಮ ಮುಂದಿನ ಕರ್ತವ್ಯದಲ್ಲಿ ಶಿಕ್ಷಣ ವನ್ನೂ ಕೊಡುಗಿಯರಿಗೆ ನಾಡಲು. ಕಮ


[illegible] ಸುಡಾನಿನ [illegible] ಕುವುದು ಅಲ್ಲಿಯ [illegible] ಕಂಡ [illegible] ದಾಸಕನ್ಯೆಯರಿಂದ ೯೦೦ [illegible] ಉತ್ಪನ್ನವೂ [illegible] ಡಾಲರ್ ಆದಾಯವೂ [illegible] ತ್ತದೆ. ಹೀಗೆ ಸ್ತ್ರೀಪುರುಷರ ಕಾಮ ಜೀವನದ ಅಮಾನುಷ ಯುಕ್ತಿಯಿಂದ ಈ ಕಾಮುಕತೆಯಲ್ಲಿ [illegible] ದಾಸಿಯರ ಅವಶ್ಯಕತೆ ದಕ್ಷಿಣ ಅರೇಬಿಯ ದಲ್ಲಿ ಹೆಚ್ಚಾಯಿತೆಂದೂ ಇದು ಕೇವಲವಾಗಿ ಅವರ ಧರ್ಮೋಪದೇಶದ ಪರಿಣಾಮ ವೆಂದೂ ಡಾ. ಕಾರ್ಸ್ವರರು ಅಭಿಪ್ರಾಯ ಪಡು ತ್ತಾರೆ.

ಸಂ. ರಾ. ಸಂಘದ ಪ್ರಯತ್ನ

ಅರಬ್ಬೀ ಹೆಂಡಂದಿರಿಗಿಂತ ದುರುಪಯೋಗಿ ಸಲ್ಪಟ್ಟು ಕಡಿತನದಲ್ಲಿರುವ ಹೆಂಗಸರು ಜಗ ತ್ತಿನಲ್ಲಿ ಮತ್ತೆಲ್ಲೂ ಇಲ್ಲವೆಂದೂ ಕುರಾನಿನ ಉಪದೇಶದಿಂದ ಕ್ಷುಬ್ಧವಾದ ಅಲ್ಲಿಯ ಗಂಡ ಸರ ಕಾಮವೃತ್ತಿ ಸದಾ ಉದ್ರಿಕ್ತವಿರುವುದ ರಿಂದ ಅವರಷ್ಟು ದುಃಖಿಗಳಾದ ಗಂಡಂದಿರು ಇನ್ನೆಲ್ಲೂ ಇಲ್ಲವೆಂದೂ ಕಂಡವರು ಹೇಳು ತ್ತಾರೆ. ಹೆಂಗಸರು ಮತ್ತು ಮಕ್ಕಳನ್ನು ವಸ್ತುಗಳಂತೆ ನಡೆಸಿಕೊಳ್ಳುವುದನ್ನು ತಡೆ ಯಲು ಕೆಲವು ರಾಜ್ಯಗಳಿಗೆ ಆ ವಿಷಯವಾಗಿ ವರದಿ ಒಪ್ಪಿಸಲು ಸಂಘಪತ್ರವನ್ನು ಕಳಿಸಲಾಗಿ ರಲಿಯಾವು ತಮ್ಮಲ್ಲಿ ಅಂಥ ಪರಿಸ್ಥಿತಿ ಇಲ್ಲವೆಂಬು ವಾದದಿಂದ ವರದಿಯನ್ನು ಕಳಿಸಲಿಲ್ಲ; ಉಳಿದ ರಾಜ್ಯಗಳು ವರದಿ ಕಳಿಸಿದವು. ಆದರೆ ಎಲ್ಲ ರಾಜ್ಯಗಳಿಗಿಂತಲೂ ಅತಿಶಯವಾಗಿ, ಅಸಾಧಾರಣವಾಗಿ ಈ ದಾಸಕೃತ್ಯ ನಡೆಯುತ್ತಿ ರುವ ಸೌದಿ ಅರೇಬಿಯ ಮತ್ತು ಯೆಮೆನ್ ರಾಜ್ಯಗಳು ವರದಿಯನ್ನು ಒಪ್ಪಿಸಲೇ ಇಲ್ಲ.







ನವು ಅವಳ ಗುಂಪಿನ ಗುರುತುಗಳು; ಮೂಗಿನ ಮೇಲಿನವು ಅವಳಿಗೆ ತ್ರಿಪುರ ಸುಂದರಿ ಬಿರುದಿತ್ತ ಸೌಂದರ್ಯಚಿಹ್ನಗಳು! ಅವಳ ಯೌವನ ಪೂರ್ಣ ಸೌಂದರ್ಯ ಮತ್ತು ಬೆಳ್ಳಿಯ ಒಡವೆ ವಸ್ತುಗಳು ಅವಳು ಅರಬರ ಪ್ರಿಯತಮೆ ಯಾದ "ನೆರವಿನಾಕೆ" ಎಂಬುದನ್ನು ಸೂಚಿ ಸುತ್ತವೆ. ಎರಡನೆಯವಳಾದ "ದ್ರೌಪದಿ" ನಿಗ್ರೋ ಹುಡುಗಿ, ಅಬಿಸೀನಿಯದ ಹರ್ರಾರ್ ಪ್ರದೇಶದವಳು. ಬಡ ಅರಬರಿಗೆ ಇವಳೇ ತ್ರಿಲೋಕಸುಂದರಿ. ೧೨ ಕ್ಕಿಂತ ಹೆಚ್ಚು ವರ್ಷ ವಯಸ್ಸಾಗದಿದ್ದರೂ ಇವಳು ಬಹಳ ಅನು ಭವಸ್ಥ ರೂಪಾಜೀವೆಯೆನಿಸಿಬಿಟ್ಟಿದ್ದಾಳೆ! ಮೂರನೆಯವಳಾಗಿರುವ "ಸೀತೆ" ಗ್ರೀಕ್ ಮತ್ತು ಅಬಿಸೀನಿಯನ್ನರ ಮಿಶ್ರಣದಿಂದ ಹುಟ್ಟಿದ ಅಪ್ಸರೆ. ಇವಳ ಒಡೆಯ ಇವಳ ಮೂಲಕ ಅಪಾರ ಧನವನ್ನು ಗಳಿಸಿ ಕುಬೇರ ನಾಗಿದ್ದಾನೆ. ನಾಲ್ಕನೆಯವಳೆನಿಸಿದ "ತಾರೆ" ಅರಬಕುಬೇರರಿಗೆ ಮೆಚ್ಚಿಗೆಯಾದ ಮಾದ ರಿಯ ಹುಡುಗಿ, ರೂಪರಾಣಿ. ಇವಳು ಎತಿಯೋಪಿಯದ ತಜ್ಞಳಾದ ವೇಶ್ಯೆ. ಈ ಸಾಲಿಗೆ ಸೇರಿದ ಶ್ರೀಮಂತಿಕೆಯ ದರ್ಪವುಳ್ಳ ನಿಕ್ಕಸುಮಂಗಲಿಯರು ಭಾವಚಿತ್ರ ತೆಗೆದುಕೊ ಳ್ಳಲು ಒಪ್ಪರು, ಮಾತಿಗೆ ಮಾತುಗೊಡರು. ರೂಪಗರ್ವದಿಂದ— ಅದಕ್ಕಿಂತ ಹೆಚ್ಚಾಗಿ ತಮ್ಮ ಒಡೆಯನ ರಕ್ಷಣೆ ಮತ್ತು ರೊಕ್ಕದ ಸೊಕ್ಕಿನಿಂದ— ಮೊಗದಿರುಹಿ ನಿಲ್ಲುವರು. ಕೊನೆಯವಳಾದ, "ಮಂಡೋದರಿ," ಮಧ್ಯ ಪ್ರಾಚ್ಯದಲ್ಲಿರುವ ಕಣ್ಣುಬೇನೆಗೆ ತುತ್ತಾದ ಆಫ್ರಿಕದ ಸೌಂದರ್ಯಲಹರಿ. ಕಣ್ಣು ಹೋದರೂ ಹೆಣ್ಣು ಹೆಣ್ಣೇ —ಕೊರಳಲ್ಲಿ ಬೆಳ್ಳಿಯ ಸರ ಧರಿಸಿ ನಿಂತು ಬಿಟ್ಟಳೆಂದರೆ! "ಹೆಣ್ಣು" ಎಂದರೆ ಸೌಂದರ್ಯವೆಂದು ಅರ್ಥವ ಲ್ಲವೆ ಕಾಲಿವುಡ್ ವಿಚಾರದ ಪ್ರಕಾರ? ಇದು ಸೌಂದರ್ಯ ತತ್ವಕ್ಕೆ ತರ್ಕಶುದ್ಧ ಲಕ್ಷಣ!

ಸೌದಿ ಅರೇಬಿಯದಲ್ಲಿ ಇಂಥ "ಇಂದ್ರ ಜಾಲ

ಕೇವಲ ನೂರಕ್ಕೆ ೫ ಮಂದಿ ಹೆಂಗಸರು ಪತಿ ವ್ರತೆಯರಾಗಿ ಉಳಿದಿರುವರು. ಬಹಳ ಒಳ್ಳೆಯ ನಾಗರಿಕ ಗಂಡ ಹೆಂಡಿರಿರುವ ದೇಶವೆನ್ನಬೇ ಕಲ್ಲವೆ ಸುಡಾನನ್ನು! ಬಹಳ ಜನ ಹೆಂಗ ಸರು ೬ ರಿಂದ ೧೮ ಸಲ ಮದುವೆಯಾಗುತ್ತಾ ರೆಂದ ಮೇಲೆ ಮದುವೆಗೂ ವೇಶ್ಯಾವೃತ್ತಿಗೂ ಏನಾದರೂ ವ್ಯತ್ಯಾಸವುಂಟೋ? ಪೂರ್ವಕ್ಕೆ ಹೋದ ಹಾಗೆ ಗಣಿಕೆಯರ್ು ಮದುವೆಯಾಗಿ ಗರತಿಯರಾಗಿ ಬಾಳುವುದು ರೂಢಿಯಂತೆ. ಈ ವೇಶ್ಯೆಯರ ಹಾವಳಿಗೆ ಗಂಡಂದಿರ ಕುರಾನ್ ಜ್ಞಾನ, ಆ ಹೆಂಗಸರ ಅನೈಸರ್ಗಿಕಚಂಡಿತನ ಇವುಗಳೇ ಕಾರಣವೆಂದು ತಿಳಿದುಬಂದಿದೆ.


ಕುರಾನಿನ ಪ್ರಭಾವ

ಈ ಗಂಡಸರ ಕುರಾನಿನ ಜ್ಞಾನವೆಂದರೆ ಒಂದು ದೊಡ್ಡ ಕುಜ್ಞಾನ. ೨, ೪, ೨೪, ೬೬ ನೆಯ ಅಧ್ಯಾಯಗಳಲ್ಲಿ ಕಾಮ ಪ್ರವೃತ್ತಿಗೆ ಕುರಾನ್ ಮತ್ತು ಸಾಮಾಜಿಕ ಪದ್ಧತಿಗಳು ನಿರಂಕುಶತೆಯನ್ನು ಕೊಟ್ಟಿವೆ ಯೆಂದು ಅರಬ ತರುಣರು ಭಾವಿಸಿದ್ದಾರೆ. ಈ ತಿಳವಳಿಕೆಯ ಪರಿಣಾಮವಾಗಿ ಅರಬ ಸ್ತಾನದಲ್ಲಿ ಹೆಂಗಸರು ಗಂಡಸೆಂದರೆ ಹುಲಿ, ಕರಡಿ, ಇಲ್ಲವೆ ಸಿಂಹ ಎಂದು ತಿಳಿದು ಪ್ರಥಮ ಸಮಾಗಮದಲ್ಲೇ ಗಂಡನನ್ನು ಇರಿದು ಕೊಲ್ಲುವಂಥ ಭೈರವೀ ಲೀಲೆಯನ್ನು ಪ್ರದ ರ್ಶಿಸಿ ತಮ್ಮ ಮತ್ತು ತಮ್ಮ ಗಂಡಂದಿರ ಬಾಳಿನ ಭವಿತವ್ಯವನ್ನೇ ಪಾತಾಳದಲ್ಲಿ ಮುಳು ಗಿಸಿಬಿಡುತ್ತಾರೆ. ಒಬ್ಬಳು ನವವಧು ಒಮ್ಮೆ ಗಂಡನು ಪ್ರವೇಶಿಸಿದಾಗ ಮೂಲೆಯಲ್ಲಿ ಬಟ್ಟೆಯ ಬಣಬೆಯಂತೆ ಅಡಗಿದ್ದು ಅವನು ಪ್ರೀತಿವಾತ್ಸಲ್ಯದಿಂದ ಮಾತನಾಡಿಸಹೋದಾಗ ಕಾದುಬೆಕ್ಕಿನಂತೆ ಅವನ ಮೈಮೇಲೆ ಹಾರಿ ಚೀರಿ, ಮೈತುಂಬ ಚಿವುಟಿ ಉಗುರಿಂದ ಪರಚಿ ಓಡಿಸಿಬಿಟ್ಟಳಂತೆ. ಆನಂತರ ಅವನು ವೇಶ್ಯೆ ಯರನ್ನು ಅನಿವಾರ್ಯವಾಗಿ ಹುಡುಕಬೇಕಾ

ದೇಹದ ಸೌಂದರ್ಯವನ್ನು ಹೆಚ್ಚಿಸಿಕೊಂಡು ಗಂಡಸರನ್ನು ಸಂತೋಷಗೊಳಿಸುವ (ನಾಗ ರಿಕ?) ವಿದ್ಯೆಯನ್ನು ಕಲಿಸಿ. ಹುಡುಗರು ೧೦–೧೨ ಕ್ಕೂ ಹುಡುಗಿಯರೂ ೧೦—೧೬ ರಕ್ಕೂ ಮುಟ್ಟಿದೊಡನೆ ಹಡಗಿನಲ್ಲಿ ತುಂಬಿ ಅನ್ಯದೇಶಗಳಿಗೆ ಕಳಿಸಲಾಗುವುದು. ಒಮ್ಮೆ ಒಂದೆಡೆ ೩೦೨ ಹುಡುಗ ಹುಡುಗಿಯರನ್ನು ಜೀವಿಹಾಕಿ ಹಡಗಿನಲ್ಲಿಟ್ಟು ಅವರ ಮೇಲೆ ಎತಿಯೋಪಿಯದ ಕಾಫಿ ಚೀಲಗಳನ್ನು ಹೇರಿ ಒಯ್ಯಲಾಗುತ್ತಿತ್ತಂತೆ; ಆಕಸ್ಮಾತ್ತಾಗಿ

ಕೆಂಪು ಸಮುದ್ರವೆಂದರೆ ಈ ಅಮಾನುಷ ವ್ಯಾಪಾರಪ್ರಪಂಚದ ಕೇಂದ್ರವಾಗಿದೆ. ಇಸ್ಲಾಂ ಲೋಕಕ್ಕೇ ಏಕೆ, ಇಡೀ ನಾಗರಿಕ ಜಗತ್ತಿಗೇ ಈ ದುರ್ನೀತಿ ಲಾಂಛನಾಸ್ಪದವಾಗಿದೆಯೆಂಬು ದನ್ನು ತಿಳಿದರೆ ಸಭ್ಯರಿಗೆ ಮೈ ಜುಮ್ಮೆನಿಸದಿ ರದು! ಈ ವಿಷಯದಲ್ಲಿ ಎಲ್ಲರೂ— ಅದರಲ್ಲೂ ಇಸ್ಲಾಂ ಅನುಯಾಯಿಗಳು ವಿಶೇಷತಃ— ಪ್ರಯತ್ನಿಸಿ ಇಂಥ ವ್ಯವಹಾರವನ್ನು ನಿಲ್ಲಿಸ ಬೇಕಾದುದು ಅತ್ಯಾವಶ್ಯಕವಲ್ಲವೇ?

([illegible])



[illegible]

ವಿವಿಧ ಪ್ರಪಂಚ

ಗರ್ಭಿಣಿಯರ ಪೋಷಣೆ

ಬ್ರೂಕ್ ಬ್ಲಿವೆನ್ನರ ಪ್ರಕಾರ ಪ್ರಸವವೇದನೆಯಿಂದ ಅನೇಕ ಸ್ತ್ರೀಯರು ಬಹಳವಾಗಿ ನರಳುವುದು ಮತ್ತು ದುರ್ಬಲ ಸಂತತಿಯನ್ನು ಪಡೆಯುವುದು ಇದಕ್ಕೆ ಗರ್ಭಿಣಿಯರಾಗಿದ್ದಾಗ ಅವರು ಆಹಾರ ನಿಯಮವನ್ನು ಸರಿಯಾಗಿ ಪಾಲಿಸದಿದ್ದುದೇ ಕಾರಣ. ಅಮೇರಿಕದ ತಜ್ಞರು ಅನೇಕ ಗರ್ಭಿಣಿಯರನ್ನು ಪರೀಕ್ಷಿಸಿ ಅವರ ಆಹಾರ ನಿಯಮಗಳನ್ನು ಈ ಕೆಳಗಿನಂತೆ ನಿರ್ಧರಿಸಿದ್ದಾರೆ:

(೧) ದಿನವೂ ಒಂದು ಹೊಸ ಹಣ್ಣನ್ನು ತಿನ್ನಬೇಕು, ಒಂದು ಲೋಟಕ್ಕಿಂತ ಹೆಚ್ಚು ಹಣ್ಣಿನ ರಸವನ್ನು ಸೇವಿಸಬಾರದು.

(೨) ಎರಡು (ಚಹದ) ಬಟ್ಟಲಷ್ಟು ಬೆಂದ ತರಕಾರಿಗಳನ್ನು ದಿನದಲ್ಲಿ ತೆಗೆದುಕೊಳ್ಳತಕ್ಕದ್ದು.

(೩) ಹಣ್ಣು, ತರಕಾರಿ, ಸೊಪ್ಪು ಮುಂತಾದವುಗಳಿಂದ ತಯಾರಿಸಿದ ಹುಳಿ, ಹುಳಿಪಲ್ಯ, ಬಜ್ಜಿ ಅಥವಾ ತೊವ್ವೆಯನ್ನು ಬಳಸಬೇಕು.

(೪) ೩ ತೊಲೆ ಬೆಣ್ಣೆ ಇಲ್ಲವೆ ೨ ಚಮಚ ಎಣ್ಣೆಗೀತ ಹೆಚ್ಚನ್ನು ತೆಗೆದುಕೊಳ್ಳಕೂಡದು.

(೫) ಅನ್ನವನ್ನು ಎರಡು ಸಲ ಹಾಕಿಸಿಕೊಳ್ಳಬೇಕು ಮತ್ತು ಒಂದು ತತ್ತಿ ಇಲ್ಲವೆ ಸ್ವಲ್ಪ ಗೋದಿಯ ಪದಾರ್ಥವನ್ನು ಸೇವಿಸಬೇಕು.

(೬) ೧೫ ತೊಲೆಯಷ್ಟು ಮಾಂಸ ಇಲ್ಲವೆ ಉದ್ದಿನ ಭಕ್ಷ್ಯವನ್ನು ತಿನ್ನಬೇಕು. ಲಿಂಬೆಯ ರಸ ಜೊತೆಗಿದ್ದರೆ ಒಳ್ಳೆಯದು.

(೭) ೩ ಬಟ್ಟಲು ಹಾಲು ಹೊಟ್ಟೆಗೆ ಬೀಳಬೇಕು ಮತ್ತು ೮ ಬಟ್ಟಲಿಗಿಂತ ಹೆಚ್ಚು ನೀರನ್ನು ಕುಡಿಯಬಾರದು.

(೮) ಅದಷ್ಟು ಮಟ್ಟಿಗೆ ಉಪ್ಪು ಮತ್ತು ಉಪ್ಪು ಹೆಚ್ಚಾಗಿರುವ ಆಹಾರವನ್ನು ಬಿಡಬೇಕು.

ಮೇಲಿನದು ದಿನವೊಂದರ ಭೋಜನ ಪ್ರಮಾಣ. ೩ ಸಲ ಆಹಾರ ತೆಗೆದುಕೊಳ್ಳುವವರು ಅದನ್ನೇ ದಿನಕ್ಕೆ ೬ ಸಲ ತೆಗೆದುಕೊಳ್ಳಬೇಕು. ಅಲ್ಲದೆ ಹದಿನೈದು ದಿನಗಳಿಗೊಮ್ಮೆ ಸ್ವಲ್ಪ ಹರಳೆಣ್ಣೆಯನ್ನು ಲಿಂಬೆಯ ರಸದಲ್ಲಿ ತೆಗೆದುಕೊಳ್ಳಬೇಕು; ಹೆಚ್ಚು ಬಿಸಿಯಿರದ ನೀರಿಂದ ತೈಲಾಭ್ಯಂಜನವನ್ನು ತೆಗೆದುಕೊಳ್ಳಬೇಕು. ಈ ಚಿಕಿತ್ಸೆಗಳಿಂದ ನರನಾಡಿಗಳ ಬಗ್ಗು ಹೋಗಿ ಹಾಯೆನಿಸುವುದಲ್ಲದೆ ಶಿಶುವಿಗೆ ತಕ್ಕ ಪೋಷಣೆ ದೊರೆತು ಅದು ಆಯಾಸ ಪಡದೆ ಮತ್ತು ಕೊರದೆ ಆರೋಗ್ಯದಿಂದ ಜಗತ್ತಿನ ಬೆಳಕನ್ನು ಕಾಣುವುದು.

ರಾಜರೋಗ

ರಾಜಕೀಯ ಭ್ರಮು ('Royal Disease') ಎಂಬುದು ಅಗರ್ಭ ಶ್ರೀಮಂತ ಕುಲದವರಿಗೆ ಹಿಡಿವ ಒಂದು ರೋಗ. ನ್ಯೂಯಾರ್ಕಿನ ವಂಶಗುಣ ಶೋಧದಲ್ಲಿ ತಜ್ಞನೊಬ್ಬನು ಇತ್ತೀಚೆಗೆ ಇಂಗ್ಲೆಂಡಿನ ಎಲಿಜಬೆತ್ ರಾಣಿಗೆ ಹುಟ್ಟಲಿರುವ ಮಗುವಿಗೆ 'ಹೆಮೊಫಿಲಿಯ' ಎಂಬ ರಾಜರೋಗ ಅಂಟಬಾರದೆಂದು ಹೇಳಿದ್ದಾನೆ!

ತಜ್ಞನಾದ ಡಾ. ಇಲ್ಲಿಸ್ಸನು ಈ ರೋಗ ಹಿಡಿದ ಕೆಲವರು ರಕ್ತಪಾತದಿಂದ ಮರಣ ಹೊಂದಿರುವುದನ್ನು ಉದಾಹರಿಸುತ್ತಾನೆ. ರಾಜತ್ವದ ಅತ್ಯಾವೇಶವು ಒಂದು ಬುದ್ಧಿವಿಕಾರವಾಗಿ ಹೃದಯದಲ್ಲಿ ಥೊಕ್ಕರೆ ಹೃದಯವು ಅದರ ವೇಗವನ್ನು ತಡೆಯಲಾರದೆ ರಕ್ತಸ್ರಾವಕ್ಕೆ ಎಡೆಗೊಡುವುದೆಂದು ಗೊತ್ತಾಗಿದೆ. ಇಂಥ ರೋಗಗಳು ಮಾನಸಿಕ; ಭಾವೋದ್ರೇಕಕ್ಕೆ ಕಾರಣವಾಗಿ ದೇಹದ ಮೇಲೆ ದುಷ್ಪರಿಣಾಮವನ್ನುಂಟು ಮಾಡತಕ್ಕವು.

ಇಲ್ಲಿಸ್ಸನು 'ಮುಂಡೆಲ್ ಮ್ಯೂಸಿಯಂ' ಎಂಬ ಒಂದು ಕಾರ್ಯಾಲಯವನ್ನು ವರ್ಜೀನಿಯದಲ್ಲಿ ತೆರೆದಿದ್ದಾನೆ. ವರ್ಜೀನಿಯ ವಿಶ್ವವಿದ್ಯಾಲಯದ ಜೀವಶಾಸ್ತ್ರ ಪ್ರಾಧ್ಯಾಪಕರೆದು ಜೊತೆಗೆ ಈ ಕಾರ್ಯಾಲಯದಲ್ಲಿ ಇಂಥ ಬುದ್ಧಿವಿಕಾರ ಶೋಧವನ್ನು ನಡೆಸುತ್ತಿದ್ದಾನೆ. ಇದರಿಂದ ಭಾವನಾಪ್ರಧಾನರು ದೌರ್ಬಲ್ಯದಿಂದ ಆಗಬಹುದಾದ ಅನಾಹುತಗಳನ್ನು ತಡೆಯಲು ತಮ್ಮ ಬುದ್ಧಿಯನ್ನು ಬೆಳೆಸಿಕೊಳ್ಳಬೇಕಾದ ಮುಂಜಾಗ್ರತೆ ವಹಿಸಬೇಕೆಂಬ ಪಾಠವನ್ನು ಕಲಿಯಬೇಕಲ್ಲವೆ? ಜಂಗಸರಿತ್ತ ಮೊದಲು ಲಕ್ಷ್ಯ ಕೊಡಬೇಕು.

ಅನಿದ್ರೆ ಮತ್ತು ಅತಿನಿದ್ರೆ

ಅಮೇರಿಕದ ನೆಬ್ರಾಸ್ಕ ವಿಶ್ವವಿದ್ಯಾನಿಲಯದ ವೈದ್ಯಶಾಲೆಯಲ್ಲಿ ಕೆಲಸ ಮಾಡುವಂಥ ಹರ್ಮನ್ ಜೆ. ಜಾರರು ಚಿಕ್ಕಂದಿನಲ್ಲಿ ತಾಯ್ತಂದೆಗಳು ಒತ್ತಾಯದಿಂದ ಮಕ್ಕಳನ್ನು ನಿದ್ದೆಮಾಡಿಸುವದರಿಂದ ಬೆಳೆದ ಮೇಲೆ ಅವಕ್ಕೆ ನಿದ್ದೆಗೇಡು ತಗುಲಿಕೊಳ್ಳುತ್ತದೆ ಎಂದು ಬರೆಯುತ್ತಾರೆ.

ಅನಿದ್ರೆಗೆ ತುತ್ತಾದವರಲ್ಲಿ ಎರಡು ಬಗೆಯವರಿದ್ದಾರೆ: ಆರೋಗ್ಯವಂತರಿದ್ದೂ ಸುಳ್ಳು ವಿಚಾರಗಳನ್ನಿಟ್ಟುಕೊಂಡವರು ಮತ್ತು ಶಾರೀರಿಕ ನೋವು ನರಿಯುಳ್ಳವರು ಎಂದು. ಮೊದಲ ವರ್ಗದವರ ಸಮಸ್ಯೆಯೇ ಬಲವತ್ತರವಾದುದು. ಅಂಥವರು ಭಾವಾವೇಗವುಳ್ಳ, ಚಿಂತಾಮಗ್ನ, ಅದಮ್ಯವ್ಯಕ್ತಿಗಳಿರುತ್ತಾರೆ. ಅವರ ಮುಖ್ಯ ಚಿಂತೆಯೆಂದರೆ 'ನಾನು ಹೇಗೆ ನಿದ್ದೆಯನ್ನು ಪಡೆಯಲಿ?' ಎಂಬುದೇ ಆಗಿದೆ. ನಿದ್ದೆಮಾಡಬಲ್ಲೆನೆಂಬ ವ್ಯಥ ವಿಶ್ವಾಸವೊಂದೇ ಅದಕ್ಕೆ ಮದ್ದು.

ಸ್ವಾಭಾವಿಕವಾಗಿ ನಿದ್ದೆ ಕಡಿಮೆಯಿದ್ದರೆ ಅದೊಂದು ದೋಷವಲ್ಲವೆಂದು ಡಾ. ರಾಬರ್ಟ್ ಕಿಂಗಮನ್ ಬರೆಯುತ್ತಾನೆ. ಜಗತ್ತಿನಲ್ಲಿ ಒಬ್ಬನಿಗಿರುವ ಆಸಕ್ತಿಯನ್ನು ಅದು ತೋರಿಸುತ್ತದೆ ವಿಚಾರಶೀಲತೆ, ಚಟುವಟಿಕೆ, ಕಾರ್ಯಮಗ್ನತೆಗಳನ್ನು ಅದು ಸೂಚಿಸುತ್ತದೆ. ಹಾಗಲ್ಲದೆ ಜಡ ಕಾರ್ಯಯಂತ್ರದಲ್ಲಿ ಸಿಲುಕಿದವರಿಗೆ ಅನಾಸಕ್ತಿ ಹುಟ್ಟಿ ವಿಚಾರಶೂನ್ಯತೆಯಿಂದ ಬೇಡವಾದರೂ ನಿದ್ರೆ ಬರಬಹುದು. ಮರದ ತುಂಡಿನಂತೆ ನಿದ್ರಿಸುವವರಿಗೆ ಎಚ್ಚರಾದಾಗ ಮೈ ಮರವಟ್ಟು ಹೋಗಿರುವುದೆಂದೂ ಅತ್ತಿತ್ತ ಉರುಳುತ್ತ ನಿದ್ರಿಸುವುದೇ ಆರೋಗ್ಯಕರವೆಂದೂ ಡಾ. ಜಾರನ ಶೋಧ.

ಅತಿನಿದ್ರೆಯನ್ನು ಗೆಲ್ಲಲು ಕ್ರಮೇಣ ಮನಸ್ಸನ್ನು ವಿಚಾರಮಯವನ್ನಾಗಿಮಾಡಿ, ವಿವಿಧ ಕಾರ್ಯಗಳಲ್ಲಿ ಆಸಕ್ತಿಯನ್ನು ವಹಿಸಿ, ವಾಸ್ತವ ಜಗತ್ತಿನೊಡನೆ ವಿಶೇಷೋತ್ಸಾಹದಿಂದ ವಿಶಾಲ ವ್ಯವಹಾರ ನಡೆಸತೊಡಗಬೇಕು ಎಂದು ಕಿಂಗ್‌ಮನ್ನ ನೆನ್ನುತ್ತಾನೆ. ಪ್ರಾಯ ಬಂದಮೇಲೆ ಅತಿನಿದ್ರೆಯಿದ್ದರೆ ಅದರಿಂದ ದೇಹ ಮತ್ತು ಬುದ್ಧಿಗಳಲ್ಲಿ ಮಾಂದ್ಯ ಉಂಟಾಗುವದೆಂಬುದನ್ನು ಯುವ ಯುವತಿಯರು ಮರೆಯಬಾರದು.

ಮೈಬಾಡಿಗೆ

ಒಡಲನ್ನು ಬಾಡಿಗೆಗೆ ಕೊಡುವ ಅಥವ ಅನಾಗರಿಕ ವೃತ್ತಿ ಇತಿಹಾಸ ಕಾಲದಿಂದ ನಡೆದು ಬಂದುದು. ಚಿಕ್ಕಂದಿನಲ್ಲಿಯೇ ತಜ್ಞ ಕಸಬಿಯೊಬ್ಬಳು ಮಗಳನ್ನು ಬಲಾತ್ಕಾರದಿಂದ ಈ ವೃತ್ತಿಗೆ ನೂಕಿದ್ದಕ್ಕೆ ಇತ್ತೀಚೆಗೊಂದು ಉದಾಹರಣೆ ನಡೆಯಿತು.

ಮುಂಬಯಿಯ ಮಾತುಂಗಾದಲ್ಲಿಯ ಒಬ್ಬ ಶ್ರೀಮಂತ ತಾಯಿ ತನ್ನ ಮಗಳನ್ನು ಒತ್ತಾಯದಿಂದ ವೇಶ್ಯಾವೃತ್ತಿಗೆ ನೂಕಿದ್ದು ಕೋರ್ಟಿನ ದೃಷ್ಟಿಗೆ ಬಿದ್ದಿತು. ಮಾಣಿಕಬಾಯಿ ಉರ್ಫ ಮಾಕಿಬಾಯಿ ಎಂಬಾಕೆ ಕಿಂಗ್ಸ್ ಸರ್ಕಲ್ಲಿನ ಒಬ್ಬ ಮನೆಯ ಯಜಮಾನನಾದ ಚತುರ್ಭುಜ ಬಿ. ಮುಖಾನಿಯ ಹೆಂಡತಿ. ಅವಳು ಅನೇಕ ಕುಲವಧುಗಳನ್ನು ದುರ್ನೀತಿಗೆಳೆದುದಲ್ಲದೆ ಸ್ವತಃ ತನ್ನ ೨೯ ವರ್ಷ ವಯಸ್ಸಿನ ಮದುವೆಯಾದ ಮಗಳನ್ನೀಗ ದುವ್ರ್ಯತ್ತಿಗೆ ನೂಕಿದ್ದನ್ನು ಗುಪ್ತ ಪೋಲೀಸರು ಬೆಳಕಿಗೆ ತಂದಿದ್ದಾರೆ. ಗುಪ್ತ ಪೋಲೀಸರು ಗುರುತು ಮಾಡಿದ ೫೦೦ ರೂಪಾಯಿಯ ನೋಟುಗಳನ್ನು ಅವಳಿಗೆ ಕೊಡಬೇಕಾಯಿತಂತೆ. ಹೀಗಿತ್ತು ಅವಳ ವ್ಯಾಪಾರದ ದರ!

ಲಂಚಕೋರರೂ ವೇಶ್ಯೆಯರೂ ಅನಾಗರಿಕತೆಯ ಕಿರೀಟಗಳೆಂದರೆ ಯಾರೂ ಸಿಟ್ಟಿಗೇಳಬೇಕಾಗಿಲ್ಲ ಮೊದಲನೆಯವರು ಉಪಾಯವನ್ನು ಬುದ್ಧಿಚಾತುರ್ಯವನ್ನು, ಅಭಿಪ್ರಾಯವನ್ನು ಬಾಡಿಗೆಗೆ ಕೊಟ್ಟರೆ ಎರಡನೆಯವರು ಮನದ ಜೊತೆಗೆ ಮೈಯನ್ನೇ ಬಾಡಿಗೆಗೆ ಕೊಡುತ್ತಾರೆ. ರಾಷ್ಟ್ರದ ನಾಗರಿಕತೆಯ ಬೇರಿಗೆ ಈ ಗೆದ್ದಲು ಹುಳಗಳ ಕಾಟ ತಪ್ಪದಿದ್ದಲ್ಲಿ ಅದರ ರಾಷ್ಟ್ರೀಯ ಶೀಲ, ಗೌರವ ಉಳಿಯಲಾರದು; ಕಾಡಾಡಿತನಕ್ಕೀಡು ವಿನಾಶೋನ್ಮುಖವಾಗದಿರದು. ಯುವ ಜನರು ಅಹೋರಾತ್ರ ಪ್ರತಿಭಟಿಸಿ ಈ ದುರ್ವ್ಯಾಪಾರವನ್ನು ನಿಲ್ಲಿಸುವುದು ಪ್ರಥಮ ಕರ್ತವ್ಯವಲ್ಲವೆ?

ಅಪಹೃತ ಸ್ತ್ರೀಯರ ಸ್ವೀಕಾರ

ಹಿಂದು ಧರ್ಮದಲ್ಲಿ ಬಹಿಷ್ಕಾರಕ್ಕೆ ಅಗತ್ಯವಾದ ಎಷ್ಟೋ ನಿಯಮಗಳನ್ನು ಧರ್ಮಶಾಸ್ತ್ರಗಳು ಹೇಳುವುವು; ಆದರೆ ಸ್ವೀಕಾರಕ್ಕೆ ಅವಕಾಶವೇ ಇಲ್ಲ. ಇದೇ ಹಿಂದು ಧರ್ಮದ ವಿನಾಶಕ್ಕೆ ದೊಡ್ಡ ಕಾರಣ ಎಂಬ ಅಭಿಪ್ರಾಯವನ್ನು ಕವಿರವೀಂದ್ರರು ಒಮ್ಮೆ ವ್ಯಕ್ತಪಡಿಸಿದ್ದುಂಟು. ಪತಿತರನ್ನು (ಯತ್ನತಃ ಅಥವಾ ಅಯತ್ನತಃ ಭ್ರಷ್ಟರಾದವರನ್ನು) ಉದ್ಧರಿಸದ ಧರ್ಮವನ್ನು ಧರ್ಮವೆನ್ನಲಾಗದು. ಈ ಮಾತಿಗಿಂದು ವಿಶೇಷತಃ ಪ್ರಾಮುಖ್ಯ ಬಂದಿದೆ.

ಅಪಹೃತ ಸ್ತ್ರೀಯರನ್ನು ಪುನಃ ಸ್ವಸ್ಥಾನಕ್ಕೆ ಮುಟ್ಟಿಸಲು ಹಿಂದೀ ಸರಕಾರವು ಭಗೀರಥ ಯತ್ನ ನಡೆಸಿದೆ. ಆದರೆ ಕೆಲವೆಡೆ ಶೋಧವಾದರೂ ಅಪಹಾರಕರ ದುರ್ಬೋಧದಿಂದ ಕಂಗೆಟ್ಟು ಆ ಹೆಂಗಸರು ಕರೆಯಲು ಹೋದರೆ ನಿರಾಶಾಭಯದಿಂದ ಬರುವುದಿಲ್ಲವೆಂಬರಂತೆ. ಇದಕ್ಕೆ (೧) ಭವಿಷ್ಯದ ಭಯ, (೨) ಸಾರ್ವಜನಿಕ ನಿಂದೆಯ ಭಯ, (೩) ತಮ್ಮ ಮನೆಯವರು, ಸಂಬಂಧಿಗಳು ಮತ್ತು ಜಾತಿಯವರು ಸ್ವೀಕರಿಸುವರೋ ಇಲ್ಲವೋ ಎಂಬ ಸಂದೇಹ, (೪) ಗೌರವ ಕಳೆದುಕೊಂಡದ್ದಕ್ಕಾಗಿ ಅವಮಾನ, ನಾಚಿಕೆ, (೫) ಬಸುರಿಯರಿದ್ದಲ್ಲಿ ಮಗುವನ್ನು ಕಳೆದುಕೊಳ್ಳಬೇಕಾಗಬಹುದೆಂದೂ ಅದನ್ನು ಉಳಿಸಲಾದರೂ ಮನೆಯವರು ಸ್ವೀಕರಿಸುವರೊ ಇಲ್ಲವೋ ಎಂಬ ಭಯ— ಇವುಗಳು ಅವರ ಮನವನ್ನು ಕೊರೆಯುತ್ತಿರುವದರಿಂದ ನಿರಾಶೆಯಿಂದ ಕಲ್ಲಾಗಿ ಅವರು ಬರಲೊಲ್ಲರೆಂದು ಶ್ರೀಮತಿ ಮೃದುಲಾ ಸಾರಭಾಯಿಯವರು ಬರೆಯುತ್ತಾರೆ.

ದೇಹದಲ್ಲಿ ಅಯತ್ನತಃ ಇಚ್ಛಾವಿರುದ್ಧವಾಗಿ ಬಲಾತ್ಕಾರದಿಂದ ಅಶುದ್ಧಿಯುಂಟಾದ ಕಾಲದಲ್ಲೂ ಒಂದು ವ್ಯಕ್ತಿಯನ್ನು ಅದರ ಸಂಬಂಧಿಕರು ಪುನಃ ಸ್ವೀಕಾರ ಮಾಡದಂತೆ ಅವರ ಧರ್ಮವು ಅವರ ಕಣ್ಣಿಗಡ್ಡ ಬಂದುದಕ್ಕೆ ಹಿಂದಿನಿಂದ ಇಂದಿನವರೆಗೆ ಹಿಂದುಗಳಲ್ಲಿ ಹಲವಾರು ನಿದರ್ಶನಗಳು ಸಿಗುತ್ತವೆ. ಪ್ರೀತಿಯನ್ನು ಹೀಗೆ ನಿಮಿಷಾರ್ಧದಲ್ಲಿ ವಧೆಮಾಡಬಲ್ಲ ಧರ್ಮಬುದ್ಧಿಗೆ ಮಾನವತೆ ಮನ್ನಣೆ ಕೊಡದು; ಅದು ಧರ್ಮಬುದ್ಧಿಯಲ್ಲ. ಧರ್ಮಾಂಧತೆ. ಅದಕ್ಕಿಂತ ಕೀಳೂ ಅನಾಗರಿಕವೂ ಕ್ರೂರವೂ ಆದ ಬುದ್ಧಿ ಮತ್ತೊಂದಿಲ್ಲ. ಹಿಂದುಗಳು ಈ ಮಾತನ್ನು ಜೀರ್ಣಿಸಿಕೊಳ್ಳದಿದ್ದರೆ ಸತ್ಯ ಮತ್ತು ಅಹಿಂಸೆಯ ಆರಾಧಕರು ಅಂಥ ಸಮಾಜದಿಂದ ಬೇರಾಗಿ ನಿಲ್ಲುವುದೇ ನಾಗರಿಕ ಕರ್ತವ್ಯವಾಗಬಲ್ಲದು.

ಪ್ರೇಮಪುತ್ಥಳಿಗಳು !

ರಾಬರ್ಟ್ ಮರ್ಡನ್ ಮತ್ತು ಲೌ ಮರ್ಡನ್ನರು ಮದುವೆಯಾಗಿ ಇಂದಿಗೆ ೬೦ ವರ್ಷಗಳಾದವೆಂದು ಅವರು ಷಷ್ಟಿಪೂರ್ತಿ ಉತ್ಸವವನ್ನು ಆಚರಿಸಿದರು. ರಾಬರ್ಟನಿಗೆ ಈಗ ೮೦ ಲೌವಿಗೆ ೮೧ ವಯಸ್ಸು. ಅವರಿಬ್ಬರೂ ಮಹತ್ವಾಕಾಂಕ್ಷಿಗಳಲ್ಲ. ಶಾಂತ ಜೀವನ ನಡೆಸುತ್ತಿದ್ದರು. ಆ ದಂಪತಿಗಳ ಜೀವನದಲ್ಲಿಯ ಮುಖ್ಯಾಂಶವೆಂದರೆ ಈ ೬೦ ವರ್ಷಗಳಲ್ಲಿ ಒಮ್ಮೆಯೂ ಅವರಲ್ಲಿ ಭಿನ್ನಾಭಿಪ್ರಾಯ, ಜಗಳ ಈ ಒಂದೂ ಸಂಭವಿಸಲೇ ಇಲ್ಲವಂತೆ !

ಈ ದಂಪತಿಗಳು ಮದುವೆಯಾಗುವವರಿಗೆ ಈ ಬುದ್ಧಿವಾದವನ್ನು ಕೊಡುತ್ತಾರೆ: 'ನೀವು ಎಳೆಯ ವಯಸ್ಸಿನಲ್ಲಿಯೇ (ಅಂದರೆ ಬಾಲ್ಯದಲ್ಲೆಂದರ್ಥವಲ್ಲ) ಮದುವೆಯಾಗಿ ಒಟ್ಟಿಗೇ ಬೆಳೆಯಿರಿ. ಕೊಡುಕೊಳುಗಳಿಂದ ಒಬ್ಬರನ್ನೊಬ್ಬರು ಪ್ರೀತಿಸಿರಿ. ಪರಸ್ಪರ ತಪ್ಪು ಹುಡುಕಲು ಹೋಗಬೇಡಿರಿ. ವಾದವನ್ನೆಂದೂ ಮಾಡಬೇಡಿರಿ. ಪದೇ ಪದೇ ಒಬ್ಬರನ್ನೊಬ್ಬರು ಬಿಟ್ಟು ಹೋಗಬೇಡಿರಿ. ಹೋಗುವ ಸಂದರ್ಭ ಒಮ್ಮೆ ಬಂದರೆ ಇಬ್ಬರೂ ಒಟ್ಟಿಗೆ ಹೋಗಿರಿ', ವಿವಾಹವಾಗಲಿರುವವರು ಈ ಬುದ್ಧಿವಾದದತ್ತ ಲಕ್ಷ್ಯಕೊಡುವರೆ ?

ರಾಣೀಭಾವ

ರುಮೇನಿಯದ ಮೇರಿ ರಾಣಿಯನ್ನು ಒಮ್ಮೆ ಅಮೇರಿಕದ ಒಬ್ಬ ಪ್ರಸಿದ್ಧ ಮನಃಶಾಸ್ತ್ರಿಗೆ ಪರಿಚಯ ಮಾಡಿಕೊಡಲಾಯಿತು— "ಇವರು ರುಮೇನಿಯದ ರಾಣಿಯಾದ ಮೇರಿಯಮ್ಮಣ್ಣಿಯವರು—" ಎಂದು.

ಮನಃಶಾಸ್ತ್ರಿ (ಅಲಕ್ಷ್ಯದಿಂದ) — ಬಹಳ ಸೊಗಸಾಯಿತು; ಆ ಭಾವ ಎಷ್ಟು ದಿನಗಳ ಹಿಂದೆ ಆಕೆಯ ತಲೆಯಲ್ಲಿ ಹೊಕ್ಕಿತು?

ಪರಿಚಯಮಾಡಿಕೊಟ್ಟವನೂ ರಾಣೀಸಾಹೇಬರೂ ಕಣ್ಣು ಕಣ್ಣು ಬಿಡುತ್ತ ನಿಂತರಂತೆ!

ಜನಮತ

ಬಟ್ಟೆ ನಿಯಂತ್ರಣ

ಮಹನೀಯರೆ:

ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದಂತೆ ನಮ್ಮ ಸರಕಾರ ಈ ನಿಯಂತ್ರಣ ವ್ಯವಹಾರದಲ್ಲಿ ಮಾಡಿದ ತಪ್ಪುಗಳನ್ನೇ ತಿರುಗಿ ಮಾಡುತ್ತಿರುವದೇಕೋ ತಿಳಿಯದಾಗಿದೆ. ಗಿರಣಿಗಳೊಳಗಿನ ಬಟ್ಟೆಯನ್ನೆಲ್ಲ ಮುಟ್ಟುಗೋಲು ಹಾಕಿದ್ದೇನೋ ಸರಿ. ಆದರೆ ಪೇಟೆಯಲ್ಲಿರುವ ಬಟ್ಟೆಯ ಗತಿಯೇನು? ನಾಳೆ ಅಕ್ಟೋಬರದಲ್ಲಿ ಸರಕಾರ ಮುಟ್ಟುಗೋಲು ಹಾಕಿದ ಬಟ್ಟೆಯ ಮೇಲೆಲ್ಲ ಬೆಲೆಯ ಮುದ್ರೆ ಒತ್ತಿ ಅದು ಪೇಟೆಗೆ ಬರುವ ವರೆಗೆ ವ್ಯಾಪಾರಿಗಳು ಈಗಿಂತ ಕಡಿಮೆ ಬೆಲೆಗೆ ತಮ್ಮಲ್ಲಿದ್ದ ಬಟ್ಟೆಯನ್ನು ಮಾರುವರೆಂದು ಸರಕಾರ ಹೇಗೆ ನಂಬಿತು? ಹಾಗೆ ಮಾರದಿದ್ದರೆ ಅದನ್ನೂ ವಶಪಡಿಕೊಳ್ಳಲಾದೀತೆಂಬ ಬೆದರಿಕೆಗೆ ಎಷ್ಟು ಬೆಲೆಕೊಡಬೇಕೆಂದು ವ್ಯಾಪಾರಿಗೆ ಗೊತ್ತೇ ಇದೆ. ಈ ಆಜ್ಞೆಯಿಂದ ಬಟ್ಟೆಯ ಬೆಲೆ ತಗ್ಗಿಲ್ಲವೆಂದು ಮುಂಬಯಿಯಿಂದ ಬಂದ ವರದಿಯಲ್ಲಿ ಆಶ್ಚರ್ಯವೇನೂ ಇಲ್ಲ, ಅಕ್ಟೋಬರದ ವರೆಗೆ ಜನರಿಗೆ ಈಗಿನ ದರದಲ್ಲಾದರೂ ಬಟ್ಟೆ ದೊರೆತರೆ ಹೇಳಿರಿ! ಹೊಸದಾಗಿ ಬಟ್ಟೆ ಪೇಟೆಗೆ ಅಕ್ಟೋಬರದ ವರೆಗೆ ಬರುವದಿಲ್ಲೆಂದು ಖಾತ್ರಿಯಾದ ಮೇಲೆ ಯಾವ ವ್ಯಾಪಾರಿ ಈ ಪರಿಸ್ಥಿತಿಯ ಲಾಭ ಪಡೆದುಕೊಳ್ಳದಿದ್ದಾನು? ಬಡವರಿಗೆ ಉಪಕಾರ ಮಾಡುವ ಇಚ್ಛೆಯಿದ್ದರೆ ಸರಕಾರವು ಅತ್ಯಂತ ಕಠೋರ ಶಾಸನದಿಂದ ಲಾಭಬಡಕರನ್ನು ನಿರ್ನಾಮಮಾಡಬೇಕು. ಲಾಭ ಬಡಕತನಕ್ಕಾಗಿ ಸಿಕ್ಕಿಬಿದ್ದವರ ಸರ್ವಸ್ವವನ್ನೂ ಕಸಿದುಕೊಳ್ಳಬೇಕು. ಆ ನಿಷ್ಠುರತೆ ಸರಕಾರಕ್ಕೆ ಸಾಧ್ಯವಿಲ್ಲದಿದ್ದರೆ ಬಡವರ ಗೋಳನ್ನು ಇನ್ನಷ್ಟು ಹೆಚ್ಚಿಸುವ ಇಂಥ ಸದುದ್ದೇಶದ ಹೆಡ್ಡ ಕೆಲಸಗಳನ್ನು ಮಾಡದೆ ಸುಮ್ಮನಿರಲಿ. ಆಗ ನಿಯಂತ್ರಣ ಹಾಕುವಾಗೊಮ್ಮೆ ತೆಗೆದಾಗೊಮ್ಮೆ ಹೀಗೆ ವ್ಯಾಪಾರಿಯು ಬೆಲೆಗಳನ್ನು ಹೆಚ್ಚಿಸುವದಾದರೂ ನಿಂತೀತು.

—ಓರ್ವ ಬಡವ

× × ×

ಗೋವಿನ ಜೋಳ

ಮಹಾಶಯರೇ:

ನಿಮ್ಮ ೨೬–೭–೪೮ ರ ಪತ್ರಿಕೆಯಲ್ಲಿ ಶ್ರೀ ಎ ಬಿಂದು ಮಾಧವರ ಸೂಚನೆ ನೋಡಿ ನನಗೆ ಬಹಳ ಆನಂದವಾಯಿತು. ಏಕೆಂದರೆ ನಮಗೆ ಬಹಳ ಗೋವಿನಜೋಳ ಬರುತ್ತಿದ್ದು ಅದರ ಉಪಯೋಗ ಹೇಗೆ ಮಾಡಬೇಕೆಂದು ತಿಳಿಯದಂತಾಗಿತ್ತು.

ಅದರಂತೆ ನಾನು ಪ್ರಯೋಗಮಾಡಿ ನೋಡಿದೆ. ಆದರೆ ಅದರ ತೌಡು ಬಹಳ ಹೋಗಿ ಹಾನಿ ಒದಗಿದಂತಾಯಿತು. ಅದರ ಸಾಮಾನು ಕೂಡ ನನಗೆ ಅಷ್ಟು ರುಚಿಕರವೆನಿಸಲಿಲ್ಲ.

ಆದ್ದರಿಂದ ಬಿಂದುಮಾಧವರರು ನಿಮ ಮುಂದಿನ ಪತ್ರಿಕೆಯಲ್ಲಿ ಸಾಮಾನುಗಳನ್ನು ಹೇಗೆ ರುಚಿಕಟ್ಟಾಗಿ ಮಾಡಬೇಕೆಂಬನನ್ನು ತಿಳಿಸುವರೆಂದು ನಿರೀಕ್ಷಿಸುತ್ತಿರುವೆ.

ಮುತ್ತಗಿ. ಅರವಿಂದ ಕುಲಕರ್ಣಿ

ಲೀನ ಸಂಸ್ಥಾನಗಳಲ್ಲಿಯ ದಾವೆಗಳು

ಲೀನವಾದ ದಕ್ಷಿಣ ಸಂಸ್ಥಾನಗಳ ಜನರು ಇನ್ನು ಯಾವ ಕೋರ್ಟುಗಳಲ್ಲಿ ದಾವೆ ದಾಖಲ ಮಾಡಬೇಕೆಂಬ ಬಗ್ಗೆ ಯೋಚಿಸುತ್ತಿರುವದು ಸ್ವಾಭಾವಿಕ. ಈ ವಿಷಯದಲ್ಲಿ ಸರಕಾರ ಪ್ರಕಟನೆ ಹೊರಡಿಸಿ ಹೀಗೆ ಹೇಳಿದೆ.

ಹೊಸ ಕೋರ್ಟುಗಳು ಸ್ಥಾಪಿತವಾಗುವವರೆಗೆ ಸಂಬಂಧಿಸಿದ ಸಂಸ್ಥಾನಗಳ ಸಬಾರ್ಡಿನೇಟ ಕೋರ್ಟ ಅಥವಾ ಜಿಲ್ಲಾ ಕೋರ್ಟುಗಳಲ್ಲಿಯೇ ದಾವೆ ದಾಖಲಮಾಡಬೇಕು. ಕ್ರಿಮಿನಲ್ಲ ತಕರಾರುಗಳನ್ನು ಆಯಾ ಜಿಲ್ಲೆಯ ಮ್ಯಾಜಿಸ್ಟ್ರೇಟರಲ್ಲಿ ದಾಖಲ ಮಾಡತಕ್ಕದ್ದು. ಜಿಲ್ಲಾ ಜಡ್ಜರ ನಿರ್ಣಯಗಳ ವಿರುದ್ಧ ಅಪೀಲಿದ್ದರೆ ಮುಂಬಯಿ ಹಾಯಕೋರ್ಟಿಗೆ ಮಾಡಬೇಕು.

ವ್ಯಾಪಾರ ಪ್ರಪಂಚ

ಮುಂಬಯಿ ಶೇರ ಪೇಟೆ

ತಾ. ೫

ಕಳೆದ ವಾರಾಂತ್ಯದಲ್ಲಿ ಸರಕಾರದವರು ಹೇರಿದ ಬಟ್ಟೆ ನಿಯಂತ್ರಣ ನಿರೀಕ್ಷಿತವಾಗಿಲ್ಲದ ಬಗೆಯಾಗಿದ್ದ ಕಾರಣ ಶೇರ ಪೇಟೆಯಲ್ಲಿ ಸಾಮಾನ್ಯವಾಗಿ ಹೆದರಿಕೆಯುಂಟಾಯಿತು. ಶೇಟಜಿಗಳು ಮುಂಚೆ ಇಂದು ಬೆಲೆಗಳನ್ನು ಐರಿಕೆಯಲ್ಲೇ ಉಳಿಸಲು ಯತ್ನಿಸಿದರು. ಆದರೂ ಬೆಲೆಗಳು ಸ್ವಲ್ಪಮಟ್ಟಿಗೆ ಇಳಿದಿವೆ. ಇಂದಿನ ಬೆಲೆಗಳು ಇಂತಿದ್ದವು.

ಜವಳಿ

ಅಹಮದಾಬಾದ ಅಡ್ವಾನ್ಸ್	೩೬೫–೦–೦
ಬಾಂಬೆ ಡಾಯಿಂಗ್	೧೨೬೭–೮–೦
ಸೆಂಟ್ರಲ ಇಂಡಿಯಾ	೨೮೫–೦–೦
ಸೆಂಚುರಿ	೫೧೭–೦–೦
ಗೋಕಾಕ	೪೧೦–೦–೦
ಕೋಹಿನೂರು	೪೦೪–೦–೦
ಫಿನಿಕ್ಸ	೯೪೬–೪–೦
ಸಿಂಪ್ಲೆಕ್ಸ	೨೦೬–೮–೦
ಸ್ವದೇಶಿ	೪೦೪–೦–೦

ಇತರ

ಬೇಲಾಪುರ ಸಕ್ಕರೆ	೨೮೮–೦–೦
ಬಾಂಬೇ ಬರ್ಮಾ	೪೩೧–೪–೦
ಸಿಂಧ್ಯಾ ಸ್ಟೀಮ	೨೬–೧೪–೦
ಟಾಟಾ ಸ್ಟೀಲ ಡೆಫರ್ಡ	೧೬೩೯–೧೨–೦
ಇಂಡಿಯನ್ ಆಯರ್ನ	೨೫–೧೨–೦
ಅಸೊ. ಸಿಮೆಂಟ್ಸ	೧೬೭–೦–೦
ಸೆಂಟ್ರಲ ಬ್ಯಾಂಕ್	೯೧–೦–೦
ಇಂಪೀರಿಯಲ್ ಬ್ಯಾಂಕ ಫೂರ್ಣ	೨೦೫೦–೮–೦
ಇಂಡಿಯನ್ ಬ್ಯಾಂಕ	೨೦೭–೮–೦
ರಿಝರ್ವ ,,	೧೦೩–೦–೦

ಚಿನ್ನ--ಬೆಳ್ಳಿ

ಚಿನ್ನ ಸಾಧಾರಣವಾಗಿ ಪೇಟೆಗೆ ಬರುತ್ತಲೇ ಇರುವದರಿಂದ ಬೆಲೆ ಬಹಳ ಏರಲು ಅವಕಾಶವಿಲ್ಲ. ಬೆಳ್ಳಿಯೂ ಹೆಚ್ಚೇನೂ ಅಂತರಗೊಳ್ಳಲಿಲ್ಲ. ಇಂದಿನ ದರಗಳು ಇಂತಿದ್ದವು.

ತಯಾರಿ ಚಿನ್ನ	೧೧೪–೦–೦
ವಾಯದಾ ಚಿನ್ನ (ಹಳೆ)	೧೧೩–೬–೦
ಸಾವರೀನ	೭೪–೧೨–೦
ತಯಾರಿ ಬೆಳ್ಳಿ	೧೭೬–೪–೦
ವಾಯದಾ	೧೬೬–೦–೦
ಟೇಂಬರ	೧೭೬–೧–೦

ಅರಳೆ

ಸರಕಾರವು ಅರಳೆಯ ಬೆಲೆಯನ್ನು ನಿಯಂತ್ರಿಸಲಿದೆಯೆಂಬ ವಾರ್ತೆ ಪೇಟೆಯಲ್ಲಿ ಹೆದರಿಕೆಯನ್ನುಂಟು ಮಾಡಿದೆ. ಸೆಪ್ಟೆಂಬರ ವಾಯದೆ ೧೮೧—೦—೦ ವರೆಗೂ ಇಳಿದು ಹೋಗಿ ಇಂದು ೫೯೧–೮–೦ ಲ್ಲಿ ಕೊನೆಗೊಂಡಿತು.

ಎಣ್ಣೆಕಾಳು

ಶೇಂಗಾ	೧೬೬.೪.೦
ಅಗಸಿ	೨೮–೪.೦
,, (ಹೊಸ)	೨೮–೧೨–೦
,, ಎಳ್ಳು	೧೬–೧೩–೦

ಸಾಂಗಲಿ

ಅರಸಿನ (ಹೊಸ) ಹೇರು	೧೪೫
ಶೇಂಗಾ ಖಂಡಿ	೧೪೫.೦–೦
ಮೆಣಸಿನಕಾಯಿ ಹೇರು	೨೦೦
ಬೆಲ್ಲ ಹೇರು	೪೫–೬೫

ಹುಬ್ಬಳ್ಳಿ

ಜಯವಂತ ಹತ್ತಿ	೧	೪೧೦–೪೩೦
,,	೨	೩೯೦–೪೦೦
,,	೩	೩೭೦–೩೮೦
ಅಸಲಂಡ ಹತ್ತಿ	೧	೪೧೦–೪೧೫
,,		೩೮೦–೩೯೫
ಎ. ನಬಲರೋಲ		೨೬೫–೨೭೫
ಸಾಚಿನ		೨೫೫–೨೬೫
ಜ. ಹತ್ತಿಕಾಳು		೮ ಪೌಂ.
ಅ. ಹತ್ತೀಕಾಳು		೮ ,,

ಮೈಸೂರು ಸಂಸ್ಥಾನ ಕಾಂಗ್ರೆಸ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಲ್ಲಿ ಉಂಟಾಗಿದ್ದ ಮತಭೇದವು ಮಾಯವಾಗಿದ್ದರಿಂದ ಕಾರ್ಯದರ್ಶಿಗಳು ಕೊಟ್ಟ ರಾಜೀನಾಮೆಯನ್ನು ಹಿಂತೆಗೆದುಕೊಂಡಿರುತ್ತಾರೆ. ದಿವಾನ ಪದವನ್ನು ರದ್ದು ಮಾಡುವದು, ಬಂಜೆ ನಿರ್ಮೂಲನ ಕೂಲಿ [illegible] ಸಮಸ್ಯೆ ಮುಂತಾದ್ದರ ಬಗ್ಗೆ ಗೊತ್ತುವಳಿಗಳು ಕಾರ್ಯಸಮಿತಿಯ ಮುಂದೆ ಇರುವವು.

ನಾಲ್ಕು ಮಾತು — ರಂಗನಾಥ ದಿವಾಕರ

೧. ಶಾಸನಸಭಾಸದಸ್ಯನ ಕರ್ತವ್ಯ

ಜೋನ ತಿಂಗಳ ೩೦, ೩೧ ನೆಯ ದಿನ ಧಾರವಾಡದಲ್ಲಿ ನಾನು ಹೊಸ ಘಟನೆಯ ಬಗ್ಗೆ ಮಾತಾಡುವಾಗ ಒಬ್ಬರು ಒಂದು ಪ್ರಶ್ನೆ ಕೇಳಿದರು. ಅದೇನೆಂದರೆ, ಆರಿಸಿ ಕಳಿಸಿದಾದ ಪ್ರತಿನಿಧಿಯು ತಮ್ಮ ಮನದಂತೆ ನಡೆಯದೆ ಹೋದರೆ ಅವನನ್ನು ಮತದಾರರು ಮರಳಿ ಕರೆಕಳಿಸಿ ಇನ್ನೊಬ್ಬನನ್ನು ಆರಿಸಲು ಅಧಿಕಾರವಿಲ್ಲದಿದ್ದರೆ ಅದು ಪೂರ್ಣ ಪ್ರಜಾಪ್ರಭುತ್ವ ಎನಿಸಬಲ್ಲದೆ? ಅದಕ್ಕೆ ಉತ್ತರ ಕೊಡುವಾಗ ನಾನು ಹೇಳಿದ್ದೇನೆಂದರೆ, ಹಾಗೆ ತಿಳಿಯುವದು ತಪ್ಪು. ಪ್ರತಿನಿಧಿ ಎಂದರೆ ಒಂದು ಗಿರಣಿಯಲ್ಲಿ ಅಥವಾ ಪೋಸ್ಟ ಆಫೀಸ ಅಲ್ಲ. ಮೇಲಾಗಿ ಅವನು ಒಮ್ಮೆ ಶಾಸನ ಸಭೆಗೆ ಹೋದನೆಂದರೆ ಅವನು ಕೇವಲ ಒಂದೇ ಮತದಾರ ಸಂಘದ ಪ್ರತಿನಿಧಿ ಎನಿಸುವದಿಲ್ಲ. ಆಯಾ ಮತದಾರ ಸಂಘದ ಪ್ರತಿನಿಧಿ ಇರುವಂತೆ ಇದ್ದು ಅವನು ಇಡೀ ಜನತೆಯ ಪ್ರತಿನಿಧಿಯೂ ಆಗುತ್ತಾನೆ. ಇದಲ್ಲದೆ ಶಾಸನ ಸಭೆಯಲ್ಲಿ ಚರ್ಚೆ, ಖಂಡನ ಮಂಡನ ನಡೆಯುವದರಿಂದ ಅವುಗಳನ್ನು ಲಕ್ಷಿಸಿ, ಅರಗಿಸಿ, ವಿಚಾರಿಸಿ ಅವನು ನಡೆಯಲು ಬದ್ಧನು. ಆ ಅನುಕೂಲತೆ ಮತದಾರರಿಗೆ ಇರಲರಿಯದು. ಅವನು ಒಂದು ಗಂಟು ಕಟ್ಟಿಕೊಂಡು ಹೋದಂತೆ ಒಂದು ವಿಶಿಷ್ಟ ಮತವನ್ನೇ ಕೊಂಡು ಹೋಗಿ ಬಿಟ್ಟರೆ ವಿಚಾರ ವಿನಿಮಯಕ್ಕೆ ಅವಕಾಶವೇ ಉಳಿಯದು. ಈ ಎಲ್ಲ ಕಾರಣಗಳ ಮೂಲಕ ಸಾಮಾನ್ಯ ಧೋರಣದಲ್ಲಿ ನಿಕಟವರ್ತಿಯಿದ್ದರೂ ಶಾಸನ ಸಭೆಯ ಎದುರು ಬರುವ ಪ್ರಶ್ನೆಗಳ ವಿಷಯದಲ್ಲಿ ಯಾವನೇ ಪ್ರತಿನಿಧಿಗೆ ಸ್ವತಂತ್ರ ವಿಚಾರ ಮಾಡಲು ಅಸ್ಪದ ಬಿಡ್ಡೇ ತೀರಬೇಕಾಗುವದು. ಇಲ್ಲದೆ ಹೋದರೆ ಅದೊಂದು ಬೊಂಬೆಯಾಗುವದು!

× × ×

ಇದೇ ಬಗೆಯ ಇನ್ನೊಂದು ಮಾತನ್ನು ಇಲ್ಲಿ ಹೇಳುವೆ. ಇಂಗ್ಲಂಡದ ಇತಿಹಾಸವನ್ನು ಶಿಕ್ಷಣಕ್ರಮದೊಳಗಿಂದ ತೆಗೆದೊಗೆಯುವ ಬಗ್ಗೆ ನಾನು ಪ್ರಯತ್ನಿಸಬೇಕೆಂದು ಓರ್ವ ಮತದಾರರು ನನಗೆ ಬರೆದರು. ಆಟಿಯ ವಾರದ ಕರ್ಮವೀರದಲ್ಲಿ ಆ ಬಗ್ಗೆ ನಾನು ನನ್ನ ವಿರೋಧಿ ವಿಚಾರಗಳನ್ನು ವ್ಯಕ್ತಮಾಡಿದೆನು. ಅದನ್ನು ನೋಡಿ ಆ ಮತದಾರರು ಸ್ವಾಭಾವಿಕವಾಗಿ ಸ್ವಲ್ಪ ರೇಗಿ, ನಾನು ಅಧಿಕ ಪ್ರಸಂಗತನ ಮಾಡಿರುವೆನು, ನಾನು ಅವರು ಹೇಳಿದಂತೆ ಪ್ರಯತ್ನ ಮಾಡುವದನ್ನು ಬಿಟ್ಟು ಕರ್ಮವೀರದಲ್ಲಿ ನನ್ನ ನಿರ್ಣಯವನ್ನು ಬರೆದುದು ತಪ್ಪು ಎಂದಿದ್ದಾರೆ. ಧೈರ್ಯದಿಂದ ಸ್ಪಷ್ಟವಾಗಿ ತಮ್ಮ ವಿಚಾರಗಳನ್ನು ನನಗೆ ಬರೆದುದರಿಂದ ನಾನು ಅವರನ್ನು ಅಭಿನಂದಿಸುವೆನು. ಆದರೆ ಈ ವಿಷಯದಲ್ಲಿ ಶಾಸನ ಸಭಾ ಸದಸ್ಯರ ಕರ್ತವ್ಯವೇನು ಎಂಬ ಬಗ್ಗೆ ಪ್ರಶ್ನೆ ಉಂಟಾಗುತ್ತದೆ. ಮತದಾರರು ಬರೆದಂತೆ ನನ್ನ ವಿಚಾರಗಳಿಲ್ಲದಿದ್ದರೂ ನಾನು ಪ್ರಯತ್ನ ಮಾಡತಕ್ಕದ್ದೋ ಹೇಗೆ, ವೈಯಕ್ತಿಕವಾಗಿ ಯಾವದೇ ಮತದಾರರು ಏನೇ ಹೇಳಿದರೂ ಅದರಂತೆ ಪ್ರತಿನಿಧಿಗಳು ಪ್ರಯತ್ನ ಮಾಡಬೇಕೋ ಹೇಗೆ ಈ ಮಹತ್ವದ ಪ್ರಶ್ನೆಗೆ ಇಲ್ಲಿ ಆಸ್ಪದವಾಗಿದೆ. ಯಾವದೊಂದು ಮತದಾರಸಂಘದ ಅಥವಾ ಪಕ್ಷದ ಪ್ರತಿನಿಧಿಯು ಆಯಾ ಮತದಾರ ಸಂಘದ ಅಥವಾ ಪಕ್ಷದ ಸಾಮಾನ್ಯ ಧೋರಣವನ್ನು ಒಪ್ಪಿ ಪ್ರತಿನಿಧಿಯಾಗುವನು. ಆದರೆ ಪ್ರತಿಯೊಂದು ಮಾತಿನಲ್ಲಿಯೂ ಅವನು ಪ್ರತಿಯೊಬ್ಬ ಮತದಾರನ ಪ್ರತಿಯೊಂದು ಮತವನ್ನು ಮುಂಬರಿಸುವದು ಅಥವಾ ಅದರೊಡನೆ ಸಹಮತನಾಗುವದು ಸಾಧ್ಯವೂ ಅಲ್ಲ ಯೋಗ್ಯವೂ ಅಲ್ಲ.

× × ×

ಈಗ ಉದಾಹರಣೆಗಾಗಿ ಇಂಗ್ಲೀಷ ಭಾಷೆಯ ವಿಷಯವನ್ನೆ ಕೊಳ್ಳುವಾ. ಇಂಗ್ಲೀಷಕ್ಕೆ ಇನ್ನು ಮುಂದೆ ಮಾಧ್ಯಮವೆಂಬ ಸ್ಥಾನವಿರಕೂಡದು ಎಂಬ ಬಗ್ಗೆ ಕಾಂಗ್ರೆಸ ಪಕ್ಷದಲ್ಲಿ ಬಹುಮತವಿದೆ. ಅದು ಆ ಪಕ್ಷದ ಧೋರಣವಿದೆ ಎಂದರೂ ಅಡ್ಡಿ ಇಲ್ಲ. ಆದರೆ ಆ ಬಗ್ಗೆ ಮೌಲಾನಾ ಅಬ್ದುಲ್ ಕಲಂ ಆಝಾದರೇ ಸ್ವತಃ ಇನ್ನೂ ಅಯ್ದು ವರುಷಗಳ ಅವಧಿಯಾದರೂ ಬೇಕು ಎಂದು ಸಾರಿದ್ದಾರೆ. ಅದೇ ರೀತಿ ಅನೇಕ ವಿಷಯಗಳಲ್ಲಿ ಆಗಬಲ್ಲದು. ಆದುದರಿಂದ ಮತದಾರರು ಮಾಡುವ ಸೂಚನೆಗಳ ನ್ನೆಲ್ಲ, ಅವು ತನಗೆ ಯೋಗ್ಯವೆನಿಸಲಿ ಬಿಡಲಿ, ಮುಂಬರಿಸಬೇಕೆಂದು ಹೇಳುವದು ಯೋಗ್ಯವಾಗಲಾರದು. ಆದರೂ ಮತದಾರರ ಮಾತಿಗೆ ಬೆಲೆ ಕೊಡುವದು ಪ್ರತಿನಿಧಿಯ ಕರ್ತವ್ಯ. ಆದರೆ [illegible] (ಮತದಾರರ) ಯೋಗ್ಯ ವಿಚಾರ ಮಾಡಿ ಪ್ರತಿನಿಧಿಯು ಅವುಗಳನ್ನು ಮುಂಬರಿಸಬಲ್ಲನು. ಇದು ಮತದಾರರ ಹಾಗೂ ಪ್ರತಿನಿಧಿಯ ಪರಸ್ಪರ ಸಂಬಂಧ ಹೀಗಿರಲೆಂದು ನನ್ನ ಮತ. ಇದಲ್ಲದೆ ಪ್ರತಿನಿಧಿಯು ತನ್ನ ಸ್ವಂತ ಮತಗಳನ್ನು ಸ್ಪಷ್ಟ ಮಾಡಲು ಪೂರ್ಣ ಸ್ವತಂತ್ರನು. ಅದು ಅಧಿಕ ಪ್ರಸಂಗತನವೆನಿಸಲಾರದು. ಆದರೂ ಈ ಬಗ್ಗೆ ಬರೆದು ಈ ಪ್ರಶ್ನೆಯನ್ನು ಎತ್ತಲು ಅವಕಾಶ ಕೊಟ್ಟದ್ದಕ್ಕಾಗಿ ಆಯಾ ಮತದಾರರಿಗೆ ನಾನು ಧನ್ಯವಾದಗಳನ್ನ ಅರ್ಪಿಸುವೆ.

೨. ಸೊಂಡೂರಿನ ಹಸೆಬರಹ

೨೯–೭–೪೬ ನೆ ದಿನ ನಾಯಿಂಕಾಲ ಇಲ್ಲಿಯ ಕಲೆಕ್ಟರರು ಸೊಂಡೂರು ಸಂಸ್ಥಾನದ ಆಡಳಿತವನ್ನು ವಹಿಸಿಕೊಂಡು ಬಿಟ್ಟರು. ಸೊಂಡೂರಿನ ರಾಜೇಸಾಹೇಬರು ಭಾರತದಲ್ಲಿ ಲೀನವಾಗದೆ ತಮ್ಮ ಸಂಸ್ಥಾನವನ್ನು ಹಾಗೆಯೇ ನಡೆಸಬೇಕೆಂದಿದ್ದರು. ಹೀಗೆ ಪ್ರಯತ್ನಪಡುವದೆಂದರೆ ಮುಖ್ಯ ಪ್ರಳಯದ ಕಾಲಕ್ಕೆ ಒಂದು ಹಾಳಿಯಾಗಿನ ನಸ್ವೀರ ಸಂರಕ್ಷಣ ಮಾಡಿಕೊಳ್ಳುವ ಪ್ರಯತ್ನ ಮಾಡಿದಂತೆ ಎಂದು ನಾನು ಬರೆದಿದ್ದೆನು. ನಿಜವಾಗಿ ರಾಜೇಸಾಹೇಬರು ಒಳ್ಳೆಯಸುಸಂಸ್ಕೃತರಿದ್ದವರು. ಹೀಗಿದ್ದು ಅವರಿಗೆ ಈ ವಿಷಯದಲ್ಲಿ ಯಾವ ಮೋಹವಾಯಿತೊ —ಅಧಿಕಾರ ಮೋಹವೇ ಇರಬೇಕು— ಅವರು ಹಟ ಹಿಡಿದು ಬಿಟ್ಟರು. ಅದರ ಪರಿಣಾಮವು ಕೊನೆಗೆ ಕಂಡು ಬಂದಿತು. ನಿಜಾಮರದೂ ಇದೇ ಬಗೆಯ ಹಟವಿದೆ ಎಂದು ಹೇಳಲು ಭ್ರಾಂತಿಯಿಲ್ಲ. ಪರಿಣಾಮವೂ ಇದೇ ಬಗೆಯದಾಗಬಲ್ಲದು ಎಂಬ ಬಗ್ಗೆಯೂ ಸಂಶಯವಿಲ್ಲ.

೪. 'ಕೂಲಿಕಾರ' ಎಂಬ ಶಬ್ದ

೩೯–೭–೪೮ ನೇ ದಿನ ಹುಬ್ಬಳ್ಳಿಯಲ್ಲಿ ಕೂಡಿದ ರೇಲ್ವೆ ಕೆಲಸಗಾರರ ಯೂನಿಯನ್ನಿನ ಪರಿಷತ್ತಿನಲ್ಲಿ ಡಾ. ಜೋಶಿಯವರು ಮಾತಾಡುವಾಗ 'ಕೂಲಿಕಾರ' ಎಂಬ ಶಬ್ದವನ್ನು ಇನ್ನು ಮುಂದೆ ಉಪಯೋಗಿಸುವದು ಯೋಗ್ಯವಲ್ಲ. 'ಶ್ರಮಜೀವಿ' 'ಕೆಲಸಗಾರ' ಈ ಶಬ್ದಪ್ರಯೋಗವನ್ನೆ ಮಾಡುವದು ಯೋಗ್ಯ ಎಂದು ಸೂಚಿಸಿದರು. ಈ ಸೂಚನೆ ಸಮಯೋಚಿತವೆಂದು ಹೇಳದಿರಲಾರೆ. ಆ ದಿನ ಉದ್ಘಾಟನ ಭಾಷಣ ಮಾಡುವಾಗ ಸಹ ನಾನು ಕೂಲಿಕಾರ ಈ ಶಬ್ದವನ್ನು ಉಚ್ಚರಿಸುವಾಗ ಹಿಂದೆ ಮುಂದೆ ನೋಡುತ್ತಿದ್ದೆ. 'ಶ್ರಮಜೀವಿ' 'ಕಾರ್ಮಿಕ' ಈ ಶಬ್ದಪ್ರಯೋಗಗಳನ್ನು ಅನೇಕ ಸಾರೆ ಮಾಡಿದೆ. ಆದರೆ ಈಗ ಡಾ. ಜೋಶಿಯವರು ಸ್ಪಷ್ಟವಾಗಿ ಒಂದು ಸೂಚನೆ ಮುಂದಿಟ್ಟದ್ದಾರೆ. ಅದು ಗಮನಾರ್ಹವಾಗಿದೆ.

× × ×

ಹಿಂದುಸ್ತಾನವು ಈಗ ಪೂರ್ಣ ಸ್ವತಂತ್ರ ರಾಷ್ಟ್ರವು. ಹಿಂದುಸ್ತಾನದ ರೇಲ್ವೆಗಳು ಹಿಂದೀ ರಾಷ್ಟ್ರದ ಸೊತ್ತು, ಯಾವದೇ ವ್ಯಕ್ತಿಯ ಸೊತ್ತಲ್ಲ. ಯಾವದೇ ಒಂದು ವ್ಯಕ್ತಿಯಾಗಲಿ, ಒಂದು ಕಂಪನಿಯಾಗಲಿ ರೇಲ್ವೆಯ ಒಡೆಯರಲ್ಲ. ಆ ದೃಷ್ಟಿಯಿಂದಲೂ ವಿಶೇಷವಾಗಿ ರೇಲ್ವೆ ಕಾಮಗಾರರು ಕೂಲಿಕಾರರಲ್ಲ ಎಂದು ಶಾಸ್ತ್ರರರ ಕೋಟಿಗ್ರಹವು ಅದ್ಯಾಗ್ ಇತರರಿಗೆ ಕೂಲಿಕಾರ ಶಬ್ದಪ್ರಯೋಗ ಮಾಡದೆ ಕನಿಷ್ಠ ರೇಲ್ವೆ ಕೆಲಸಗಾರರಿಗಂತೂ ●

[illegible]

× × ×

[illegible] ನ್ನು ಒಪ್ಪಿಕೊಂಡು, ಕನ್ನಡ, ತೆಲಗು, [illegible] ಅಭ್ಯಾಸ ಕಲಿಯುವಂತೆ ಅಬ್ಬ [illegible] ಎಂದು ಅವರ [illegible] ಹೆಚ್ಚು ದೃಢವಾಗಿ ಹಚ್ಚಿದೆ ಯೋಗ್ಯವಾಗುವದು.

ಜವಳಿಯ ಜಪ್ತಿ

ತಾ. ೩೦ ರ ಅದು ಮುಂಬಯಿಯ [illegible] ಗಿರಣಿಗಳಿಗೆ [illegible] ಗಳ್ತಿ ತಮ್ಮ ಅಪ್ಪಣೆಯಿಲ್ಲದೆ ಮಾರಬಾರದೆಂದು ಜವಳಿ ಕಮೀಶನರು ಆಜ್ಞೆ ಹೊರಡಿಸಿದ್ದಾರೆ.

ನಿಯಂತ್ರಣತೋಡದ ಮೇಲೆ ಮಾರ್ಚ ೨೦ ರ ವರೆಗೆ ಮುಂಬಯಿಯಿಂದ ೫. ಅಯು. ರ ರೇಲ್ವೆ ಮುಖಾಂತರ [illegible] ಗಾಡಿಯ ಹಿಡಿಗಳು ಬಟ್ಟೆ ಹೊರಗೆ ಹೋಯ್ತು. ಹೋದವರ್ಷ ಈ ಅವಧಿಯಲ್ಲಿ [illegible] ಗಾಡಿಗಳು ಸಾಗಿಸಲ್ಪಟ್ಟಿದ್ದವು. ಆದರೆ ೧೧೨೬ ಗಾಡಿಗಳು ಅರಿವೆ ಈ ವರ್ಷ ಹೆಚ್ಚಿಗೆ ಮುಂಬಯಿಯಿಂದ ಹೋಯ್ತು.

ಮದ್ರಾಸ, [illegible], [illegible] ಇಂದೂರ [illegible] ಭಾರತ ಸರಕಾರದ ಜವಳಿ ಧೋರಣವನ್ನು [illegible] ತಾ. ೩೦ ಕ್ಕೆ ಜಪ್ತಿ ಮಾಡಲಾಗಿದೆ.

ಸೊಲ್ಲಾಪುರ ಜಿಲ್ಲೆಯ ೯೬ ಕನ್ನಡ ಹಳ್ಳಿಗಳು

ಮುಂಬಯಿ ಸರಕಾರವು ತಾ. ೨೯ ರ ಒಂದು ಪ್ರಕಟನೆ ಹೊರಡಿಸಿ ಸೊಲ್ಲಾಪುರ ಜಿಲ್ಲೆಯ ೯೬ ಕನ್ನಡ ಹಳ್ಳಿಗಳ ವಿಷಯವಾಗಿ ಈ ರೀತಿ ಉಲ್ಲೇಖಿಸಿದೆ.

೯೬ ಕನ್ನಡ ಹಳ್ಳಿಗಳ ಒಂದು ಹೊಸ ತಾಲೂಕವನ್ನು ನಿರ್ಮಿಸಬೇಕೆಂದು ಕೆಲವರ ಬೇಡಿಕೆಯಿದೆ. ಇದನ್ನು ಸರಕಾರವು ಲಕ್ಷಿಸಿದ್ದು ಆ ಪ್ರಾಂತದಲ್ಲಿಯ [illegible] ಗೊಂಡ ಹಳ್ಳಿಗಳ [illegible] ಪ್ರಶ್ನೆಯು ವಿಚಾರ ಮಾಡುವಾಗ ಈ ವಿಷಯವನ್ನು ಪರಿಶೀಲಿಸಲಾಗುವದು.

ಸ್ವಾತಂತ್ರ್ಯೋತ್ಸವಕ್ಕಾಗಿ

[illegible]

ವಿಚಾರ ಸಾಹಿತ್ಯ ಲಿಮಿಟೆಡ್

[illegible]

ಕರ್ಮವೀರ

[illegible] ವರ್ಷ ೨೬
[illegible] ೯ ಸೋಮವಾರ

ಘಾತಕ ಧೋರಣ

ಹಿಂದುಸ್ಥಾನದಲ್ಲಿಯ ಕೆಲ ಅಹಂಮನ್ಯ ಮುಸಲ್ಮಾನ ಮುಂದಾಳುಗಳು ಮುಸಲ್ಮಾನ ಜನಸಾಮಾನ್ಯದ ಅನಿಷ್ಟ ಧರ್ಮಾಂಧತೆಯ ದುರ್ಲಾಭ ಪಡೆದು ದೇಶವನ್ನು ಒಡೆದರು. ಅನಂತರವಾದರೂ ಎಲ್ಲ ಸಮಸ್ಯೆಗಳು ಬಗೆಹರಿದು ಎರಡೂ ರಾಷ್ಟ್ರಗಳಲ್ಲಿ ಶಾಂತಿ ಸೌಹಾರ್ದ ಸುವ್ಯವಸ್ಥೆ ನೆಲಸಬಹುದೆಂದು ಗಾಂಧೀಜಿ ಮೊದಲಾದ ಹಿಂದೀ ಧುರೀಣರು ದೇಶವನ್ನು ಒಡೆಯುವುದಕ್ಕೂ ಒಪ್ಪಿಗೆ ಕೊಟ್ಟರು. ಇದಕ್ಕಾಗಿ ಅನೇಕ ಜನರ ಟೀಕೆಗಳಿಗೂ ಅವರು ಗುರಿಯಾಗಬೇಕಾಯಿತು. ದೇಶವೇನೋ ಇಬ್ಭಾಗವಾಯಿತು; ಆದರೆ ಪಾಕಿಸ್ತಾನವಾದಿಗಳ ದುರಾಗ್ರಹದ ಮತ್ತು ಸಂಕುಚಿತ ಧೋರಣದ ಮೂಲಕ ಉದ್ದೇಶವು ಸಾಧಿಸದಂತಾಗಿದೆ. ಎರಡೂ ರಾಷ್ಟ್ರಗಳಲ್ಲಿಯ ಸ್ನೇಹಮಯ ಸಂಬಂಧಕ್ಕೆ ಬಾಧೆ ಬರಹತ್ತಿದೆ. ಇತ್ತೀಚಿನ ಘಟನೆಗಳಿಂದಂತೂ ಹಿಂದುಸ್ತಾನ ಪಾಕಿಸ್ತಾನಗಳಲ್ಲಿ ಯುದ್ಧದ ಕಿಡಿಗಳು ಯಾವಾಗ ಹಾರುವವೋ ನಿಯಮವಿಲ್ಲದಂತಾಗಿದೆ.

ಹೊಸದಾಗಿ ಸ್ಥಾಪಿತವಾದ ಪಾಕಿಸ್ತಾನ ಸರಕಾರವು ಹಿಂದುಸ್ತಾನದ ಕೂಡ ಅನೇಕ ವಿಷಯಗಳ ಬಗ್ಗೆ ಒಡಂಬಡಿಕೆ ಮಾಡಿಕೊಳ್ಳಬೇಕಾಯಿತು. ಹಣಕಾಸಿನ ವ್ಯವಸ್ಥೆಯೂ ಪರಸ್ಪರರಲ್ಲಿ ಚರ್ಚೆಯಿಂದ ನಡೆಯಿತು; ಆದರೆ ಪಾಕಿಸ್ತಾನ ಸರಕಾರ ಈ ಒಪ್ಪಂದಗಳನ್ನು ಕಸದ ಬುಟ್ಟಿಗೆ ಹಾಕಹತ್ತಿದ್ದರಿಂದ ಮತ್ತು ಆಕ್ರಾಮಕ ಧೋರಣವನ್ನು ವಹಿಸಹತ್ತಿದ್ದರಿಂದ ಪರಿಸ್ಥಿತಿ ಬಿಕ್ಕಟ್ಟಿಗಿಳಿದಿದೆ. ಕರಾಚಿ ಒಪ್ಪಂದದ ಪ್ರಕಾರ ಹಿಂದುಸ್ತಾನದ ಆಯಾತ ಸರಕನ್ನು ಅನಿರ್ಬಂಧವಾಗಿ ಒಳಪ್ರದೇಶಕ್ಕೆ ಬಿಡಬೇಕೆಂದು ಗೊತ್ತಾಗಿದ್ದರೂ ನಾಲ್ಕೈದು ಕೋಟಿ ರೂಪಾಯಿ ಬೆಲೆಯ ಸರಕು ಕರಾಚಿಯಲ್ಲಿ ಬಿದ್ದಿದೆಯಂತೆ. ಪೂರ್ವ ಪಾಕಿಸ್ತಾನದಲ್ಲಿ ಹಾಯ್ದು ಬರಬೇಕಾದ ಸಣಬಿಗೆ ಮುಟ್ಟುಗೋಲು, ಪೂರ್ವ ಪಾಕಿಸ್ತಾನಕ್ಕೆ ಆಹಾರ ಪದಾರ್ಥಗಳು ಕಲಕತ್ತದ ಮಾರ್ಗವಾಗಿ ಸಾಗುತ್ತಿದ್ದರೂ ತ್ರಿಪುರಾ ಸಂಸ್ಥಾನಕ್ಕೆ ಅವನ್ನು ಕಳಿಸಲು ಪಾಕಿಸ್ತಾನದ ಅಡ್ಡಿ; ಹೀಗೆ ಮಾಡಿಕೊಂಡ ಒಪ್ಪಂದವನ್ನೇ ಪಾಕಿಸ್ತಾನ ಕಡೆಗಣಿಸಹತ್ತಿದ್ದರಿಂದ ಹಿಂದುಸ್ತಾನ ಸರಕಾರವು ಇದೆಲ್ಲದರ ಬಗ್ಗೆ ಗಂಭೀರ ರೀತಿಯಿಂದ ವಿಚಾರ ಮಾಡಬೇಕಾಗಿದೆ.

ಪಾಕಿಸ್ತಾನವು ಹೀಗೆ ಆರ್ಥಿಕ ಸಂಬಂಧದಲ್ಲಿ ವ್ಯತ್ಯಯವನ್ನುಂಟುಮಾಡುತ್ತಿದೆಯಲ್ಲದೆ ಸ್ವಸಂತೋಷದಿಂದ ಹಿಂದುಸ್ತಾನವನ್ನು ಸೇರಿದ ಕಾಶ್ಮೀರ ಸಂಸ್ಥಾನದಲ್ಲಿಯೂ ಕೈವಾಡ ನಡೆಸಹತ್ತಿದೆ. ಕಾಶ್ಮೀರದ ಸ್ವಾತಂತ್ರ್ಯವನ್ನು ಅಪಹರಿಸುವದಕ್ಕಾಗಿ ದಾಳಿಗಾರರು ನಡೆಸಿದ ಅಭಿಯೋಗವನ್ನು ತಡೆಯಲು ಹಿಂದುಸ್ತಾನ ಸರಕಾರ ಅಣಿಯಾದದ್ದು ನ್ಯಾಯ್ಯವೇ ಆಗಿದೆ. ಇದರಲ್ಲಿ ಕೈಹಾಕಲು ಪಾಕಿಸ್ತಾನ ಸರಕಾರಕ್ಕೆ ಯಾವ ಬಗೆಯ ಅಧಿಕಾರವೂ ಇಲ್ಲ. ಆದರೆ ಪಾಕಿಸ್ತಾನ ಸರಕಾರವು ನ್ಯಾಯನೀತಿಗಳನ್ನೆಲ್ಲ ತುಳಿದು ಮೆಟ್ಟಿ, ಕಾಶ್ಮೀರ ಯುದ್ಧದಲ್ಲಿ ತನ್ನ ಸೈನ್ಯವನ್ನು ಕಳಿಸಿದೆ. ಮೊದಮೊದಲು ಅದು ಇದನ್ನು ಒಪ್ಪುತ್ತಿರಲಿಲ್ಲ. ಆದರೀಗ ಕಾಶ್ಮೀರ ಸಮಿತಿಯೆದುರು ಈ ಮಾತನ್ನು ಒಪ್ಪಿಕೊಳ್ಳಬೇಕಾಯಿತು. ಹಿಂದುಸ್ತಾನವು ಪಾಕಿಸ್ತಾನದ ಅಸ್ತಿತ್ವಕ್ಕೇ ಧಂಗತರುವಂತಹ ಯೋಜನೆ ನಡೆಸಿದ್ದರಿಂದ ಕಾಶ್ಮೀರ ಯುದ್ಧದಲ್ಲಿ ನಾವು ಬೀಳಬೇಕಾಯಿತೆಂದು ಪಾಕಿಸ್ತಾನ ಸರಕಾರ ಸಿದ್ಧ ಮಾಡಿದೆ. ಆದರೆ ಇದೆಲ್ಲ ಕೇವಲ ಕುಂಟ ನೆವವೆಂದು ಬೇರೆ ಹೇಳಬೇಕಾಗಿಲ್ಲ. ಹೈದರಾಬಾದ ಸಮಸ್ಯೆಯಿಂದ ಹಿಂದುಸ್ತಾನದ ಲಕ್ಷ್ಯವನ್ನು ಬೇರೆ ಕಡೆ ಸೆಳೆಯಲು, ಹಿಂದುಸ್ತಾನವನ್ನು ಹೆದರಿಸಿ ಕಾಶ್ಮೀರದಲ್ಲಿ ಹಂಚಿಕಪ್ರವೇಶ ಮಾಡಲು ಪಾಕಿಸ್ತಾನ ಈ ಧೋರಣವನ್ನು ವಹಿಸಿರಬಹುದು. ಕಾಶ್ಮೀರ ಯುದ್ಧದಲ್ಲಿ ಸೈನ್ಯವನ್ನು ಕಳಿಸಿದ ಪಾಕಿಸ್ತಾನದ ಆಕ್ರಾಮಕ ಧೋರಣವನ್ನು ಕಾಶ್ಮೀರ ಸಮಿತಿಯು ತೀವ್ರವಾಗಿ ಖಂಡಿಸಿ ಅದನ್ನು ಹಿಂತೆಗೆದುಕೊಳ್ಳಹಚ್ಚುವದು ಅದರ ಕರ್ತವ್ಯವಾಗಿದೆ. ಒಂದೆಡೆ ಆರ್ಥಿಕ ಸಂಬಂಧವನ್ನು ಬೆಳೆಸಲು ಪ್ರಯತ್ನಿಸುವದು —ಅವರ ಭಂಗವಾದರೂ ಉಪೇಕ್ಷಣೀಯ— ಮತ್ತೊಂದೆಡೆ ಆಕ್ರಾಮಕ ಧೋರಣವನ್ನು ವಹಿಸುವದು; ಈ ಬಗೆಯ ದ್ವಿಮುಖ ಧೋರಣವು ಪಾಕಿಸ್ತಾನಕ್ಕೆ ಎಂದಿಗೂ ಸರಿಹೋಗದು. ಈ ಧೋರಣದಿಂದ ಪಾಕಿಸ್ತಾನವು ಯುಕ್ತರಾಷ್ಟ್ರ ಸಂಘದ ಸದಸ್ಯತ್ವಕ್ಕೇ ಎರವಾಗಬೇಕಾಗಿದೆ. ಪಾಕಿಸ್ತಾನ ಸರ್ಕಾರಕ್ಕೆ ಸಕಾಲದಲ್ಲಿಯೇ ಬುದ್ಧಿ ಬಂದು ಅದು ತನ್ನ ಈ ಅನ್ಯಾಯದ ಘಾತಕ ಧೋರಣವನ್ನು ಬದಲಿಸದಿದ್ದರೆ ಎರಡೂ ರಾಷ್ಟ್ರಗಳ ಶಾಂತಿಭಂಗವಾಗುವದೆಂಬಲ್ಲಿ ಸಂದೇಹವಿಲ್ಲ.

ಲೋಕಮಾನ್ಯರ ಪುಣ್ಯತಿಥಿ



"ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು" ಎಂದು ಹೇಳಿ ಭಾರತದಲ್ಲಿ ಮೊದಲು ಕ್ರಾಂತಿಕಾರಿ ರಾಜಕಾರಣಕ್ಕೆ ಚಾಲನೆ ಕೊಟ್ಟ ಲೋಕಮಾನ್ಯ ತಿಲಕರ ಪುಣ್ಯತಿಥಿ ಸ್ವತಂತ್ರ ಭಾರತದಲ್ಲಿ ಇದೀಗ ಮೊದಲನೆಯ ಬಾರಿ ಅಗಸ್ಟ ೧ಕ್ಕೆ ಆಚರಿಸಲ್ಪಟ್ಟಿತು. ಮುಂಬಯಿ ಚೌಪಾಟಿಯಲ್ಲಿ ತಿಲಕರ ಪುತ್ಥಳಿಯ ಮುಂದೆ ನಡೆದ ತಿಲಕ ಪುಣ್ಯದಿನ ಸಭೆಯ ದೃಶ್ಯವಿದು.

ವಾರದ ಸಿಂಹಾವಲೋಕನ

ಮತ್ತೆ ಹೈದ್ರಾಬಾದ

ಈ ವಾರದಲ್ಲಿ ಹೈದ್ರಾಬಾದ ಸಮಸ್ಯೆ ಮತ್ತೆ ಗಂಭೀರ ಸ್ವರೂಪವನ್ನು ತಾಳಿದೆ. ನಿಜಾಮ ಸಾಹೇಬರು ಬ್ರಿಟಿಶ ಟೋರಿಪಕ್ಷದ ಬೆಂಬಲದಿಂದ ಇಷ್ಟೊಂದು ಉದ್ಧಟತನವನ್ನು ನಡೆಸಿರುವರೆಂಬುದು ಕಾಮನ್ಸ ಸಭೆಯಲ್ಲಿ ನಡೆದ ಚರ್ಚೆಯಿಂದ ಸ್ಪಷ್ಟವಾಗುವದು. ಟೋರಿ ಪಕ್ಷದ ಧುರೀಣರಾದ ಚರ್ಚಿಲ್ಲರು ನಿಜಾಮಸಾಹೇಬರನ್ನು ಎತ್ತಿಹಿಡಿದು ಹಿಂದುಸ್ತಾನ ಸರಕಾರದ ಆಕ್ರಾಮಕ ಧೋರಣಕ್ಕೆ ಅರೆದಾಳ ಹಾಕಲು ಬ್ರಿಟಿಶ ಸರಕಾರ ಮಧ್ಯಸ್ಥಿಕೆ ಮಾಡಬೇಕೆಂದು ಸೂಚಿಸಿದರು. ಬ್ರಿಟಿಶ ಸರಕಾರದ ಮುಖ್ಯಮಂತ್ರಿ ಅಟ್ಲಿಯವರು ಹಿಂದುಸ್ತಾನ ಹೈದ್ರಾಬಾದಗಳಲ್ಲಿ ಯಥಾಸ್ಥಿತಿ ಒಡಂಬಡಿಕೆಯಾಗಿದ್ದರಿಂದ ಹೈದ್ರಾಬಾದ ಸಮಸ್ಯೆಯಲ್ಲಿ ಕೈಹಾಕಲು ಬ್ರಿಟಿಶ ಸರಕಾರಕ್ಕೆ ಅಧಿಕಾರವಿಲ್ಲೆಂದು ಹೇಳಿ ಚರ್ಚಿಲ್ಲರ ಹಿಂದುವಿರೋಧಿ ಧೋರಣವನ್ನು ಬೈಲಿಗೆಳೆದು ಅದನ್ನು ಖಂಡಿಸಿದರು. ಇದರಿಂದ ನಿರಾಶೆಗೊಂಡ ನಿಜಾಮರು ಮತ್ತೆ ಸಂಧಾನದ ಮಾತುಕತೆ ನಡೆಸಿರುವರು. ಜೂನ ತಿಂಗಳದ ಒಪ್ಪಂದದ ಕರಡಿಗೆ ಸಹಿ ಹಾಕಲು ಅವರೀಗ ಸಿದ್ಧರಾಗಿರುವರಂತೆ. ಆದರೆ ಆ ಕರಾರು ಈಗ ಊರ್ಜಿತದಲ್ಲಿ ಇಲ್ಲವೆಂದು ಹಿಂದುಸ್ತಾನ ಸರಕಾರ ಈ ಮೊದಲೇ ಸಾರಿದೆ. ಸದ್ಯದ ಸರಕಾರವನ್ನು ವಿಸರ್ಜಿಸಿ ರಜಾಕಾರರ ಆಕ್ರಮಣವನ್ನು ತಡೆದು ಪ್ರಜಾಪ್ರಭುತ್ವ ಸರಕಾರವನ್ನು ಸ್ಥಾಪಿಸಿದಾಗಲೆ ಹೊಸ ಮಾತುಕತೆಯ ಪ್ರಾರಂಭವೆಂದು ನಿಜಾಮ ಸರಕಾರಕ್ಕೆ ಸ್ಪಷ್ಟಪಡಿಸಲಾಗಿದೆಯಂತೆ. ಇದರಿಂದ ಉಂಟಾಗುವ ಗಂಭೀರ ಪರಿಸ್ಥಿತಿಗಾಗಿ ಕಾಶೀಮ ರಜ್ವಿ ಮತ್ತು ಅವರ ರಜಾಕಾರರಿಗೂ ಬಿಸಿ ಹತ್ತಿದೆಯಂತೆ. ಮುಂದಿನ ಧೋರಣೆಯ ಬಗ್ಗೆ ಅವರು ದೀರ್ಘವಿಚಾರ ವಿನಿಮಯ ನಡೆಸಿರುವರು. ಇತ್ತ ಸಂಧಾನದ ಮಾತುಕತೆ ನಡೆಸಿರುವಾಗಲೆ ನಿಜಾಮರು ಯುದ್ಧದ ಸಿದ್ಧತೆಯನ್ನು ಮಾಡಿ ಆಯಕಟ್ಟಿನ ಸ್ಥಳಗಳಲ್ಲಿ ಸೈನ್ಯ ಸಂಗ್ರಹಿಸಿದ್ದಾರಂತೆ.

ಗಂಭೀರ ಪರಿಸ್ಥಿತಿ

ನಿಜಾಮರು ಮತ್ತೆ ಸಂಧಾನದ ಮಾತುಕತೆಗಳನ್ನು ನಡೆಸಿದ್ದರಿಂದ ಹೈದ್ರಾಬಾದಿನಲ್ಲಿಯ ಪ್ರತಿಗಾಮಿಗಳ ಹೊಟ್ಟೆಯಲ್ಲಿ ಉರಿ ಬಿದ್ದಂತಾಗಿದೆ. ಲೂಟಿ, ಕೊಲೆ, ದೊಂಬಿಗಳಲ್ಲಿಯೇ ನಿರತರಾಗಿರುವ ರಜಾಕಾರರ ತಂಡಕ್ಕಂತೂ ಇದರಿಂದ ದಿಗ್ಭ್ರಮೆಯಾದಂತಾಗಿದೆ. ಹಿಂದುಸ್ತಾನದಲ್ಲಿ ಹೈದ್ರಾಬಾದವು ಸೇರಿ ಸಂಸ್ಥಾನದಲ್ಲಿ ಶಾಂತ ಪರಿಸ್ಥಿತಿ ಸ್ಥಾಪಿತವಾದರೆ ತಮ್ಮ ಬೇಳೆ ಬೇಯಲಾರದೆಂಬುದು ಅವರಿಗೆ ಮನವರಿಕೆಯಾದ್ದರಿಂದ ಅವರು ನಿಜಾಮರ ಸಂಧಾನ ವಿರೋಧಿಸುತ್ತಿರುವರು. ಈ ಪ್ರಯತ್ನಕ್ಕಾಗಿಯೊಂದು ಬಗೆಯ ಬಂಡಾಯವನ್ನೇ ಹೂಡಿರುವರೆಂದು ಸುದ್ದಿ ಬಂದಿದೆ. ಇದರಿಂದ ದೇಶದಲ್ಲಿ ಅರಾಜಕ ಪರಿಸ್ಥಿತಿಯುಂಟಾಗಿದೆ. ಶಾಸನವನ್ನು ಧಿಕ್ಕರಿಸಿಕೊಂಡ ಹಿಂದೀ ಸೈನ್ಯವನ್ನು ಹೊರಗಟ್ಟಬೇಕೆಂದು ಹೇಳಿದಾಗ ಇದು ಆತ್ಮಘಾತಕವೆಂದು ಹೈದ್ರಾಬಾದದ ಸೇನಾಪತಿ ಎಲ್. ಎಡ್ರೋಸರು ಅಭಿಪ್ರಾಯಪಟ್ಟರು. ಇದರ ಪರಿಣಾಮವಾಗಿ ಅವರೀಗ ತಮ್ಮ ಸ್ಥಳಕ್ಕೆ ರಾಜೀನಾಮೆ ಸಲ್ಲಿಸಬೇಕಾಯಿತು. ತಮ್ಮ ಮಂತ್ರಿಮಂಡಳದ ಮಾತು ಮೀರಿ ನಿಜಾಮರು ಸರ ಮಿರ್ಜಾ ಇಸ್ಮಾಯಿಲರ ಮುಖಾಂತರ ಮತ್ತೆ ಸಂಧಾನದ ಮಾತುಕತೆ ನಡೆಸಿದ್ದನ್ನು ನಿಷೇಧಿಸಲು ಹೈದ್ರಾಬಾದ ಮುಖ್ಯಮಂತ್ರಿ ಮೀರ ಲಾಯಕ ಅಲ್ಲಿಯವರು ರಾಜೀನಾಮೆ ಸಲ್ಲಿಸಿರುವರೆಂದು ತಿಳಿಯುತ್ತದೆ. ಹೀಗೆ ಪರಿಸ್ಥಿತಿ ವಿಕೋಪಕ್ಕೆ ಹೋಗಿದ್ದರಿಂದ ನಿಜಾಮಸಾಹೇಬರು ಭಾರತಕ್ಕೆ ಶರಣು ಬರದೆ ಗತ್ಯಂತರವಿಲ್ಲದಂತಾಗಿದೆ. ರಜಾಕಾರರ ಹಾವಳಿಯನ್ನು ತಡೆದು ದೇಶದಲ್ಲಿ ಶಾಂತಿಯನ್ನು ಪ್ರಸ್ಥಾಪಿಸುವದಕ್ಕಾಗಿ ಒಪ್ಪಂದ ಮಾಡಿಕೊಳ್ಳುವದು ಅತ್ಯಂತ ಅವಶ್ಯವೆಂದು ಬೇರೆ ಹೇಳಬೇಕಿಲ್ಲ.

ಬ್ಯಾ. ಜಿನ್ನಾರ ವಿಚಾರಣೆಯಾಗಲಿ

ಮುಸ್ಲಿಂಲೀಗಿನ ಧುರೀಣರಾದ ಬ್ಯಾ. ಜಿನ್ನಾರು ಮುಸಲ್ಮಾನರ ಧಾರ್ಮಿಕ ಭಾವನೆಗಳನ್ನು ಉದ್ರೇಕಿಸಿ 'ಇಸ್ಲಾಮ ಗಂಡಾಂತರದಲ್ಲಿದೆ' ಎಂಬ ಕೂಗನ್ನೆಬ್ಬಿಸಿ ಅವರ ಬೆಂಬಲದಿಂದ ಪಾಕಿಸ್ತಾನವನ್ನು ಪಡೆದರು. ಇದರಿಂದ ದೇಶಕ್ಕೆ ಎಷ್ಟೊಂದು ಹಾನಿಯಾಯಿತು, ಆಗಹತ್ತಿದೆ ಎಂಬದನ್ನು ನೋಡಿದರೆ ಮೈ ಜುಮ್ಮೆನ್ನುತಿದೆ. ಪಾಕಿಸ್ತಾನ ಸ್ಥಾಪನೆಗೆ ಸರ್ವರೀತಿಯಿಂದ ಸಹಾಯ ಮಾಡಿದವರೇ ಈಗ ತಮ್ಮ ತಪ್ಪನ್ನು ಒಪ್ಪಿಕೊಳ್ಳಹತ್ತಿರುವರು. ಪಾಕಿಸ್ತಾನವನ್ನು ಬ್ಯಾ. ಜಿನ್ನಾರಿಗೆ ಪ್ರಾಪ್ತಮಾಡಿಕೊಟ್ಟ ಬಳಿಕವೂ ತಾವು ಹಿಂದುಸ್ತಾನದಲ್ಲಿಯೇ ಇರತಕ್ಕವರು ಎಂಬದನ್ನು ನೆನೆಯದೆ ಅನೇಕ ಹಿಂದೀ ಮುಸಲ್ಮಾನರು ಸುಚ್ಛಚ್ಚಾರ ಮಾಡಿದರು, ಕುಣಿದಾಡಿದರು. ಆದರೀಗ ಅವರ ಕಣ್ಣ ಮೇಲಿನ ಪೊರೆಹರಿದಿದ್ದು ಶುದ್ಧ ಪ್ರಕಾಶದಲ್ಲಿ ತಮ್ಮ ಮಹಾಪರಾಧ ಅವರಿಗೆ ಕಾಣಹತ್ತಿದೆ. ಪಶ್ಚಾತ್ ಬುದ್ಧಿಯೀಗ ಉಪಯೋಗಕ್ಕೆ ಬಾರದಂತಾಗಿದೆ. ಹಿಂದೀಯರನ್ನು ಇಷ್ಟೊಂದು ಗೋಳಿಗೀಡುಮಾಡಿದ್ದಕ್ಕೆ ಬ್ಯಾ. ಜಿನ್ನಾರ ದ್ವಿರಾಷ್ಟ್ರ ಧೋರಣವೇ ಕಾರಣವೆಂದು ಇಲ್ಲಿನ ಮುಸಲ್ಮಾನರಿಗೆ ಮನಗಟ್ಟಾಗಹತ್ತಿದೆ. ದಿಲ್ಲಿಯಲ್ಲಿಯ ೫೫ ಪ್ರಮುಖ ಮುಸಲ್ಮಾನರು ಪತ್ರಿಕೆಯೊಂದನ್ನು ಹೊರಡಿಸಿ ಪಾಕಿಸ್ತಾನದ ಗವರ್ನರ ಜನರಲ್ ಬ್ಯಾ. ಜಿನ್ನಾ ಇವರನ್ನು ಸಹ ಹಿಟ್ಲರನಂತೆಯೇ ವಿಚಾರಣೆಗೆ ಗುರಿಪಡಿಸಬೇಕೆಂದು ಹಿಂದುಸ್ತಾನದ ಮುಖ್ಯ ಮಂತ್ರಿಗಳ ಮುಖಾಂತರ ಸಂಯುಕ್ತ ರಾಷ್ಟ್ರಸಂಘದ ಕಾಶ್ಮೀರ ಸಮಿತಿಗೆ ಬಿನ್ನವಿಸಿಕೊಂಡಿದ್ದಾರೆ. ಜಿನ್ನಾರ ದ್ವಿರಾಷ್ಟ್ರವಾದವೇ ಕೋಟ್ಯಂತರ ನಿರಪರಾಧಿಗಳ ಕೊಲೆ ರಕ್ತಪಾತಗಳಿಗೆ ಮತ್ತು ವಿತ್ತ ಜೀವಿತಗಳ ಹಾನಿಗೆ ಹೊಣೆಯೆಂದೂ ಅವರು ಆರೋಪಿಸಿದ್ದಾರೆ. ಸಂಯುಕ್ತರಾಷ್ಟ್ರ ಸಂಘವು ಇಂದು ಬ್ಯಾ. ಜಿನ್ನಾರ ವಿಚಾರಣೆ ನಡೆಸಲು ಸಮರ್ಥವಿದೆಯೋ ಇಲ್ಲವೋ ಎಂಬುದು ಸಂಶಯಾಸ್ಪದ! ಹಾಗೆ ಮಾಡದಿದ್ದರೂ ಈ ಮುಸಲ್ಮಾನ ಮುಂದಾಳುಗಳ ಭಾವನೆಗೆ ಬೆಲೆ ಇದೆಯೆಂಬುದು ಮಾತ್ರ ನಿರ್ವಿವಾದವಾಗಿದೆ. ಈ ಪರಿಸ್ಥಿತಿಯಲ್ಲಿಯಾದರೂ ಹಿಂದೀ ಮುಸಲ್ಮಾನರು ತಮ್ಮ ಕರ್ತವ್ಯವನ್ನು ತಿಳಿದುಕೊಂಡು ಹಿಂದುಸ್ತಾನವನ್ನು ಬಲಪಡಿಸಲು ಸರಕಾರಕ್ಕೆ ಎಲ್ಲ ಬಗೆಯಿಂದ ಸಹಾಯ ಮಾಡಬೇಕೆಂದು ಬಿನ್ನವಿಸಲಾಗಿದೆ.

ಸಮಯೋಚಿತ ಸಲಹೆ

ಮುಂಬಯಿ ಸರಕಾರದ ಮುಖ್ಯ ಮಂತ್ರಿಗಳಾದ ಶ್ರೀ ಬಾಳಾಸಾಹೇಬ ಖೇರರು ಕಳೆದ ೨೫ಕ್ಕೆ ಮುಂಬಯಿಯಲ್ಲಿ ಕೂಡಿದ್ದ ಕಲೆಕ್ಟರರ ಪರಿಷತ್ತಿನಲ್ಲಿ, ಕಾಂಗ್ರೆಸ್ಸಿಗರು ಅನವಶ್ಯಕವಾಗಿ ಅಧಿಕಾರಿಗಳ ಕೆಲಸದಲ್ಲಿ ಕೈಹಾಕುತ್ತಿರುವದನ್ನು ನಿಷೇಧಿಸಿ, ಅಧಿಕಾರಿಗಳು ಇಂಥವರ ಮಾತಿಗೆ ಮನಸೋತು ಕರ್ತವ್ಯದಲ್ಲಿ ತಪ್ಪಬಾರದೆಂದು ಕಿವಿಮಾತು ಹೇಳಿದ್ದು ಸಮಯೋಚಿತವಾಗಿದೆ. ಶ್ರೀ ಖೇರರ ಈ ಸಲಹೆಯಿಂದ ಕಾಂಗ್ರೆಸ ಕಾರ್ಯಕರ್ತರಲ್ಲಿ ಒಂದು ಬಗೆಯ ಕ್ಷೋಭವುಂಟಾದಂತೆ ಕಂಡು ಬರುತ್ತದೆ. ಕಾಂಗ್ರೆಸ ಕಾರ್ಯಕರ್ತರು ಶ್ರೀ ಖೇರರ ಅಭಿಪ್ರಾಯದ ವಿರುದ್ಧ ಮತಪ್ರದರ್ಶಿಸಹತ್ತಿರುವರಲ್ಲದೆ ಇದರಿಂದ ಕಾಂಗ್ರೆಸ್ಸಿನ ಗೌರವ ಪ್ರತಿಷ್ಠೆಗೆ ಕುಂದು ಬರುತಿದೆಯೆಂದೂ ದೂರಿದ್ದಾರೆ. ಶ್ರೀ ಖೇರರು ಕಾಂಗ್ರೆಸ್ಸಿನ ನಿಷ್ಠಾವಂತ ಅನುಯಾಯಿಗಳು, ಕಾಂಗ್ರೆಸ್ಸಿನ ಪರವಾಗಿಯೇ ಆಡಳಿತವನ್ನು ಸಾಗಿಸುತ್ತಿರುವವರು ಎಂಬುದನ್ನು ಮರೆತೇ ಅವರ ವಿರುದ್ಧ ಕಾಂಗ್ರೆಸ ಕಾರ್ಯಕರ್ತರು ಈ ಹೂಯಿಯನ್ನೆಬ್ಬಿಸಿರುವರೆಂದು ತೋರುತ್ತದೆ. ಶ್ರೀ ಖೇರರಂಥವರು ಕಾಂಗ್ರೆಸ್ಸಿನ ಗೌರವ ಪ್ರತಿಷ್ಠೆಗೆ ಭಂಗ ಬರುವಂಥ ಧೋರಣ ವಹಿಸಿರುವರೆಂದು ಇವರೆಂತು ಭಾವಿಸುವರೋ ತಿಳಿಯದು. ಸರಕಾರದ ಆಡಳಿತ ಯಂತ್ರವು ಕಾರ್ಯಕ್ಷಮವಾಗಿ ಸಾಗಬೇಕಾದರೆ ಎಲ್ಲ ಬಗೆಯ ಕಾಂಗ್ರೆಸ ಕಾರ್ಯಕರ್ತರ ಹಸ್ತಕ್ಷೇಪವು ನಡೆಯದೆಂಬುದು ನಿರ್ವಿವಾದ. ಕಾಂಗ್ರೆಸ್ಸು ಆಡಳಿತದ ಬಗ್ಗೆ ತನ್ನ ಧೋರಣವನ್ನು ಗೊತ್ತುಪಡಿಸಿ ತನ್ನ ಮಂತ್ರಿಗಳಿಗೆ ಹೀಗೆ ಹೀಗೆ ಮಾಡಬೇಕೆಂದು ವಿಧಿಸಬೇಕಲ್ಲದೆ ಪ್ರತಿಯೊಬ್ಬ ಕಾಂಗ್ರೆಸ್ಸಿಗನೂ ಹೀಗೆ ಅಧಿಕಾರಿಗಳ ದೈನಂದಿನ ಕಾರ್ಯದಲ್ಲಿ ವ್ಯತ್ಯಯವುಂಟಾಗುವಂತೆ ವರ್ತಿಸುವದು ಸರಿಯಾಗದು. ಅಧಿಕಾರಿಗಳ ಆಡಳಿತವು ಅನ್ಯಾಯದ್ದು ಇಲ್ಲವೆ ಜನಕ್ಕೆ ಅಹಿತಕರವಾದದ್ದು ಎನಿಸಿದರೆ ಮಂತ್ರಿಗಳ ಕಡೆಗೆ ಅವರ ಬಗ್ಗೆ ದೂರು ಒಯ್ಯಬೇಕಲ್ಲದೆ ಪ್ರತಿಯೊಬ್ಬ ಅಧಿಕಾರಿಯ ಕಾರ್ಯದಲ್ಲಿ ವಿಚಾರಣೆ ನಡೆಸಹತ್ತಿದ್ದಾದರೆ ಆಡಳಿತವು ಸುಗಮವಾಗಿ ಸಾಗಲಾರದು. ಪ್ರಜಾಪ್ರಭುತ್ವತತ್ವಕ್ಕೂ ಇದು ಕ್ಕೂ ವಿರೋಧಕವಾಗಿದೆ. ಶ್ರೀ ಖೇರರ ಮಾತಿನ ಮಹತ್ವವನ್ನೂ ರಹಸ್ಯವನ್ನೂ ಕಾಂಗ್ರೆಸ್ಸಿಗರು ನಿರ್ವಿಕಾರ ಮನಸ್ಸಿನಿಂದ ತಿಳಿದುಕೊಂಡು ಅದರಂತೆ ನಡೆಯಬೇಕಲ್ಲದೆ ಅವರ ವಿರುದ್ಧ ಬಂಡು ಹೂಡುವದು ಸಮಂಜಸವಾಗದು.

ಕಾಂಗ್ರೆಸ್ಸಿನ ಸುಧಾರಣೆ

ಕಾಂಗ್ರೆಸ್ ಸಂಸ್ಥೆಯನ್ನೂ ಸರಕಾರದ ಆಡಳಿತೆಯನ್ನೂ ಪರಿಶುದ್ಧಗೊಳಿಸುವ ಸಲುವಾಗಿ ಶ್ರೀ. ರಾಜಗೋಪಾಲಾಚಾರಿ, ಪಂಡಿತ ಜವಾಹರಲಾಲ ನೆಹರು, ಸರದಾರ ವಲ್ಲಭಭಾಯಿ ಪಟೇಲ, ಮೌಲಾನಾ ಅಝಾದರೇ ಮೊದಲಾದ ಕಾಂಗ್ರೆಸ್ಸಿನ ವರಿಷ್ಠ ನಾಯಕರು ಸರಕಾರಿ ಹುದ್ದೆಗಳಿಂದ ಹೊರಬಿದ್ದು ತಮ್ಮ ಸ್ಥಾನದಲ್ಲಿ ಸಮರ್ಥರೂ ಕಾರ್ಯಕ್ಷಮರೂ ಆದ—ಆದರೂ ಅಷ್ಟು ಹಿರಿಯ ಮುಂದಾಳುಗಳಲ್ಲದ—ಕಾಂಗ್ರೆಸ್ಸಿಗರನ್ನು ಇರಿಸಬೇಕೆಂದೂ ೧೯೩೭ರ ರಾಜ್ಯಭಾರ ಕಾಲದಲ್ಲಿ ಮಾಡಿದಂತೆ ತಾವು ಹೊರಗಿನಿಂದ ಅವರಿಗೆ ಮಾರ್ಗದರ್ಶನ ಮಾಡುತ್ತಿರಬೇಕೆಂದೂ ಕೆಲ ಹಳೆಯ ಕಾರ್ಯಕರ್ತರೂ ಪ್ರಮುಖ ಕಾಂಗ್ರೆಸ್ಸಿಗರೂ ಸೂಚಿಸುತ್ತಾರೆ.

ನನ್ನ ಅಭಿಪ್ರಾಯದಲ್ಲಿ ಇದು ಸಾಧ್ಯವಾಗಬೇಕಾದರೆ ನಮ್ಮ ಸದ್ಯದ ರಾಜ್ಯಪದ್ಧತಿಯ ಮೂಲ ಕಲ್ಪನೆಯೆ ಬದಲಾಗಬೇಕು. ಈಗಿನ ಪದ್ಧತಿಯಲ್ಲಿ ಒಂದು ರಾಜಕೀಯ ಪಕ್ಷದ ಮಂತ್ರಿಮಂಡಲವೆ ಸರಕಾರದ ಕಾರ್ಯನಿರ್ವಾಹಕ ವರ್ಗ. ಅದಕ್ಕೇ ಧೋರಣೆಗಳನ್ನು ಗೊತ್ತುಪಡಿಸುವ ಅಧಿಕಾರವಿದೆ. ಅದು ಹೆಸರಿಗೆ ಶಾಸನಸಭೆಗೆ ಹೊಣೆಯಾಗಿದ್ದರೂ ಶಾಸನ ಸಭೆಯಲ್ಲಿ ಕನಿಷ್ಠ ತನ್ನ ಪಕ್ಷದವರನ್ನು ನಿಯಂತ್ರಿಸುವ ಶಕ್ತಿ ಅದಕ್ಕಿರುವದು. ಆದರೆ ಮೇಲೆ ಹೇಳಿದ ಸೂಚನೆಯನ್ನು ಆಚರಣೆಗೆ ತರಬೇಕಾದರೆ ಈ ಪದ್ಧತಿಯನ್ನು ಬಿಟ್ಟು ಮಂತ್ರಿಮಂಡಲವನ್ನು ನೇಮಕ ಮಾಡುವ ಪದ್ಧತಿಯನ್ನು ತರಬೇಕಾಗುವದು. ಈ ಮಂತ್ರಿಮಂಡಲಕ್ಕೆ ಸ್ವಯಂಪ್ರೇರಣೆಯಿಂದ ಆಡಳಿತ ನಡೆಸುವ ಹಕ್ಕು ಇರುವಂತಿಲ್ಲ. ತಾನು ತಂದ ಮಸೂದೆಯೊಂದು ಶಾಸನ ಸಭೆಯಲ್ಲಿ ಸೋಲುತ್ತಿಂದರೆ ಅದು ರಾಜೀನಾಮೆಕೊಡಲು ಬದ್ಧವಾಗಿಯೂ ಇರಬೇಕಿಲ್ಲ. ಶಾಸನ ಸಭೆ ಹಾಕಿಕೊಟ್ಟ ಧೋರಣೆಯನ್ನು ಆಚರಣೆಗೆ ತರುವದಷ್ಟೇ ಅದರ ಕೆಲಸ. ಸ್ವಿಟ್ಝರ್ಲಂಡಿನ ಘಟನೆ ಹೆಚ್ಚುಕಡಿಮೆ ಇದೇ ಮಾದರಿಯದೆಂದು ಕೇಳುತ್ತೇನೆ. ನಮ್ಮ ಘಟನಾ ಸಮಿತಿ ತಾನು ಹಿಂದೆ ನಿರ್ಣಯಿಸಿದ್ದನ್ನೆಲ್ಲ ಹೊಸದಾಗಿ ವಿಚಾರಿಸಲು ಸಿದ್ಧವಾದ ಹೊರತು ಈ ಪ್ರಶ್ನೆಯನ್ನೀಗ ಎತ್ತುವದೇ ಸಾಧ್ಯವಿಲ್ಲ. ಒಂದು ವೇಳೆ ಮೇಲೆ ಹೇಳಿದ ಘಟನಾತ್ಮಕ ಸ್ಥಿತ್ಯಂತರವನ್ನು ಮಾಡಲು ನಾವು ಸಮರ್ಥರಾದರೂ ಕಾಂಗ್ರೆಸ ವರಿಷ್ಠರು ಸ್ವತಃ ಶಾಸನ ಸಭೆಗಳ ಸದಸ್ಯರಾಗದೆ ಮಂತ್ರಿಗಳನ್ನು ನಿಯಂತ್ರಿಸುವದು ಶಕ್ಯವಾಗಲಾರದು. ಅಂದರೆ ಪಂಡಿತ ಜವಾಹರಲಾಲ ನೆಹರು ಮತ್ತು ಸರದಾರ ವಲ್ಲಭಭಾಯಿ ಪಟೇಲರು ಶಾಸನ ಸಭೆಯ ಧುರೀಣರು ಮತ್ತು ಉಪ ಧುರೀಣರು ಆಗತಕ್ಕದ್ದು ಮತ್ತು ತಮ್ಮ ಆಜ್ಞೆಯಂತೆಯೆ (ಕೇವಲ ಸಲಹೆಯನ್ನಯ ಅಲ್ಲ) ಆಚಾರ ವಿಚಾರಗಳನ್ನನುಸರಿಸಬಲ್ಲ ಸಮರ್ಥ ಕಾಂಗ್ರೆಸ್ಸಿಗರನ್ನು ಮಂತ್ರಿಮಂಡಳದಲ್ಲಿ ನೇಮಿಸತಕ್ಕದ್ದು. ಸರಕಾರದ ಆಡಳಿತವು ಗವರ್ನರ ಜನರಲ್‌ನ ನೇತೃತ್ವದಲ್ಲಿ ನಡೆಯತಕ್ಕದ್ದು. ಅವನು ಮಂತ್ರಿಮಂಡಳದ ಸಲಹೆಯಂತೆ ಆಡಳಿತವನ್ನು ಸಾಗಿಸತಕ್ಕದ್ದು. ಬಹುಮತ ಪಕ್ಷದ ಧುರೀಣರು ಮತ್ತು ಅವನ ಕಾರ್ಯಕಾರೀ ಮಂಡಳವು ಈ ಮಂತ್ರಿಮಂಡಳವನ್ನು ಆರಿಸತಕ್ಕದ್ದು. ಹೆಜ್ಜೆಹೆಜ್ಜೆಗೂ ಅವರ ಸಲಹೆಯನ್ನೇ ಅದು ಅಪೇಕ್ಷಿಸತಕ್ಕದ್ದು.

ಇದರಿಂದ ಪರಿಸ್ಥಿತಿ ಮತ್ತಷ್ಟು ಗೊಂದಲಕ್ಕೀಡಾಗುವದಲ್ಲದೆ ಸದ್ಯದ ಪರಿಸ್ಥಿತಿ ಇದರಿಂದ ಸ್ವಲ್ಪ ಮಟ್ಟಿಗೂ ಸುಧಾರಿಸದೆಂದು ನನಗೆನಿಸುತ್ತದೆ. ಪ್ರಜಾಪ್ರಭುತ್ವ ಸ್ಥಾಪನೆಯಿಂದ ಉಂಟಾದ ಬದಲಾವಣೆಯ ಪರಿಣಾಮವಾಗಿ ಆಡಳಿತ ಸೂತ್ರವು ದೇಶದಲ್ಲಿಯ ಪ್ರಜಾಪ್ರತಿನಿಧಿ ವರಿಷ್ಠರ ಕೈಯಲ್ಲಿಯೇ ಇರತಕ್ಕದ್ದು. ಮಂತ್ರಿಗಳು ಎಷ್ಟೇ ಕಾರ್ಯಕ್ಷಮರಾಗಿದ್ದರೂ ತತ್ವತಃ ಮತ್ತು ಕಾರ್ಯತಃ ಅವರ ಮಂತ್ರಿಮಂಡಲವು ಬೇರೆಯವರ ನಿಯಂತ್ರಣದಲ್ಲಿ ತಾತ್ವಿಕವಾಗಿ ಅವರು ಅವರ ಕೈಕೆಳಗಿನವರಿರಲಿ ಇಲ್ಲವೆ ಹೊರಗಿನವರಿರಲಿ-ಇದ್ದರೆ ಇಂದು ಪಂಡಿತ ಜವಾಹರಲಾಲ ನೆಹರು ಇಲ್ಲವೆ ಸರದಾರ ವಲ್ಲಭಭಾಯಿ ಪಟೇಲ ಅಥವಾ ಉಳಿದ ಮಂತ್ರಿಗಳು ಈ ದೇಶದ ಮತ್ತು ಪರದೇಶದ ಕಾರ್ಯಕಲಾಪಗಳಲ್ಲಿ ಪಡೆದವರ್ಚಸ್ಸು, ಅಧಿಕಾರ ಅವರಿಗೆ ದೊರೆಯಲಾರವು ಮತ್ತು ಅಷ್ಟೊಂದು ಉಚ್ಚ ತತ್ವಗಳನ್ನು ಅನುಸರಿಸದ ಮಹಾಜನರು ಪರಿಷ್ಕರಿಂದು ಕರೆಯಿಸಿಕೊಳ್ಳುವವರ ನಿಯಂತ್ರಣದಲ್ಲಿಯೂ ಉಳಿಯದಿರುವ ಸಂಭವವು ಯಾವಾಗಲೂ ಬರುವದುಂಟು. ಆದುದರಿಂದ ಯಾವದೇ ಉಪಾಯವನ್ನು ಹುಡುಕಬೇಕಾದರೂ ಅಧಿಕಾರದಲ್ಲಿರುವ ದೇಶದ ಧುರೀಣರನ್ನು ಇಟ್ಟುಕೊಂಡೇ ನಡೆಯತಕ್ಕದ್ದು ಎಂದು ನನ್ನ ಅಭಿಪ್ರಾಯ.

ಈ ಧ್ಯೇಯ ಸಾಧನೆಯನ್ನು ಲಕ್ಷದಲ್ಲಿಟ್ಟುಕೊಂಡು ಕಾಂಗ್ರೆಸ್ಸು ಎಂತು ಸುಧಾರಿಸಬಲ್ಲದೆಂಬದನ್ನು ನಾವು ವಿಚಾರ ಮಾಡಲಿಕ್ಕೆಬೇಕು. ಸಂಸ್ಥೆಯನ್ನು ಮತ್ತು ಆಡಳಿತವನ್ನು ವಿಶುದ್ಧಗೊಳಿಸುವ ಪ್ರಾರಂಭಿಕ ಉಪಾಯಗಳನ್ನು ನಾನು ಹಿಂದಿನ ಲೇಖಗಳಲ್ಲಿ ಈ ಮೊದಲು ಸೂಚಿಸಿದ್ದೇನೆ. ಅದನ್ನು ಮಾಡಿದ ನಂತರ ಕಾಂಗ್ರೆಸ್ಸು ಬಂಡವಲುವಾದ, ಸಾಮ್ಯವಾದ, ಗಾಂಧೀವಾದ ಮೊದಲಾದ ತಾತ್ವಿಕ ಧ್ಯೇಯಗಳಿಗೆ ಶರಣುಹೋಗುವುದನ್ನು ಬಿಟ್ಟುಕೊಡಬೇಕಲ್ಲದೆ ಈಗಾಗಲೆ ಆಚರಣೆಯಲ್ಲಿರುವ ಜಾತೀಯತೆ, ಪ್ರಾಂತೀಯತೆ, ಸಾಂಸ್ಕೃತೀಯತೆ ಜ್ಞಾತೀಯತೆ, ಸಂಧಿಸಾಧಕತೆ ಮೊದಲಾದ ದುಷ್ಟ ಸ್ಕಂಧಗಳ ಸಂಬಂಧವನ್ನೂ ಇಟ್ಟುಕೊಳ್ಳಬಾರದು. ಮೊದಲು ಹೇಳಿದ ತತ್ವಗಳ ಬದಲು ಅದು ತನ್ನ ಮುಂದೆ ಧುತ್ತೆಂದು ನಿಂತಿರುವ ಅನೇಕ ಸಮಸ್ಯೆಗಳನ್ನನುಲಕ್ಷಿಸಿದರೆ ಯಾವುದೊಂದು ವಿಶಿಷ್ಟ ತತ್ವಪ್ರಣಾಲಿಗೆ ತಾನು ಶರಣು ಹೋಗಲಾರೆನೆಂಬದಾಗಿ ಬಹಿರಂಗವಾಗಿ ಸಾರುವ ಧೈರ್ಯವನ್ನು ತಾಳಬೇಕು. ಮೇಲೆ ಹೇಳಿದ ತತ್ವಗಳ ಎಲ್ಲ ಅಂಶಗಳ ಪರಿಪೂರ್ಣ ಯಾದಿಯನ್ನು ಮಾಡಿದರೆ ಇಂದಿನ ಯಾವ ಇಬ್ಬರು ಕಾಂಗ್ರೆಸ್ಸಿಗರಾದರೂ ಯಾವದೊಂದು ಯಾದಿಯ ಪ್ರತಿಯೊಂದು ಅಂಶವನ್ನು ಒಪ್ಪಲಾರರು. ಮತ್ತು ಯಾವದೊಂದು ವಿಶಿಷ್ಟ ಅಂಶದ ಮೇಲೆ ಅಷ್ಟೇ ಜೋರು ಕೊಡಲಾರರೆಂಬುದು ಕಂಡು ಬರದಿರದು. ಬಹು ಜನರಿಗೆ ಒಪ್ಪಿತವಾದ ಅಂಶಗಳನ್ನಷ್ಟೆ ಅವರು ಒಪ್ಪಿದ್ದಾದರೆ ಅದು ಉಪೇಕ್ಷಣೀಯವಾದುದು. ಮಥಿತಾರ್ಥವೇನಂದರೆ ಹಲವಾರು ಉದಾರ ನೀತಿಗಳತ್ತ ಎಲ್ಲರ ಸಮಾನವಾದ ಒಲವು ಇರುವದು. (ಈ ಉದಾರ ನೀತಿಗಳನ್ನು ಗೊತ್ತುಪಡಿಸತಕ್ಕದ್ದು). ತನ್ನ ಧ್ಯೇಯವಾವುದೆಂಬದನ್ನು ಅದು ಸೂಚಿಸಬಲ್ಲದು ಆದರೆ ಅದನ್ನು ಪ್ರತ್ಯಕ್ಷ ಕಾರ್ಯರೂಪದಲ್ಲಿ ತರುವಾಗ ಪ್ರತಿಯೊಬ್ಬನನ್ನು ಸಮಾಧಾನ ಪಡಿಸುವದು ಕಠಿನವಾಯಿತು ಎಂದು ಅದು ಹೇಳಬಹುದು. ಅದುದರಿಂದ ಸುಧಾರಣೆ ಹೊಂದಿದ ಕಾಂಗ್ರೆಸ್ಸು ಯಾವದೊಂದು ವಿಶಿಷ್ಟ ತತ್ವಪ್ರಣಾಲಿಯನ್ನು ತತ್ವತಃ ಅನುಸರಿಸುವದನ್ನು ಬಿಟ್ಟುಗೊಡತಕ್ಕದ್ದು. ಇದರಿಂದ ಕಾಂಗ್ರೆಸ್ಸು ಕೇವಲ ಅಸ್ಥಿರ ಧೋರಣೆಯನ್ನು ಅನುಸರಿಸುತ್ತಿದೆಂಬ ಅಪವಾದ ಹೊರಬೇಕಾದ ಪ್ರಸಂಗ ಬಂದರೂ ಪ್ರತಿಯೊಂದು ಸಮಸ್ಯೆಯನ್ನು ಬಿಚ್ಚುಮನಸ್ಸಿನಿಂದ ಮತ್ತು ಎದುರಿಸಬೇಕಾದ ಪರಿಸ್ಥಿತಿಯನ್ನು ಲಕ್ಷಿಸಿ ಕೂಲಂಕಷವಾಗಿ ವಿಚಾರಿಸಿ ಪರಿಸ್ಥಿತಿಗೆ ಯೋಗ್ಯವಾದ ಒಂದೇ ಒಂದು ಮಾರ್ಗವೆಂದು ಗೊತ್ತಾದ ಮಾರ್ಗವನ್ನೆ ಅನುಸರಿಸಲು ನಿರ್ಧರಿಸಲಾಗುವದು ಎಂಬುದಾಗಿ ಅದು ಹೇಳತಕ್ಕದ್ದು. ಈ ಉಪಾಯಗಳಿಗೆ ಅಷ್ಟೊಂದು ದೀರ್ಘಾವಧಿಯ ಧ್ಯೇಯಗಳೇ ಇಲ್ಲ ಎಂದು ಇದರ ಅರ್ಥವಲ್ಲ, ಆದರೆ ಆ ದೀರ್ಘಾವಧಿಯನ್ನು ಮುಟ್ಟುವ ಗತಿಯೂ ಯಾವದೊಂದು ವಿಶಿಷ್ಟ ತತ್ವ ಪ್ರಣಾಲಿಯ ಅನುಯಾಯಿಗಳನ್ನು ಸಮಾಧಾನ ಪಡಿಸುವಷ್ಟು ತೀವ್ರವಾಗಿರಲಿಕ್ಕಿಲ್ಲ. ಜನತೆಯ ಜೀವನ ಮತ್ತು ಶಾಂತಿಗೆ ಯಾವದೇ ಬಗೆಯ ಮಹತ್ವದ ಗೊಂದಲವನ್ನುಂಟುಮಾಡದೆ ಧೋರಣವನ್ನು ಕಾರ್ಯರೂಪದಲ್ಲಿ ತರಲು ಬೇರೆ ಯಾವ ಪಕ್ಷವೂ ತನ್ನಕ್ಕಿಂತ ಹೆಚ್ಚಿನದನ್ನು ಮಾಡಲಾರದೆಂಬುದನ್ನು ತೋರಿಸುವದರಿಂದ ಕಾಂಗ್ರೆಸ್ಸು ಸಮಾಧಾನ-ಪಡೆದುಕೊಳ್ಳತಕ್ಕದ್ದು.

ಎರಡನೆಯ ಬಗೆಯ ತತ್ವ ಪ್ರಣಾಲಿಯ ಸಂಬಂಧದಲ್ಲಿ ಹೇಳಬೇಕಾದರೆ ಕಾಂಗ್ರೆಸಿಗೆ ಯಾವುದೊಂದು ವಿಶಿಷ್ಟ ತತ್ವ ಪ್ರಣಾಲಿಯು ಬೇಕಿದ್ದರೆ ಜಾತೀಯತೆ, ಪ್ರಾಂತೀಯತೆ, ಸಾಂಸ್ಕೃತೀಯತೆ, ಜ್ಞಾತೀಯತೆ, ಸಂಧಿಸಾಧಕತೆ ಮೊದಲಾದವುಗಳಿಲ್ಲದ ತತ್ವಪ್ರಣಾಲಿ ಅದಾಗಿರುವದು. ನಿಶ್ಚಯವಾಗಿ ಅದು ಬೊಧಿಸತಕ್ಕ [illegible] ಧರ್ಮ, ಜನಾಂಗ, ಭಾಷೆ, ಪಂಥ, ಮೂಲಸ್ಥಾನ ಮೊದಲಾದವುಗಳನ್ನು ಲಕ್ಷಿಸದೇ ಪ್ರತಿಯೊಬ್ಬ ಹಿಂದೀಯನನ್ನು ಅಷ್ಟೇ ಗೌರವ ಭಾವದಿಂದ ನೋಡುವದು, ಪ್ರಾಮಾಣಿಕತೆ ಮತ್ತು ಮುಚ್ಚುಮರೆಯಿಲ್ಲದ ವರ್ತನ, ಆಡಳಿತದಲ್ಲಿಯ ಕೊಳೆಯನ್ನು ಹೋಗಲಾಡಿಸಿ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಸಂಸ್ಥೆಯನ್ನು ಪುನರ್ಘಟಿಸುವದು, ಸರ್ವಥಾ ನಿಷ್ಪಕ್ಷಪಾತತೆ ಇವು ಮತ್ತು ಇದೇ ಬಗೆಯ ಆದರ್ಶ ಸದ್ಗುಣಗಳೇ ಕಾಂಗ್ರೆಸ್ಸಿನ ಮಂತ್ರ ಇಲ್ಲವೆ ಏಕಮೇವ ಗುರಿ, ಆದರ್ಶ, ಮತ್ತು ಪದ್ಧತಿಯಾಗಿರತಕ್ಕದ್ದು. ಪ್ರಾಮಾಣಿಕವಾಗಿ ಇದು ಕಾರ್ಯಕಾರಿಯಾದುದಾದರೆ ಈ ಧ್ಯೇಯವನ್ನು ಮುಟ್ಟಲು ಪ್ರತಿಯೊಂದು ರೀತಿಯಿಂದ ಪ್ರಯತ್ನಿಸಿದ್ದಾದರೆ ಕಾಂಗ್ರೆಸ್ಸಿನಲ್ಲಿ ಕೆಲವೇ ಜನರು ಇದ್ದರೂ ಹಿಂದೆ ಇದ್ದಂತಹ ಲೋಕಪ್ರಿಯತೆ ಮತ್ತು ಉಪಯುಕ್ತತೆಯನ್ನು ಅದು ಉಳಿಸಿಕೊಳ್ಳಬಲ್ಲದು.

ಜನ ಸಾಮಾನ್ಯರು,-ಬಹಳಷ್ಟು ರಾಜಕೀಯ ಜಾಗ್ರತಿ ಅವರಲ್ಲಿ ಆಗಿದಂತೆ ತೋರಿದರೂ—ಯಾವದೊಂದು ವಿಶಿಷ್ಟ ವಾದದ ಏಕನಿಷ್ಠ ಅನುಯಾಯಿಗಳು ಅವರೆಂದಿಗೂ ಆಗಲಾರರು. ಅರ್ಧ ಸತ್ಯದಿಂದ ಕೂಡಿದ ಸಾಮಾನ್ಯ ಘೋಷಣೆಗಳು ಅಸ್ಪಷ್ಟವಾಗಿ ಅವರಿಗೆ ಬೋಧಿಸುವದಕ್ಕಿಂತ ಹೆಚ್ಚಿನ ವಿಚಾರವೇನು ಆ ತಂತ್ರದ ಬಗ್ಗೆ ಅವರಿಗೆ ಇರುವದು ಅಸಂಭವ. ಮುಸಲ್ಮಾನ ಜನಸಾಮಾನ್ಯರು ತಿಳಿಯದಲೆ ಪಾಕಿಸ್ತಾನದ ಮತ್ತು ಹಿಂದೀ ಮುಸಲ್ಮಾನರಿಗೆ ಪ್ರತ್ಯೇಕ ದೇಶಬೇಕೆಂಬ ಘೋಷಣೆಯಿಂದ ಹೇಗೆ ಮರಳುಹೋದರೆಂಬುದನ್ನೂ ಅದರಿಂದ ಮುಸಲ್ಮಾನರಿಗೂ ಉಳಿದ ಹಿಂದೀಯರಿಗೂ ಎಷ್ಟೊಂದು ಹಾನಿಯಾಯಿತೆಂಬುದನ್ನೂ ನಾವು ನೋಡಿದ್ದೇವೆ. ಈಗಲೂ ನಾವು ಆ ಕಾಳ್ಗಿಚ್ಚಿನಿಂದ ಪಾರಾಗಿರುವದಿಲ್ಲ. ಜನರಿಗೆ ಏನಾದರೂ ಸೇವೆಮಾಡುವದಿದ್ದರೆ ಇಂಥ ಘೋಷಣೆಗಳ ಪ್ರಯೋಜನದ ಬಗ್ಗೆ ಸಂಶಯ ತಾಳುವಂತೆ ಅವರನ್ನು ಮಾಡತಕ್ಕದ್ದು ಮತ್ತು ಕಾಂಗ್ರೆಸ್ಸು ತನ್ನ ಘೋಷಣವನ್ನೂ ಮುಂದೆ ಮಾಡಬಾರದು. ಇಷ್ಟೇ ಅಲ್ಲ ಇಂಥ ನಿರರ್ಥಕ ಘೋಷಣೆಗಳ ಬಗ್ಗೆ ಜನರು ನಂಬಿಗೆ ಇಡದಂತೆಯೂ ನೋಡಿಕೊಳ್ಳಬೇಕು.

ಈ ಪ್ರಕಾರ, ಕಾಂಗ್ರೆಸ್ಸು ಶಾಸನ ಸಭಾ ಕಾರ್ಯಜ್ಞರನ್ನೂ ಶಾಸನ ಸಭೆಯಿಂದ ಹೊರಗಿರುವ ಸಹಯೋಗಿ ಮತ್ತು ಕಾರ್ಯಕರ್ತರನ್ನೂ ಒಳಗೊಂಡ ಸಂಸ್ಥೆಯಾಗಬಹುದು. ಇವರೆಲ್ಲರೂ ಅಧಿಕಾರಸ್ಥಾನದಲ್ಲಿದ್ದು ಇಲ್ಲವೆ ಹೊರಗಿದ್ದು ಶಾಸನ ಸಭಾ ಕಾರ್ಯದಿಂದಲೂ ಇತರ ಹೊಣೆಗಾರ ಸಾರ್ವಜನಿಕ ಕರ್ತವ್ಯಗಳಿಂದಲೂ ರಾಷ್ಟ್ರದ ಸೇವೆಯನ್ನು ಪ್ರಾಮಾಣಿಕವಾಗಿಯೂ ಋಜುವಾಗಿಯೂ ಮಾಡಲು ಪಣತೊಟ್ಟವರಿರಬೇಕು. ಜನರಿಗೆ ಉದಾತ್ತ ಚರಿತ್ರದ ಅಂಗಗಳಾದ ಪ್ರಾಮಾಣಿಕತೆ, ನ್ಯಾಯವೇ ಮೊದಲಾದ ಗುಣಗಳ ಪ್ರಯೋಜನವನ್ನು ಒದಗಿಸುವುದೇ ಅವರ ಧ್ಯೇಯವಾಗಿರಬೇಕು. ಆಶ್ವಾಸನವೇ ಅವಶ್ಯವಿದ್ದಲ್ಲಿ ಮೇಲೆ ಹೇಳಿದ ತಾತ್ಪರ್ಯವನ್ನೊಳಗೊಂಡ ಆಶ್ವಾಸನವನ್ನು ಜನರಿಗೆ ಕೊಡಬಹುದು.

ಸ್ವಾಭಾವಿಕವಾಗಿ, ಅಂಥ ಕಾಂಗ್ರೆಸ್ಸಿನಲ್ಲಿ ಗೊತ್ತುಮಾಡಿದ ನಮೂನೆಯ ಮೇಲೆ ಸಹಿ ಹಾಕಿ ನಿಶ್ಚಿತ ವರ್ಗಣಿಯನ್ನು ಸಲ್ಲಿಸಿದಾಕ್ಷಣ ಸಿಕ್ಕಸಿಕ್ಕವರು ಸದಸ್ಯತ್ವಕ್ಕೆ ಅರ್ಹರಾಗಲಾರರು. ಅದೊಂದು ಮಿತಾಕಾರದ ಸಂಸ್ಥೆಯಾಗುವದು. ಉಚ್ಚ ಆದರ್ಶಗಳು, ಸಚ್ಚರಿತ್ರ, ಯೋಗ್ಯತೆ, ಪರಮಾವಧಿ ಜನಸೇವೆ ಇವೆಲ್ಲವುಗಳು ನಿಶ್ಚಿತವಾಗಿಯೂ ನಡೆಯಲನುಕೂಲವಾಗುವಂತೆ ಕಠೋರವಾದ ಸದಸ್ಯತ್ವ ನಿಯಮಗಳಿರಬೇಕು. ಅದರಲ್ಲಿ ಮೇಲಿನ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಬಹುದಾದ ಎಲ್ಲ ವರ್ಗದ ಕನಿಷ್ಠ ಪ್ರಾಥಮಿಕ ಶಿಕ್ಷಣ ಪಡೆದ ಜನರಿಗೂ ಪ್ರವೇಶ ದೊರೆಬಹುದಾದಷ್ಟು ಅದು ವಿಶಾಲವಾಗಿರಬೇಕು; ಸಂಗಹಲೇ ವಿತ್ತ, ವಿದ್ವತ್ತೆ, ಅಥವಾ ಸಂಘ ಇವುಗಳ ವರ್ಚಸ್ಸಿಗೊಳಗಾಗಿ ಯಾರಿಗೂ ಪ್ರವೇಶ ಕೊಡಲೊಪ್ಪದಷ್ಟು ನಿಷ್ಠುರವೂ ಆಗಿರಬೇಕು.

ಅದು ಅಧಿಕಾರಾರೂಢವಾಗಿರಲಿ, ಹೊರಗಿರಲಿ, ಜೀವನದ ಪ್ರತಿಯೊಂದು ಅಂಗಕ್ಕೂ ಸಂಬಂಧಿಸಿದ ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ, ಪೌರ ಮತ್ತು ಗ್ರಾಮೀಣ ವಿಚಾರಗಳಲ್ಲಿ ಅಭ್ಯಾಸ, ವಿಚಾರಣೆ, ಸಂಶೋಧನೆಗಳನ್ನು ನಡೆಸುವುದು. ಅದು ಯಾವುದೊಂದು ವಿಶಿಷ್ಟ ವಿಚಾರಧಾರೆಯೊಡನೆ ತಾದಾತ್ಮ್ಯ ಹೊಂದುವದೂ ಇಲ್ಲ, ಅಂಥ ವಿಚಾರ

ನಾವು ಮರೆತೇವೆಂದು

ಕಾಡುಕತನದ ಕೆಡುಕು

(೨) ಮುಸ್ಲಿಮ ಮತ್ತು ಇತ್ತೀಚಿನ [illegible] ಅತ್ಯಾಚಾರಗಳ ಕೇಳಬೇಕು. [illegible] ಅದು ಹಿಂದೂ ಧರ್ಮವನ್ನು [illegible] ನೀತಿ ನ್ಯಾಯಭಾವನೆಗಳನ್ನು [illegible] ತ್ತದೆ.

(೩) ಮೂಢಕ ಕೃತ್ಯ ಮತ್ತು ಮುಸ್ಲಿಮ ವಿಭಾಗದ ಎರಡು ಅಂಗುಥಗಳು.

(೪) ಹೊಟ್ಟೆಗಿಲ್ಲದವರು ಹಣ್ಣು ಕದ್ದು ಕಳವು ಮಾಡಿದ ಅಪರಾಧಕ್ಕೆ ಶಿಕ್ಷೆಗೆ ಗುರಿಯಾಗುವ [illegible] ಹಿಂದುಸ್ತಾನದಲ್ಲಿ ಮುಸ್ಲಿಮರದಷ್ಟು ಹೆಚ್ಚಿನ ಅಪರಾಧವೆಂದು ನನಗೆ ತೋರುತ್ತದೆ. ಸೌಮ್ಯವಾದ ಮತ್ತು ಪ್ರೇಮ ಪ್ರತಿರೋಧವಾದ ಶಾಸನವಿಲ್ಲವೆಂದೇ [illegible] ಧಿಗಳ ಶಿಕ್ಷೆಯನ್ನು ನಾನು ಮನಸ್ಸಿನಿಂದ ಒಪ್ಪಿಕೊಳ್ಳುತ್ತೇನೆ. ಇದನ್ನು ಒಪ್ಪುವದರಿಂದ ಮೋಹ ದೋಷದಿಂದ ಮದ್ಯವನ್ನು ಕುಡಿಯುವವರನ್ನು ಮತ್ತೆ ಮತ್ತೆ ಎಚ್ಚರಿಸಿದರೂ ಕುಡಿತದಲ್ಲಿ ತೊಡಗಿದವರನ್ನು ತಾತ್ಕಾಲಿಕ ಶಿಕ್ಷೆಗೆ ಗುರಿಪಡಿಸಲೇಬೇಕೆಂಬುದನ್ನು ನಾನು ಎತ್ತಿ ಹಿಡಿಯಲೇಬೇಕಾಗುವದು. ಉರಿಯುವ ಬೆಂಕಿಯಲ್ಲಿ ಅಥವಾ ಆಳವಾದ ನೀರಿನಲ್ಲಿ ಧುಮುಕಹೋಗುವ ಸಣ್ಣ ಮಕ್ಕಳನ್ನು ಬಲಾತ್ಕಾರದಿಂದ ತಡೆಯಲು ನಾನು ಹಿಂದೆಮುಂದೆ ನೋಡುವದಿಲ್ಲ. ಮದ್ಯದತ್ತ ಧಾವಿಸುವದೆಂದರೆ ಉರಿವ ಬೆಂಕಿ ಅಥವಾ ತುಂಬಿ ಹರಿವ ಪ್ರವಾಹದತ್ತ ಧಾವಿಸುವದಕ್ಕಿಂತ ಘಾತಕವಾದದ್ದು. ಉರಿಯೂ ನೀರೂ ಶರೀರವನ್ನಷ್ಟು ನಾಶ ಮಾಡಿದರೆ ಮದ್ಯವು ಶರೀರವನ್ನೂ ಆತ್ಮವನ್ನೂ ಕೂಡಿಯೇ ನಾಶಗೊಳಿಸುವದು.

೫) ಬಲಾತ್ಕಾರದಿಂದ ಹಿಂದುಸ್ತಾನವನ್ನು ಸಯಮಯುತ ಮತ್ತು ಶೀಲಸಂಪನ್ನ ನಾಡನ್ನಾಗಿ ಮಾಡುವದು ಯುಕ್ತವಲ್ಲವೆಂದೂ ಕುಡಿಯಬೇಕೆನ್ನುವವರಿಗೆ ಸಕಲಸೌಕರ್ಯ ಕೊಡಬೇಕೆಂದೂ ಹೇಳುವವರ ಉದಾರ ಯುಕ್ತಿವಾದಕ್ಕೆ ಮೋಸಹೋಗಬೇಡಿರಿ. ಪ್ರಜಾಜನರ ದುರ್ವ್ಯಸನಗಳನ್ನು ಎಲ್ಲಿಯಾದರೂ ಸರಕಾರವು ಪುರಸ್ಕರಿಸಿ ಅದಕ್ಕೆ ಉತ್ತೇಜನ ಕೊಡಬಲ್ಲುದೇ? ಭ್ರಷ್ಟಾಚಾರದ ಮನೆಗಳಿಗೆ ಶಿಷ್ಟತೆಯ ಮುದ್ರೆಯೊತ್ತಬಂದೀತೆ? ಕಳ್ಳರಿಗೆ ಕದಿಯಲು ನಾವು ಸಕಲಸೌಕರ್ಯಗಳನ್ನೇನಾದರೂ ಒದಗಿಸುತ್ತೇವೆಯೆ? ಚೌರ್ಯ ವ್ಯಭಿಚಾರಿಗಳಿಗಿಂತ ಕುಡಿತವು ಹೀನವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ಅವೆರಡಕ್ಕೂ ಕುಡಿತವೇ ಗುರುಸ್ಥಾನದಲ್ಲಿಲ್ಲವೆ?

(೬) ನಮ್ಮ ದೇಶದ ಸಮಾಜಕ್ಕೆ ಮದ್ಯಸೇವನವೇನು ಆಗತ್ಯವಾದುದಲ್ಲ. ಕುಡಿತದಿಂದ ವಿನಾಶವೇ ಕಟ್ಟಿಟ್ಟದ್ದು. ಶ್ರೀಕೃಷ್ಣನ ಅನೇಕವಾದ ಯದುಕುಲವು ಕುಡಿತಕ್ಕೆ ಮೊಟ್ಟಮೊದಲು ನಿರ್ನಾಮವಾಯ್ತು. ಈ ಭೀಕರವಾದ ಚಟವೇ ರೋಮ ದೇಶದ ಪತನಕ್ಕೆ ಒಂದು ಕಾರಣವಾಯ್ತು. ಆದ್ದರಿಂದ ನೀವು ಶಿಷ್ಟರಾಗಿ ಇರಲು ಕಲಿತರೆ ಈ ಕೆಡಕನ್ನು ನೀವು ಸಕಾಲದಲ್ಲಿ ತೊಲಗಿಸಬಲ್ಲಿರಿ.

(೭) ಪಾನನಿರೋಧ ಮತ್ತು ಕುಡಿತ ಇವುಗಳ ನಡುವೆ ವಿಶ್ರಾಂತಿ ಧಾಮವೇ ಇಲ್ಲ. ಶ್ರೀಮಂತರು ನಾವು ಈ ಬಗ್ಗೆ ಏಗ್ರ [illegible] ಗಳೆಂದೂ ಮಿತವರಿಕವರೆಂದೂ ನಟಿಸಬಹುದು. ಆದರೆ ದುಡಿಮೆಗಾರರಿಗೆ ಮಿತಿಯವಾಗಲೀ ಏಗ್ರಹವಾಗಲೀ ಸಾಧ್ಯವೇ ಇಲ್ಲ.

(೮) ಅಖಿಲ ಭಾರತಕ್ಕೆ ಒಂದೇ ಒಂದು ತಾಸಿನಮಟ್ಟಿಗೆ ನನ್ನನ್ನು ಸರ್ವಾಧಿಕಾರಿಯಾಗಿ ನೇಮಿಸಿದ್ದಾದರೆ ನಾನು ಮೊಟ್ಟಮೊದಲು ಮಾಡುವ ಕೆಲಸವೆಂದರೆ, ಪರಿಹಾರ ಕೊಡದೆ ಎಲ್ಲ ಮದ್ಯದ ಅಂಗಡಿಗಳನ್ನು ಮುಚ್ಚಿಸುವದು, ಗುಜರಾತದಲ್ಲಿ ನನಗೆ ಗೊತ್ತಿದ್ದ ತಾಳೆ ಗಿಡಗಳನ್ನೆಲ್ಲ ನಾಶಗೊಳಿಸುವದು, ಮತ್ತು ಗಿರಣಿಯ ಒಡೆಯರಿಗೆ ಒತ್ತಾಯಪಡಿಸಿ ತಮ್ಮ ಕೂಲಿಕಾರರಿಗೆ ಮನುಷ್ಯಯೋಗ್ಯ ಪರಿಸ್ಥಿತಿಯನ್ನುಂಟು ಮಾಡಿಕೊಡುವದು ಹಾಗೂ ಕೂಲಿಕಾರರಿಗಾಗಿ ಉಪಹಾರ ಗೃಹಗಳನ್ನೂ ವಿಶ್ರಾಂತಿ ಗೃಹಗಳನ್ನೂ ತೆರೆದು ಅವರಿಗೆ ಅಲ್ಲಿ ಆರೋಗ್ಯಕರ ಪೇಯಗಳನ್ನೂ ಆಹ್ಲಾದಕರ ಮನರಂಜನೆಗಳನ್ನೂ ಒದಗಿಸುವಂತೆ ಏರ್ಪಾಡು ಮಾಡಿಸುವದು.

—ಗಾಂಧೀಜಿ

ಕಾರಿಯುಳ್ಳವರ [illegible] ಮುದಲೂ ಇಲ್ಲ.
ಅಂಥ ಕಾಂಗ್ರೆಸ್ಸು
[illegible]
ಕ್ರಿಸ್ತದೆ

ರಚನಾತ್ಮಕ ಕಾರ್ಯಕರ್ತರ ಸಂಘಟನೆಗಳು

ಈ ಕೆಳಗೆ ಕೊಡಲಾದ ಕೈಲಾಸನಾಥ ಕಟಜುಗಳ ರಚನಾತ್ಮಕ ಕಾರ್ಯಕರ್ತರ ಕರ್ತವ್ಯಗಳ ಮೇಲಿನ ಅಭಿಪ್ರಾಯಗಳನ್ನು ಓದುಗನ ಜೊತೆಗೆ ಸ್ವೀಕರಿಸಲು ನನಗೆ ಬಹಳ ಸಂತೋಷವಾಗುತ್ತದೆ. ಅವನ್ನು ಅವರ ಕಾಗದವೊಂದರಿಂದ ಆಯ್ದು ತೆಗೆಯಲಾಗಿದೆ.

“ತಮ್ಮ ಕಾರ್ಯಗಳ ನಿರ್ವಹಣಕ್ಕಾಗಿ ತಾವೆಂದೂ ಸರಕಾರದ ಸಹಾಯವನ್ನು ನಿರೀಕ್ಷಿಸುವುದಿಲ್ಲ, ಬೇಡುವುದಿಲ್ಲ- ಎಂದೂ ಈ ಸಾಹಸದಲ್ಲಿ ಆಸಕ್ತಿಯುಳ್ಳವರಿಂದ ಸಂಗ್ರಹಿಸಲ್ಪಡುವ ನಿಧಿಯ ಮೇಲೆ, ತಮ್ಮ ಸ್ವಂತ ಹಣದ ಮೇಲೆ ಮತ್ತು ಪ್ರಯತ್ನದ ಮೇಲೆಯೇ ತಾವು ಅವಲಂಬಿಸಬೇಕು. ಎಂದೂ ರಚನಾತ್ಮಕ ಕಾರ್ಯಕರ್ತರು ಗಂಭೀರ ನಿರ್ಧಾರಕ್ಕೆ ಬರಬೇಕು. ೧ ರೂಪಾಯಿ ಅಥವಾ ಎಂಟು ಆಣೆ ಕೊಡುವ ಒಕ್ಕಲಿಗನಿಂದ ಪ್ರಾರಂಭಿಸುವ ವಿಶಾಲ ಕ್ಷೇತ್ರದಲ್ಲಿ ಹಣಕಾಸಿನ ಸಹಾಯ ಮಾಡುವವರಿದ್ದಷ್ಟು ಕೆಲಸಕ್ಕೆ ಜಯ ಹೆಚ್ಚು ಹೆಚ್ಚಾಗಿ ಲಭಿಸುವುದು. ಈ ಅಂಶಕ್ಕೆ ನಾನು ಬಹಳ ಮಹತ್ವ ಕೊಡುತ್ತೇನೆ. ಸ್ವಾಭಾವಿಕವಾಗಿ ಕಾರ್ಯಾಲಯ ಮತ್ತು ಕಾರ್ಯಾಲಯದ ಕೆಲಸಗಾರರು ರಾಜಕೀಯ ಇಲ್ಲವೆ ಇತರ ಎಲ್ಲ ಅಧಿಕಾರದ ಆ ಕರಗಳಾಗುವುದೇ ಹೀಗೆ ನಾನು ಹೇಳಲು ಕಾರಣ. ಕಾರ್ಯಾಲಯವೆಂದರೆ ಪೋಷಣೆ, ಪೋಷಣೆಯೆಂದರೆ ಧನಸಹಾಯ; ಇದರಿಂದ ನಮ್ಮ ಕೆಲಸಗಾರರು ಕೇಂದ್ರಗಳನ್ನು ಸ್ಥಾಪಿಸಿ ಮಂತ್ರಿಗಳ ಬಳಿಗೆ ಸಹಾಯಧನ ಕೇಳಲು ಓಡುವ ದೊಡ್ಡ ಗಂಡಾಂತರ ಬರುತ್ತದೆ. ಹಾಗೆ ಮಾಡಿದಾಕ್ಷಣ ಅವ್ಯೊಂದು ಕಾರ್ಯವು ಜಯಪ್ರದವಾಗಿ ನಡೆಯಲಾರದೆಂದು ನಾನು ಮನಸ್ಸಿನಲ್ಲೇ ಗುರುತು ಮಾಡಿಕೊಂಡು ಬಿಡುತ್ತೇನೆ. ಮಾನ್ಯ ಸ್ನೇಹಿತರು ಮತ್ತು ಇತರ ಸಹಕಾರ್ಯಕರ್ತರು ಸರಕಾರದಿಂದ ಹಣಕಾಸಿನ ಸಹಾಯ ಪಡೆಯುವ ಪ್ರಯತ್ನದಲ್ಲಿ ಕಾಲಹರಣ ಮಾಡಿ ಉದಾಸೀನದಿಂದ ಇಲ್ಲವೆ- ಅಲ್ಪವಾಗಿ ಹಾಗೆ ಸರಕಾರ ಸಹಾಯ ನೀಡಿದರೆ ಅಥವಾ ಅವತ್ಯಕ ಅಧಿಕಾರೀ ನಿಯಂತ್ರಣವನ್ನು ಹೇರಿದರೆ ಬೇಸರ ಪಡುವುದನ್ನು ನಾನು ಮೇಲಿಂದ ಮೇಲೆ ನೋಡಿದ್ದೇನೆ. ಇದಿಷ್ಟೇ ಅಲ್ಲ; ಸರಕಾರೀ ಸಹಾಯದ ಮೇಲೆ ಅವಲಂಬಿಸಿದ ಇಲ್ಲವೆ ಅದು ಸಿಕ್ಕ ಕ್ಷಣಾರ್ಧದಲ್ಲಿ ಒಂದು ವಿಶಿಷ್ಟ ಕಾರ್ಯಾರಂಭವು ತನ್ನ ನೈತಿಕ ಬೆಲೆಯನ್ನೂ ಅದಕ್ಕಿರಬೇಕಾದ ನೈತಿಕ ಪ್ರಭಾವವನ್ನೂ ಬಹಳ ಮಟ್ಟಿಗೆ ಕಳೆದುಕೊಳ್ಳುತ್ತದೆ. ಸರಕಾರದಿಂದ ಹಣಕಾಸಿನ ಸಹಾಯ ಪಡೆಯುವುದಕ್ಕೆ ನಾನು ವಿರೋಧಿಯಲ್ಲ; ಆದರೆ ಅಂಥ ಒಂದು ಕಾರ್ಯಕ್ಕೆ ಅದಷ್ಟು ಹೆಚ್ಚು ಸರಕಾರೇತರ ಬೆಂಬಲವಿರಬೇಕೆಂದು ನನ್ನ ದೃಢಾಭಿಪ್ರಾಯ. ಆ ಬೆಂಬಲವು ನಮ್ಮ ಒಕ್ಕಲಿಗರ ಕಡೆಯಿಂದ ಬಂದರೆ ಮತ್ತಷ್ಟು ಉತ್ತಮ. ಸರಕಾರೀ ಸಹಾಯವು ಅಪ್ರಾರ್ಥಿತವಾಗಿ ಅಯಾಚಿತವಾಗಿ ಬರಬೇಕು. ನ್ಯಾಯವಾಗಿ ನೋಡಿದರೆ, ಲಕ್ನೋ ಅಥವಾ ನೈನಿತಾಲ್ದಿನಲ್ಲಿರುವ ಸೆಕ್ರೆಟೇರಿಯಟ್ ಇಲ್ಲವೆ ಮಂತ್ರಿಯ ಮನೆ ಅಥವಾ ಕಾರ್ಯಾಲಯಕ್ಕೆ ಸಹಾಯ ಕೊಡಿರೆಂದು ಸಂಘಟಕರು ನುಗ್ಗುವುದು ತರವಲ್ಲ; ಮಂತ್ರಿಯೇ ಸ್ವತಃ ಬಂದು ಸಹಾಯಧನವನ್ನು ತೆಗೆದುಕೊಳ್ಳಿರೆಂದು ಸಂಘಟಕರ ಹತ್ತಿರ ಬೇಡಿಕೊಳ್ಳಬೇಕು. ಅದು ಎಲ್ಲಕ್ಕಿಂತ ಹೆಚ್ಚಿನ ತಾರತಮ್ಯದ ಸಂಗತಿ. ಸರಕಾರವು ರಚನಾತ್ಮಕ ಕಾರ್ಯಕ್ರಮದಲ್ಲಿ ಗಂಭೀರವಾದ ಆಸಕ್ತಿಯುಳ್ಳದ್ದಾದರೆ ಅವರಿಗೆ ಉತ್ತಮವೆಂದು ತೋರಿಬಂದಂತೆ ಅದನ್ನು ಏಳಿಗೆಗೆ ತರಬಹುದು. ಅದರ ಬಗ್ಗೆ ನನ್ನ ಸ್ವಂತ ಅಭಿಪ್ರಾಯ ಬೇರೆಯೇ ಇದೆ. ಅಧಿಕಾರಿ ಸಂಘಟನೆಯ ಮೂಲಕ ಗಾಂಧಿಯವರು, ಹೇಗೋ ಕಾಣೆ, ರಚನಾತ್ಮಕ ಕಾರ್ಯಕ್ರಮವು ಅವ್ಯವಹಾರ್ಯವಾಗುವಂತೆ ಮಾಡಿಬಿಟ್ಟಿದ್ದಾರೆ. ಅದು ಕೈಗಾರಿಕೆಯ ಏಳಿಗೆಯ ಕಾರ್ಯಕ್ರಮ ಮಾತ್ರವಲ್ಲ, ನಿಜವಾಗಿಯೂ ಅದು ಸಂಬಂಧಿಸಿದ ವ್ಯಕ್ತಿ ಅಥವಾ ಗುಂಪು ನಿರ್ಜೀವವಾದ ಅಧಿಕಾರಿ ಮಂಡಲದ ಅಂಕುಶಕ್ಕೆ ತುತ್ತಾಗಿ ಹಾಡದೆ, ಸೋದ್ಧಾರಕ್ಕಾಗಿ ಸ್ವಯಂ ಕಾರ್ಯಪ್ರವೃತ್ತವಾದಾಗ ಮಾತ್ರ ಏಳಿಗೆಯುಂಟಾಗ

ಒ. ಆದರೆ ಸಾರ್ವಜನಿಕ ನಿಧಿ ನ್ಯಾಯ್ಯ ಬೇಕಾಯಾಗುವುದನ್ನು ನೋಡಿಕೊಳ್ಳು ಅಸ್ತಿತ್ವಕ್ಕೇ [illegible] ಕರ್ತವ್ಯವಿರುವುದರಿಂದ ನಡೆಸಿದ್ದರಿಂದ [illegible] ಕ್ರಮವನ್ನು ಬೀಳಬೇಕಾಯಿತೆಂ

ಆದು ಕೈಕೊಳ್ಳಬಹುದು. ಆದರೆ ಹೇಗೋ ಏನೋ, ಈ ವಿಶೇಷ ತರದೇತಿನ ಕೇಂದ್ರಗಳೆಲ್ಲ ಅರ್ಧಮರ್ಧ ಕೆಲಸ ಮಾಡುವವಲ್ಲದೆ ಉದ್ದೇಶವನ್ನು ಸಂಪೂರ್ಣವಾಗಿ ಈಡೇರಿಸುವುದಿಲ್ಲವೆಂದು ನನಗನಿಸಿ ಹೋಗಿದೆ. ನೂರಾರು ಜನ ನಿಃಸ್ವಾರ್ಥರೂ ನಿಃಸಂದಿಗ್ಧವೂ ನಿಃಸಂದೇಹ್ಯವೂ ಆದ ಪ್ರಾಮಾಣಿಕತೆಯುಳ್ಳವರೂ ಆದ ಕಾರ್ಯಕರ್ತರು ಒಟ್ಟಿಗೆ ಸೇರಿ ಹಳ್ಳಿ ಹಳ್ಳಿಗಳಲ್ಲಿ ಹೊಕ್ಕು ಈ ಕೆಲಸವನ್ನು ಮಾಡಬೇಕು ಮತ್ತು ಸರಕಾರವು ಆ ಕಾರ್ಯಕ್ಕೆ ಪ್ರೋತ್ಸಾಹ ರೂಪವಾಗಿ ಒಮ್ಮೆಲೇ ಇಡಿಗಂಟಾಗಿ ಹಣವನ್ನು ಕೊಡಬೇಕು— ಆ ಸಹಾಯ ಧನವಾದರೂ ಅವರ ಉದ್ದೇಶ ಸಿದ್ಧಿಗೆ ಅಗತ್ಯವಾದ ನಿಧಿಯ ಬಹಳ ಅಲ್ಪವಾದ ಅಂಶವಾಗಿರಬೇಕು.

“ರಚನಾತ್ಮಕ ಕಾರ್ಯಸಾಧನೆಯ ಈ ಕ್ಷೇತ್ರದಲ್ಲಿ ವಿಶೇಷತಃ ವೈಯಕ್ತಿಕ ನಿದರ್ಶನವು ದಿನ ಹೋದ ಹಾಗೆ ನನಗೆ ಬಹಳ ಮುಖ್ಯವೆನಿಸ ಹತ್ತಿದೆ. ತಮ್ಮ ಅದ್ಭುತ ವ್ಯಕ್ತಿತ್ವವೊಂದರಿಂದ ಮಾತ್ರವಲ್ಲದೆ ತಪ್ಪದೆ ತಾವು ನಿತ್ಯವೂ ನೂಲು ತೆಗೆದುದರಿಂದ ಗಾಂಧಿಯವರು ತಕಲಿಯ ಸಂದೇಶವನ್ನು ಭಾರತದ ಪ್ರತಿಯೊಂದು ಹಳ್ಳಿಗೂ ಮುಟ್ಟಿಸಲು ಶಕ್ತರಾದರೆಂದು ನನ್ನ ವಿಚಾರ. ತಕಲಿಯ ಪರಿಣಾಮಿತ್ವದಲ್ಲಿ ಈಗ ನಿಜವಾದ ಶ್ರದ್ಧೆ ಹೆಚ್ಚಾಗಿ ಇಲ್ಲವೆಂಬುದನ್ನು ಬಹಳ ವಿಷಾದದಿಂದ ನಾನು ನೋಡುತ್ತಿದ್ದೇನೆ. ಅಂಥ ಶ್ರದ್ಧೆಯಿದ್ದಿದ್ದರೆ, ವ್ಯವಹಾರದಲ್ಲಿ ಅದು ಕಾಣ ಬರುತ್ತಿತ್ತು. ಭಾರತದ ಕೇಂದ್ರ ಮತ್ತು ಪ್ರಾಂತ ಸರಕಾರಗಳ ಮಂತ್ರಿಗಳಲ್ಲಿ ಎಷ್ಟು ಜನರು ಪ್ರತಿನಿತ್ಯ ತಕಲಿ ತಿರುಗಿಸುವರೋ ನನಗಂತೂ ತಿಳಿಯದು. ಅವರ ಹೆಗಲ ಮೇಲಿನ ಹೊಣೆಯ ಅಸಾಧ್ಯ ಹೊರೆಯನ್ನು ನಾನು ಬಲ್ಲೆ; ಆದರೆ ನಮ್ಮ ದೊಡ್ಡ ಮನುಷ್ಯರೂ ಮಂತ್ರಿಗಳೂ ತಕಲಿಯ ಸಂದೇಶವನ್ನು ಹಳ್ಳಿಹಳ್ಳಿಗೂ ಮುಟ್ಟಿಸುವ ನಿಮಿತ್ತವಾಗಿ ಸ್ವತಃ ನೂಲು ತೆಗೆದು ಮೇಲ್ಪಂಕ್ತಿ ಹಾಕಿಕೊಡಬೇಕೆಂದು ನನ್ನ ಸಲಹೆ. ದುರದೃಷ್ಟ ವಶದಿಂದ ಈ ಕಾಲದಲ್ಲಿ ಬರಿಯ ಬಾಯಿಮಾತಿನ ಬೋಧನೆ ಬಹಳ ಕೆಲಸ ಮಾಡಿಕೊಡುವುದಿಲ್ಲ. ಇತರರಿಗೆ ಮಾಡೆಂಬ ಕೆಲಸವನ್ನು ನಾವು ಮಾಡಬೇಕು, ಶರೀರ ಶ್ರಮವಹಿಸಬೇಕು ಎಂದು ಗಾಂಧಿಯವರು ಒತ್ತಿ ಒತ್ತಿ ಹೇಳಿದ್ದಾರೆ. ನನ್ನ ಟೀಕೆಗಳು ಮಂತ್ರಿಗಳೇ ಮೊದಲಾದ ಉಚ್ಚ ಕಾರ್ಯದಲ್ಲಿ ನಿಯುಕ್ತರಾದವರಿಗೆ ಮಾತ್ರ ಅನ್ವಯಿಸುವುವೆಂದು ತಿಳಿಯಕೂಡದು; ಅವು ಅದೇ ಮೇರೆಗೆ ನಮ್ಮ ಮುಖಂಡರಿಗೂ— ಅವರು ಅಧಿಕಾರ ಸ್ಥಾನದಲ್ಲಿರಲಿ, ಇರದಿರಲಿ— ಅನ್ವಯಿಸುತ್ತವೆ. ರಚನಾತ್ಮಕ ಕಾರ್ಯಕ್ರಮದಲ್ಲಿ ನಂಬಿಗೆಯಿದ್ದದ್ದೇ ಆದರೆ ಪ್ರತಿಯೊಬ್ಬ ಕಾಂಗ್ರೆಸ್ಸಿಗನಿಗೂ— ಅವನು ಮುಖಂಡನಿರಲಿ, ಅನುಯಾಯಿ ಇರಲಿ— ತನ್ನ ಸ್ವಂತ ಉದಾಹರಣೆಯನ್ನು ಈ ವಿಷಯದಲ್ಲಿ ಜನತೆಯ ಮುಂದಿಡಬೇಕು. ಅವನು ನಿತ್ಯವೂ ನೂಲಬೇಕು; ಅದು ಎಲ್ಲರಿಗೂ ತಿಳಿಯಬೇಕು. ಅವನು ಅವನು ಪ್ರಾರ್ಥನಾ ಸಭೆಯಲ್ಲಿ ಪ್ರತಿ ನಿತ್ಯ ಹಾಗೆ ಮಾಡಿದರೆ ಮತ್ತಷ್ಟು ಉತ್ತಮ. ಅವನಿಗೆ ಮನೆ ಕೈಗಾರಿಕೆಗೆ ಪ್ರೋತ್ಸಾಹ ಕೊಡಬೇಕೆಂದಿದ್ದರೆ ಬದುಕಿರುವ ವರೆಗೆ ಗಾಂಧಿಯವರು ಮಾಡಿದಂತೆ ಗ್ರಾಮಗಳಲ್ಲಿ ತಯಾರಾದ ಮನೆ ಕೈಗಾರಿಕೆಯ ಸಾಮಾನುಗಳನ್ನೇ ಮನೆಯಲ್ಲಿ ಬಳಸುವ ಉದಾಹರಣೆಯನ್ನು ಸ್ವತಃ ಹಾಕಿಕೊಡಬೇಕು. ರಚನಾತ್ಮಕ ಕಾರ್ಯಕ್ರಮವು ಆರ್ಥಿಕ ಕಾರ್ಯಕ್ರಮವಷ್ಟೇ ಅಲ್ಲ; ವ್ಯಕ್ತಿಯ ಉದ್ಧಾರಕ್ಕೆ ವಿವಿಧ ಮಾರ್ಗಗಳಿಂದ ನೆರವಾಗಬಲ್ಲ ವ್ಯಾಪಕತೆಯುಳ್ಳ ಕಾರ್ಯಕ್ರಮವದು. ಹಾಗೆ ಹೇಳುವುದಾದರೆ, ಆರ್ಥಿಕ ಅಭಿವೃದ್ಧಿಯೆಂಬುದು ಅದರಿಂದ ಸಿಗುವ ಕೇವಲ ಗೌಣ ಲಾಭವಷ್ಟೆ. ಆರ್ಥಿಕ ಮುಖದಿಂದ ನೈತಿಕ ಮುಖವನ್ನು ಬಿಂಗಡಿಸಿ ಕೇವಲ ಆರ್ಥಿಕ ಮುಖದ ಮೇಲೆಯೇ ಹೆಚ್ಚು ಕಣ್ಣಿಟ್ಟ ಮರುಗಳಿಗೆಯಲ್ಲಿ ಅನೇಕಾನೇಕ ಧ್ಯೇಯಗಳು ಜನರ ತಲೆ ಹೊಕ್ಕು ಗಲಿಬಿಲಿ ಮಾಡುತ್ತಿರುವ ಈ ಕಾಲದಲ್ಲಿ ರಚನಾತ್ಮಕ ಕಾರ್ಯಗತಿಗೆ ಜಯ ಸಿಗಲಾರದೆಂದೇ ತೋರುತ್ತದೆ.

“ಹಳೆಯ ಅರ್ಥದ ಪ್ರಕಾರ ಗಾಂಧಿಯವರು ಕಾಂಗ್ರೆಸ್ಸು ಕರಗಿಹೋಗಬೇಕೆಂದು ಬಯಸಿದ್ದರು. ರಾಜಕಾರಣವನ್ನು ತೆಗೆದುಕೊಂಡರೆ; ಕಾಂಗ್ರೆಸ್ಸು ಇಡೀ ಜನತೆಯನ್ನು ವ್ಯಾಪಿಸಿಕ್ತೆಂದು ಅವರು ಎಣಿಸಿದ್ದರು. ರಾಜಕಾರಣವನ್ನು ಸಂಪೂರ್ಣವಾಗಿ ರಾಜಕಾರಣಿಗಳಿಗೆ, ಪಾರ್ಲಿಮೆಂಟರಿ ಪಕ್ಷಗಳಿಗೆ ಮತ್ತು ಮಂತ್ರಿಮಂಡಲಗಳಿಗೇ ಬಿಟ್ಟುಬಿಡಬೇಕೆಂದು ಅವರು ಬಯಸಿದ್ದರೆಂದು ನನ್ನ ಕಲ್ಪನೆ. ರಚನಾತ್ಮಕ ಕಾರ್ಯಕ್ರಮವನ್ನು ಈ ಕ್ಷೇತ್ರದ ಒಂದು ಯೋಧರ ಗುಂಪಿಗೆ ಅವರು ಬಿಟ್ಟುಕೊಟ್ಟಿರುವರೆಂದು ನನ್ನ ಮತ. ಆದರೆ ರಾಜಕೀಯ ಅಧಿಕಾರ ಆಕರ್ಷಿಸುತ್ತದೆ. ಭಾರತದಂಥ ಆಧಾರಕ್ಕೆಂಟಿಕೊಳ್ಳುವ, ಅಧಿಕಾರಶಾಹಿಗೆ ತುತ್ತಾದ ರಾಜ್ಯದಲ್ಲಿ ಅದು ಇನ್ನೂ ಹೆಚ್ಚು ಆಕರ್ಷಿಸುತ್ತದೆ. ರಾಜಕೀಯ ಅಧಿಕಾರವನ್ನು ಪಡೆದ ಮನುಷ್ಯನ ಸುತ್ತ ಏನೋ ಒಂದು ತರದ ಮಿರುಗು ಇಲ್ಲವೆ ಕಾಂತಿವೃತ್ತವಿರುವಂತೆ ಕಾಣುವುದು ತಮ್ಮ ನಿಃಸ್ವಾರ್ಥ ಕಾರ್ಯಕರ್ತರನ್ನು ಕಲ್ಪಿಸುವಾಗ ತಮ್ಮ ಜೀವನದ ತಪಸ್ವಿಭಾವದಿಂದ, ಗುಣದ ನೈತಿಕ ದಾರ್ಢ್ಯದಿಂದ ಅತ್ಯಂತ ಹೆಚ್ಚಿನ ನಿಃಸ್ವಾರ್ಥ ಕಾರ್ಯಮಗ್ನತೆ ಮತ್ತು ರಾಜಕೀಯ ಅಧಿಕಾರವನ್ನು ಹೊಂದಿ ಅದನ್ನು ಬಳಸುವ ಜನರ ಬೆಂಬಲ ಇಲ್ಲವೆ ಸಂಬಂಧದೊಡನೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳದಿರುವಿಕೆ ಇವುಗಳಿಂದ ಇಂದಿನ ಸಮಾಜದಲ್ಲಿ ಅವರು ಪ್ರಭಾವಿಗಳಾಗಬೇಕೆಂದು ಗಾಂಧಿಯವರ ಎಣಿಸಿದ್ದಂತೆ ತೋರುತ್ತದೆ. ತಲ್ಲೀನರಾದ ಕೆಲಸಗಾರರು ಮಾತಾಡದೆ ಸರಕಾರೀ ಬೆಂಬಲ ಅಥವಾ ಪೋಷಣೆಯ ಮೇಲೆ ಅವಲಂಬಿಸದೆ ತಮ್ಮಷ್ಟಕ್ಕೆ ತಾವು ಕೆಲಸ ಮಾಡುತ್ತ ಹೋದರೆ ಆಗ ಅವರ ಜೀವನದ ಪಾವಿತ್ರ್ಯದಿಂದ ಮತ್ತು ಗುಣದ ಮತ್ತು ಪ್ರಯತ್ನದ ಉದಾತ್ತತೆಯಿಂದ ಅವರು ಖಂಡಿತವಾಗಿ ಜಯಶೀಲರಾಗುವರೆಂದು ನನಗನಿಸುತ್ತದೆ.

“ನಾನು ಹೊಸದೇನನ್ನೂ ಹೇಳಿದ್ದೇನೆಂದು ಭಾವಿಸಿಲ್ಲ. ಆದರೆ ಕೆಲವೊಮ್ಮೆ ನಾವು ಎದುರಿಗೆ ಸ್ಪಷ್ಟವಾಗಿರುವುದನ್ನೇ ಅಲಕ್ಷ್ಯ ಮಾಡಿಬಿಡುತ್ತೇವೆ. ನಾನು ಒತ್ತಿ ಹೇಳಿದ ಅಂಶವನ್ನು ಎಚ್ಚರಿಕೆಯಿಂದ ಮನನ ಮಾಡಬೇಕೆಂಬ ಬಗ್ಗೆ ನಾನು ಬಹಳ ಕಾತರನಾಗಿದ್ದೇನೆ.

ಇಂದಿನ ಕಾಲದಲ್ಲಿ ವಿಘ್ನದ ಕಾಳರಾತ್ರಿಯು ರಾಜಕೀಯ ಅಧಿಕಾರದ ಸೂರ್ಯಪ್ರಕಾಶಕ್ಕೆ ಮಣಿದಿರುವಾಗ ಎಲ್ಲ ಕಾಂಗ್ರೆಸ್ಸಿಗರೂ ಸ್ವಾಭಾವಿಕವಾಗಿ ಅದನ್ನು ಅನುಭವಿಸಲೂ ಅದರ ಪರೋಪಕಾರಕ ಪ್ರಯೋಗದಿಂದ ಜನತೆಯನ್ನು ಸೇವಿಸಲೂ ಬಯಸುತ್ತಾರೆ. ಅವರು ಅಷ್ಟು ಆಳವಾಗಿ ಅರ್ಪಣೆನಿಸಿರುವಾಗ ಈ ನಿಃಸ್ವಾರ್ಥಸೇವೆಯ ಮಾರ್ಗದಲ್ಲಿ ನಡೆಯ ಬರುವವರು ಜಯಶೀಲರಾಗಲೆಂದು ನಾನು ಬಹಳ ಕಾತರಿಸುತ್ತಿದ್ದೇನೆ. ಖಾದಿ ಮತ್ತು ಅವರ ಮನೆ ಕೈಗಾರಿಕೆಗಳ ಅಭಿವೃದ್ಧಿಗಾಗಿ ಈ ಕೆಲಸಗಾರರು ವಿವಿಧವಾದ ಸಹಕಾರಿ ಸಂಘಗಳನ್ನು ನಡೆಸಿದರೆ ಉತ್ತಮವೆನಿಸುತ್ತದೆ. ಅದರಿಂದ ಅವರಿಗೆ ಹಳ್ಳಿಯವನೊಡನೆ ಅತಿ ನಿಕಟವಾದ ಸಂಬಂಧವುಂಟಾಗಿ ಅವನಿಗೆ ಅವರು ಅಮೂಲ್ಯ ಸೇವೆ ಸಲ್ಲಿಸಬಲ್ಲರಾಗುವರು; ಏಕೆಂದರೆ ಈ ವಿಧದ ಸುಸಂಘಟಿತ ಸಹಕಾರಿ ಸಂಘಕ್ಕೆ ಜಾಗರೂಕತೆಯ ಮತ್ತು ದಕ್ಷತೆಯ ಅಡಳಿತ ಅವಶ್ಯಕವಿದೆ.”

ಸೇವಾಗ್ರಾಮದಲ್ಲಿ ರಚನಾತ್ಮಕ ಕಾರ್ಯಕರ್ತರ ಸಮ್ಮೇಳನ ನಡೆದಂದಿನಿಂದ ವಿವಿಧ ಪ್ರಾಂತಗಳಲ್ಲಿ ಅಂಥ ಅನೇಕ ಸಮ್ಮೇಳನಗಳಾದವು. ಕೆಲ ದಿನಗಳ ಹಿಂದೆ ಅಂಥ ಒಂದು ಸಮ್ಮೇಳನದ ಸಂಘಟಕರಿಗೆ ಬರೆದು ಹಾಕಿದ ಒಂದು ಪತ್ರವನ್ನು ಇಲ್ಲಿ ಪ್ರಕಟಿಸಿದ್ದಕ್ಕೆ ಓದುಗನ ಕ್ಷಮೆಯನ್ನು ಬೇಡುತ್ತೇನೆ.

“ ಈ ಪ್ರಾಂತೀಯ ಸಮ್ಮೇಳನಗಳು ಅವಶ್ಯ. ಆದರೆ ಒಂದು ಅಥವಾ ಎರಡು ತಪ್ಪುಗಳಿಗೆ ಕೆಲಸಗಾರರು ಬೀಳದಂತೆ ನಾನು ಎಚ್ಚರಿಸಬಯಸುತ್ತೇನೆ. ಜಯಪ್ರದವಾಗಿ ಸಮ್ಮೇಳನ ನಡೆಸುವುದೇ ಸೇವೆಯ ಒಂದು ಭಾಗ ಎಂದು ಭಾವಿಸಿ ಒಂದರ ಮೇಲೊಂದರಂತೆ ಜಿಲ್ಲಾ ಸಮ್ಮೇಳನ, ತಾಲೂಕು ಸಮ್ಮೇಳನ ಇತ್ಯಾದಿಗಳನ್ನು ಮಾಡುತ್ತ ಹೋಗುವುದು. ಒಂದು ತಪ್ಪು; ಎಚ್ಚರಿಕೆಯಿಂದ ಪದ ಜೋಡಿಸಿ ಗೊತ್ತುವಳಿ ಸ್ವೀಕರಿಸಿ ಅವುಗಳನ್ನು ಸಮರ್ಥಿಸಲು ಭಾಷಣಮಾಡಿ ಬಿಟ್ಟರೆ ಕಾರ್ಯಕ್ರಮ ಮುಗಿಯಿತೆಂದು ತಿಳಿದುಕೊಳ್ಳುವುದು, ಎರಡನೆಯದು; ಮೂರನೆಯ ತಪ್ಪೆಂದರೆ, ಪ್ರತಿಯೊಂದು ಅಂಶದಲ್ಲೂ ಸರಕಾರದ ಅಥವಾ ಅಧಿಕಾರೀತರವಾದ ಅಖಿಲ ಭಾರತ ಸಂಸ್ಥೆಗಳಿಂದ ನೇತೃತ್ವವನ್ನೂ ಹಣಕಾಸಿನ ಸಹಾಯವನ್ನೂ ನಿರೀಕ್ಷಿಸುವುದು.

ಕಾಂಗ್ರೆಸ್ಸಿನಲ್ಲಿ ಸುಧಾರಣೆ

(೯ ನೆಯ ಪುಟದಿಂದ)

ಆ–ಗಾಂಧೀವಾದಿಯಾಗಿಯೂ ತೋರಿಸಿಕೊಳ್ಳಲಾರದು. ಅ. ಭಾ. ಚರಖಾ ಸಂಘ, ಅ. ಭಾ. ಗ್ರಾಮೋದ್ಯೋಗ ಸಂಘ ಮೊದಲಾದ ಸಂಸ್ಥೆಗಳ ಬಗ್ಗೆ ಅದರ ಧೋರಣೆಯು, ಗಾಂಧೀಜಿ ಅಥವಾ ಹಳೇ ಕಾಂಗ್ರೆಸ್ಸಿನಿಂದ ಸ್ಥಾಪಿಸಲ್ಪಡದ ಇತರ ಸಂಸ್ಥೆಗಳ ಬಗ್ಗಿನ ಧೋರಣೆಯಂತೆಯೆ ಇರುವನು ಅದು ಶಾಸನ ಸಭಾ ಚಟುವಟಿಕೆಗಳ ಮೂಲಕ ಜನಸೇವೆ ಮಾಡಲಪೇಕ್ಷಿಸುವದು. ಕಾಂಗ್ರೆಸ್ಸು ಅಧಿಕಾರದಲ್ಲಿರುವಾಗ ಸರಕಾರದ ಧೋರಣೆಗಳನ್ನು ಜನರಿಗೆ ತಿಳಿಸಿ ಹೇಳುವ ಮತ್ತು ಅವುಗಳು ಜನರಿಗೆ ನಿಜವಾಗಿ ಹಿತಕಾರಿಯಂತೆ ನೋಡಿಕೊಳ್ಳುವ ಮೂಲಕ ಕಾಂಗ್ರೆಸ್ಸಿಗರು ಜನತೆಯೊಡನೆ ಸಂಪರ್ಕ ಇಟ್ಟುಕೊಳ್ಳುವರು. ಸರಳತೆ, ನಿಷ್ಪಕ್ಷಪಾತ, ನಮ್ರತೆ, ಮತ್ತು ಆದರ್ಶ ಜೀವನ ಇವು ಕಾಂಗ್ರೆಸಿಗನ ಲಕ್ಷಣಗಳೆನಿಸುವಂತಾದರೆ ಅಂಥ ಕಾಂಗ್ರೆಸ್ಸು ಯಾವಾಗಲೂ ಜನರಿಗೆ ಬೇಕೆನಿಸದಿರದು.

ವರ್ಧಾ, —ಕಿ. ಘ. ಮಶ್ರೂವಾಲಾ.

೨೪—೭—೪೮

ಸ್ವಾತಂತ್ರ್ಯದ ಬೆಲೆಯೇನಲ್ಲ

ಒಬ್ಬ ದೇಶಭಕ್ತ ಮಹಿಳೆಯು ಶ್ರೀ. ಭನಸಾಲಿಯವರ ಉಪವಾಸದ ಮಾತೆತ್ತಿ ಹೀಗೆ ಬರೆದಿದ್ದಾರೆ :

“ಸ್ತ್ರೀ ಮಾನವನ್ನೇ ನಮ್ಮ ಸ್ವಾತಂತ್ರ್ಯಕ್ಕೆ ಬೆಲೆಯಾಗಿ ದೇವರು ಬೇಡುತ್ತಿರುವನೆಂದು ತೋರುತ್ತಿದೆ.”

ಇದನ್ನು ನಾನು ಒಪ್ಪಲಾರೆ ಇದು ದೇವರು ಬೇಡಿದ ಬೆಲೆಯಲ್ಲ ಆದರೆ ಸೈತಾನನು ಬಲಾತ್ಕಾರದಿಂದ ಕಿತ್ತುಕೊಳ್ಳುತ್ತಿರುವ ಬಲಿಯಾಗಿದೆ. ೧ ಪೌಂಡು ಗೋದಿಯ ಯೋಗ್ಯ ಬೆಲೆ ೪ ಆಣೆ. ಆದರೆ ನಾವು ಅಷ್ಟಕ್ಕೆ ೧ ರೂಪಾಯಿ ಕೊಡುತ್ತೇವೆ. ಯಾಕಂದರೆ ವ್ಯಾಪಾರಿಯು ಗೋದಿಯನ್ನು ೧ ರೂ. ಗೆ ಕಡಮೆ ಕೊಡುವದಿಲ್ಲವೆನ್ನುತ್ತಾನೆ. ಪ್ರಾಮಾಣಿಕ ವರ್ತಕನು ೧ ರೂ. ಆದರ ಬೆಲೆಯೆಂದು ಕೇಳಲಾರ. ಆದರೆ ಕಳ್ಳ ಸಂತೆಯ ವ್ಯಾಪಾರಿಯು ಅಷ್ಟನ್ನೇ ದೋಚಿಕೊಳ್ಳುವನು. ಸ್ತ್ರೀ ಮಾನಭಂಗವು ಇದಕ್ಕೂ ಕೀಳ್ಗೆಲಸ. ಯಾಕಂದರೆ ಮನಸ್ಸಿದ್ದೊ ಇಲ್ಲದೆಯೊ ಕಳ್ಳ ಸಂತೆಯವನು ಕೇಳಿದ್ದನ್ನು ಕೊಡಬೊಪ್ಪುತ್ತೇವೆ. ಆದರೆ ಸ್ತ್ರೀಮಾನಭಂಗದ ಸಂದರ್ಭದಲ್ಲಿ ಭಂಗಿತ ಸ್ತ್ರೀಯ ಸಮ್ಮತಿ ಅಸಮ್ಮತಿಯ ಮಾತೇ ಇಲ್ಲ; ಅಲ್ಲದೆ ಇಲ್ಲಿ ಸ್ವಾತಂತ್ರ್ಯದ ಸಂಬಂಧವೇ ಇಲ್ಲ. ಇವು ಹೀನ ಮಾನವನ ಪಾಶವೀ ಕೃತ್ಯಗಳು ಎಂದ ಮೇಲೆ ಸತೀತ್ವವು ಸ್ವಾತಂತ್ರ್ಯಕ್ಕಾಗಿ ಕೊಟ್ಟ ಸ್ತ್ರೀಯರ ಬಲಿದಾನವೆಂದು ಸಮಾಧಾನ ಹಚ್ಚಿಕೊಳ್ಳುವದು ಸರ್ವಥಾ ತಪ್ಪು. ಈ ಸ್ತ್ರೀ ಬಲಾತ್ಕಾರವನ್ನು ನಾವು ನಮ್ಮ ಶಕ್ತಿ ಸರ್ವಸ್ವವನ್ನೂ ತಪಸ್ಸಾಬಲವನ್ನೂ ಸಂಚಯಿಸಿ ತಡೆಗಟ್ಟಲೇಬೇಕು.

ಡಾ. ಖಾನ ಸಾಹೇಬರ ಬಂಧನ

ಗಡಿನಾಡಿನ ಹಿಂದಿನ ಮುಖ್ಯ ಮಂತ್ರಿಗಳಾದ ಡಾ. ಖಾನ ಸಾಹೇಬರನ್ನು ತಾ. ೧ ಕ್ಕೆ ಪಾಕಿಸ್ತಾನ ಸರಕಾರದ ಪೋಲೀಸರು ಉತ್ತಮಂಜಾಯಿಯಲ್ಲಿ ಬಂಧಿಸಿ ಹಜಾರಾ ಜಿಲ್ಹೆಯ ಬೆಟ್ಟದ ಸ್ಥಳವಾದ ಧಂಡಿಯಾನಿಗೆ ಕರೆದೊಯ್ದು ನಿರ್ಬಂಧದಲ್ಲಿಟ್ಟಿರುವರು.

“ ಸರಕಾರ–ಕೇಂದ್ರದ್ದಿರಲಿ, ಪ್ರಾಂತದ್ದಿರಲಿ–ಅಧಿಕಾರೀತರವಾದ ಅ. ಭಾ. ಸಂಸ್ಥೆಗಳಿಗೂ ಅವುಗಳದೇ ಆದ ಸ್ಥಾನ ಮತ್ತು ಕರ್ತವ್ಯ ಕಕ್ಷೆಯಿದೆ, ಆದರೆ ಅವುಗಳ ಮೇಲೆ ಕೆಲಸಗಾರರು ಬಹಳವಾಗಿ ಅವಲಂಬಿಸಿದರೆ, ಈ ಸಂಸ್ಥೆಗಳು ಸರಿಯಾಗಿ ಕರ್ತವ್ಯವನ್ನು ನಿರ್ವಹಿಸದಿದ್ದರೆ, ಎಲ್ಲ ಸಂಘಟನೆಗಳೂ ಉರುಳಿ ಹೋದಾವು; ಮತ್ತು ಸರ್ವೋದಯವನ್ನು ಸತ್ಯವಾಗಿ ಮಾಡಿಕೊಡುವ ಸ್ವರಾಜ್ಯವನ್ನು ಜನರೆಂದೂ ಹೊಂದಲಾರರು.

“ಆದ್ದರಿಂದ–ಜನರನ್ನು ನಿಮ್ಮೊಡನೆ ಒಯ್ಯಿರಿ, ಸ್ವಪ್ರವೃತ್ತಿಯಿಂದಲೇ ರಚನಾತ್ಮಕ ಕಾರ್ಯಕ್ರಮವನ್ನು ಅವರು ಮುಗಿಸುವಂತೆ ಮಾಡಿರಿ—ಎಂದು ನಾನು ಕಾರ್ಯಕರ್ತರಿಗೆ ಬಿನ್ನವಿಸಿಕೊಳ್ಳುತ್ತೇನೆ. ಸಾಧ್ಯವಿರುವ ಜನಪ್ರಯತ್ನದ ಮೇಲೆ ವಿವಿಧ ಕಾರ್ಯಗಳನ್ನು ಗೊತ್ತುಪಡಿಸಬೇಕು; ಸರಕಾರೀ ಅಥವಾ ಅಧಿಕಾರೀತರ ಕೇಂದ್ರ ಸಂಸ್ಥೆಗಳು ಸಹಾಯ ನೀಡಲಿ ನೀಡದಿರಲಿ ಅತ್ತ ಲಕ್ಷ ಕೊಡಬಾರದು.

ವರ್ಧಾ, ಕಿ. ಘ. ಮಶ್ರೂವಾಲಾ

೮–೭.೪೮

ಪ್ಲಾಸ್ಟಿಕ್ಸ್

[... ಪ್ರೊ. ಬಿ. ಸತ್ಯಭಾವನ್, ಬಿ. ಎ.]

... ಹೊಸ ವಸ್ತುಗಳ ಸಂಶೋಧನೆ ಅವುಗಳಲ್ಲಿ ಮುಖ್ಯವಾದುದು. ಸಾವಿರಾರು ವರ್ಷಗಳಿಂದ ಜನರು ಪ್ರಕೃತಿಸಿದ್ಧವಾದ ವಸ್ತುಗಳನ್ನು ಮಾತ್ರ ಉಪಯೋಗಿಸಿಕೊಂಡು ತೃಪ್ತರಾಗಬೇಕಾಗಿತ್ತು. ಅದರಿಂದ ಸುಲಭವಾಗಿ ಪಿಂಗಡಿಸಬಹುದಾದ ಖನಿಜಗಳು, ಮರ ಮತ್ತು ಮಣ್ಣು ಇಂಥ ವಸ್ತುಗಳು. ಈ ವಸ್ತುಗಳ ಗುಣಗಳಲ್ಲಿ ಕೆಲವು ಬಗೆಯ ನ್ಯೂನತೆಗಳಿವೆ. ಮರ ಸುಟ್ಟು ಹೋಗುವಂಥದು, ತೇವಹೀರಿ ಕೆಟ್ಟುಹೋಗುವಂಥದು. ಖನಿಜಗಳು ಭಾರವಾಗಿರುವವು, ಉಷ್ಣ ಮತ್ತು ವಿದ್ಯುಚ್ಛಕ್ತಿಯ ವಾಹಕಗಳು. ಕೆಲವು ಅತ್ಯುಪಯೋಗಿಗಳಾದರೂ ಇನ್ನು ಕೆಲವು ಕೊರತೆಗಳನ್ನೊಳಗೊಂಡಿವೆ.

ಮೊದಲನೆಯ ಮಹಾಯುದ್ಧದ ಬಳಿಕ "ಪ್ಲಾಸ್ಟಿಕ್ಸ್" ಎಂಬ ಹೊಸ ವಸ್ತುಗಳನ್ನು ಆಶ್ರಯಿಸಿ ಕೈಗಾರಿಕೆ ವಿಶೇಷವಾಗಿ ಬೆಳೆದು ಬಂದಿದೆ. ಅಮೇರಿಕನರು ಈ ವಸ್ತುಗಳನ್ನು ರೆಸಿನಾಯ್ಡ್ಸ್ ಅಥವಾ ಕೃತಕ ಮಯಣಗಳು ಎಂದು ಕರೆಯುತ್ತಾರೆ. ಅರಗು ಮೊದಲಾದ ಸ್ವಾಭಾವಿಕಮಯಣ(ಮೇಣ)ಗಳು ಅನೇಕರಿಗೆ ಪರಿಚಿತವಾಗಿದೆ. ಕೃತಕ ಮಯಣಗಳು ತೋರಿಕೆಯಲ್ಲಿಯೂ ಅಣುಸಂಯೋಜನೆಯಲ್ಲಿಯೂ ಸ್ವಾಭಾವಿಕ ಮಯಣಗಳಂತೆಯೇ ಇರುತ್ತವೆ. ಆದರೆ ಸ್ವಾಭಾವಿಕ ಮಯಣಗಳಲ್ಲಿ ಕಾಣಸಿಗದಿರುವ ಅನೇಕ ಸದ್ಗುಣಗಳು ಕೃತಕ ಮಯಣಗಳಲ್ಲಿರುತ್ತವೆ.

ಉತ್ಪಾದನೆಯ ಪ್ರಾರಂಭ

ಈ ಕೃತಕ ಮಯಣಗಳು (ಪ್ಲಾಸ್ಟಿಕ್ಸ್) ಪ್ರಯೋಗಶಾಲೆಯಲ್ಲೇ ನಿರ್ಮಾಣವಾದುವು. ಅವುಗಳ ಇತಿಹಾಸದ ಪ್ರಾರಂಭ ಕಾಲವಾವುದೆಂದು ಅನೇಕರಿಗೆ ಗೊತ್ತಿಲ್ಲ. ಸೆಲ್ಯುಲಾಯ್ಡ್ ಎಂಬುದು ಮೊದಲನೆಯ ಸಲ ತಯಾರಾದ ಪ್ಲಾಸ್ಟಿಕ್. ಹತ್ತಿಯನ್ನೂ ಕರ್ಪೂರವನ್ನೂ ಬೆರೆಸಿ ಮಾಡಿದ ಈ ವಸ್ತು ಎಪ್ಪತ್ತೈದು ವರ್ಷಗಳ ಹಿಂದೆ ಹುಟ್ಟಿತು. ಹತ್ತು ವರ್ಷಗಳ ತರುವಾಯ ಇದಕ್ಕಿಂತ ಒಳ್ಳೆಯ ಪ್ಲಾಸ್ಟಿಕ್ ತಯಾರಾಯಿತು. ಈ ಶತಮಾನದ ಪ್ರಾರಂಭಕ್ಕಿಂತ ಮೊದಲೇ ಇದು ಇನ್ನೂ ಸುಧಾರಣೆಗೊಂಡಿತು. ಆದರೆ ೧೯೦೭ ರಲ್ಲಿ ಅಮೇರಿಕೆಯ ಯುಕ್ತ ಸಂಸ್ಥಾನಗಳಲ್ಲಿ ಸಂಶೋಧನೆ ಮಾಡುತ್ತಿದ್ದ ಕುಶಲಮತಿಯಾದ ಬೆಲ್ಜಿಯನ್ ವಿಜ್ಞಾನಿ ಡಾಕ್ಟರ ಬ್ಯಾಕ್‌ಲ್ಯಾಂಡ್ ಎಂಬವರು ಬ್ಯಾಕ್‌ಲೈಟ್ ಎಂಬ ಪ್ಲಾಸ್ಟಿಕನ್ನು ನಿರ್ಮಿಸಿದ್ದೇ ಈ ಕೈಗಾರಿಕೆಯ ತಳಹದಿ ಎನ್ನಬಹುದು. ಆ ಮೇಲೆಯೂ ಕೆಲವು ವರ್ಷಗಳ ವರೆಗೆ ಇದು ವಿಶೇಷ ಬೆಳೆಯಲಿಲ್ಲ. ೧೯೩೨ ರಲ್ಲಿ ಪ್ರಪಂಚದಲ್ಲೆಲ್ಲ ಉತ್ಪನ್ನವಾದ ಪ್ಲಾಸ್ಟಿಕ್ಸ್ ೭೦೦೦ ಟನ್. ೧೯೩೯ ರಲ್ಲಿ ಇದು ಇಮ್ಮಡಿಯಾಯಿತು. ಅನಂತರ ಇದು ಬಹು ಬೇಗನೆ ಹೆಚ್ಚು ಹೆಚ್ಚಾಗಿ ಅಭಿವೃದ್ಧಿಗೊಂಡಿದೆ.

ಪ್ಲಾಸ್ಟಿಕ್‌ಗಳಲ್ಲಿ ಇತರ ವಸ್ತುಗಳಿಗಿಂತ ಹೆಚ್ಚಿನ ಯಾವ ಗುಣಗಳಿವೆ? ಮೊದಲನೆಯದಾಗಿ ಅವುಗಳ ಒಡವೆಗಳಿಗೆ ಆಕಾರ ಕೊಡುವುದು ಅತಿ ಸುಲಭ. ತಲೆ ಕೂದಲಿಗೆ ಚುಚ್ಚುವ ಸೂಜಿಗಳಿಂದ ತೊಡಗಿ ಮೋಟರ ಗಾಡಿಯಷ್ಟು ದೊಡ್ಡ ಸಾಮಾನುಗಳನ್ನು ಇದರಿಂದ ಮಾಡುತ್ತಾರೆ. ಹೆಚ್ಚು ಗಟ್ಟಿಯಾಗಿರಬೇಕಾದ ವಸ್ತುಗಳನ್ನು ಒಂದು ತಾಸಿನಷ್ಟು ದೀರ್ಘ ಕಾಲ ಕಾಯಿಸಬೇಕಾಗುವುದು. ಆದರೆ ಉಳಿದವುಗಳನ್ನು ಕೆಲವೇ ನಿಮಿಷ ಕಾಸಿದರೆ ಸಾಕು. ಅವುಗಳಲ್ಲಿರುವ ಇನ್ನೊಂದು ಗುಣವೆಂದರೆ ಮೇಲ್ಭಾಗದಲ್ಲಿನ ನುಣುಪು, ಹೊಳಪು. ಮರಕ್ಕೆ ನುಣುಪು ಬರಲು ಹೆಚ್ಚಿನ ಶ್ರಮಬೇಕು ಮಾತ್ರವಲ್ಲದೆ ಆಗಾಗ ಪುನಃ ನುಣುಪುಗೊಳಿಸಬೇಕಾಗುತ್ತದೆ. ಪ್ಲಾಸ್ಟಿಕ್ ಹುಟ್ಟುವಾಗಲೇ ನುಣುಪು ಒಡನೆಯೇ ಬರುತ್ತದೆ. ... ಎಂದೆಂದಿಗೂ ಹೋಗುವುದಿಲ್ಲ ... ಮಾಸಿದರೂ ತೊಳೆದರೆ ನಾಜೂಕಾಗುತ್ತದೆ.

ಆಹಾರ ವಸ್ತುಗಳನ್ನು ಹಾಕಲು ಉತ್ತಮ

ತಯಾರಿಯ ಕಾಲದಲ್ಲಿ ... ಪ್ಲಾಸ್ಟಿಕ್‌ಗೆ ಬಣ್ಣ ಕೊಡಬಹುದು ... ರಕ್ಕೆ ಒದಗುವ ಅನೇಕ ... ರಿಸಬಹುದು ... ಮೊದಲು ಪುಡಿಗೆ ಬಣ್ಣ ... ರಂಗಾಗಿ ಉಳಿಯುತ್ತದೆ. ... ಯಲ್ಲಿ ವೈವಿಧ್ಯದಿಂದ ಬಗೆಬಗೆಯ ಬಣ್ಣದ ಮಾದರಿಗಳನ್ನು ಮಾಡುತ್ತಾರೆ. ಈ ಬಣ್ಣಗಳು ಮೂಲ ವಸ್ತುವಿನೊಂದಿಗೆ ಭದ್ರವಾಗಿ ಸೇರಿಕೊಳ್ಳುವುದರಿಂದ ಪ್ಲಾಸ್ಟಿಕ್ ತಟ್ಟೆಗಳಲ್ಲಿ (ಹುಳಿ ಮೊದಲಾದ) ಯಾವ ಬಗೆಯ ಆಹಾರ ಪದಾರ್ಥಗಳನ್ನು ಹಾಕಿದರೂ ರುಚಿ ಕೆಡುವುದಿಲ್ಲ. ಆಹಾರದಲ್ಲಿರುವ ಆಮ್ಲ ಲವಣಗಳಿಂದ ಬಣ್ಣಕ್ಕೆ ಹಾನಿ ಬರುವುದೂ ಇಲ್ಲ.

ಒಂದೊಂದು ಬಗೆಯ ಪ್ಲಾಸ್ಟಿಕ್‌ಗಳಲ್ಲಿ ಇನ್ನೂ ಕೆಲವು ವಿಶೇಷ ಗುಣಗಳಿರುತ್ತವೆ. ಬ್ಯಾಕ್‌ಲೈಟನಲ್ಲಿ ವಿದ್ಯುಚ್ಛಕ್ತಿಯಾಗಲಿ ಉಷ್ಣವಾಗಲಿ ಹಾಯುವುದು ಬಲು ನಿಧಾನವಾದ್ದರಿಂದ ಅದನ್ನು ಗಾಜಿನ ಅಥವಾ ರಬ್ಬರಿನ ಬದಲಾಗಿ ಉಪಯೋಗಿಸಬಹುದು. ಬಲ, ಬಾಳಿಕೆಯಲ್ಲಿ ಬೇರೆ ವಸ್ತುಗಳನ್ನು ಮೀರಿಸುವುವು. ಚದರ ಅಂಗುಲಕ್ಕೆ ೧೩,೦೦೦ ಪೌಂಡುಗಳಷ್ಟು ಒತ್ತಡವನ್ನು ಹೊರುವ ಶಕ್ತಿ ಅದಕ್ಕಿದೆ. ಉಷ್ಣವನ್ನು ತಡೆಯುವುದು ಮತ್ತು ಪಾರದರ್ಶಕತೆ ಇವುಗಳ ಇತರ ಗುಣಗಳು.

ಪ್ಲಾಸ್ಟಿಕ್‌ಗಳು ಗಾಜಿನಷ್ಟೇ ಪಾರದರ್ಶಕಗಳಾಗಿವೆ, ಆದರೆ ಗಾಜಿನಂತೆ ಒಡೆಯುವುದಿಲ್ಲ. ಇದರಿಂದಲೇ ಕೆಲವು ವರ್ಷಗಳ ಹಿಂದೆ ಸೆಲ್ಯುಲಾಯ್ಡ್‌ನ ಉಪಯೋಗ ಹೆಚ್ಚಲು ಕಾರಣವಾಯಿತು. ಈಗಿನ ಪ್ಲಾಸ್ಟಿಕ್‌ಗಳಲ್ಲಿ ಇನ್ನೊಂದು ಗುಣವಿದೆ. ಅದಕ್ಕೆ ಬೆಂಕಿ ಹಿಡಿಯುವುದಿಲ್ಲ. ಇಂತಹ ಪ್ಲಾಸ್ಟಿಕ್‌ಗಳನ್ನು ಫೌಂಟನ್‌ಪೆನ್ ಮೈಗೆ ಉಪಯೋಗಿಸುವುದು ವಿಶೇಷ ಬಳಕೆಗೆ ಬಂದಿದೆ. ಪೆನ್ನುಗಳಲ್ಲಿ ಎಷ್ಟು ಶಾಯಿ ಉಳಿದಿದೆಯೆಂದು ಹೊರಗಿನಿಂದಲೇ ನೋಡಲು ಸಾಧ್ಯವಾಗುತ್ತದೆ. ವಿಮಾನಗಳ ಕಿಟಕಿಗಳಿಗೂ ಇವನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ. ಗಾಜಿಗಿಂತ ಬಹಳವಾಗಿ ಹಗುರವಾಗಿರುವುದರಿಂದ ಈ ಉಪಯೋಗಕ್ಕೆ ಅನುಕೂಲ ಹೆಚ್ಚು.

ಒಡೆಯದ ಕನ್ನಡಕ

ವಿಲಾಯತಿಯಲ್ಲಿ ತಯಾರಿಸಿರುವ ಪಾರದರ್ಶಕ ಪ್ಲಾಸ್ಟಿಕ್‌ಗಳಲ್ಲಿ ಸ್ಫಟಿಕ ಒಂದು ಬಗೆಯದು ದೃಷ್ಟಿಗುಣವುಳ್ಳದ್ದು, ಕನ್ನಡಕಗಳಿಗೆ ಉಪಯೋಗಿಸಬಹುದಾದ್ದು. ಅತಿ ನೇರಳೆ ಕಿರಣ (Ultra Violet Ray) ಹಾದು ಹೋಗುವಷ್ಟು ಶುಭ್ರವಾದುದು. ಗಡುಸಾಗಿರುವುದರಿಂದ ಒಡೆದುಹೋಗುವುದಿಲ್ಲ. ಗಾಜಿನ ಅರ್ಧದಷ್ಟು ಮಾತ್ರ ಭಾರವಾಗಿರುವುದರಿಂದ ದೂರ ದೇಶಗಳಿಗೆ ಸಾಗಿಸಲು ವೆಚ್ಚ ಕಡಿಮೆ. ಯಂತ್ರಗಳಲ್ಲಿ ಕೊರೆಯುವಾಗ ಬಿರುಕು ಬಿಡುವುದಿಲ್ಲ. ಇಂತಹ ಪ್ಲಾಸ್ಟಿಕ್‌ನ ಉಪಯೋಗ ಬಹಳ. ಇದರಲ್ಲಿರುವ ಒಂದೇ ಒಂದು ದೋಷವೆಂದರೆ ಗಾಜಿಗಿಂತ ಬೇಗನೆ ಗೀರುಗಳಾಗುವುದು.

ಪ್ಲಾಸ್ಟಿಕ್‌ಗಳಿಂದ ತಯಾರಿಸಿದ ಬಗೆಬಗೆಯ ವಸ್ತುಗಳು ನಾಗರಿಕ ಜೀವನದಲ್ಲಿ ಹೆಚ್ಚು ಹೆಚ್ಚಾಗಿ ಬಳಕೆಗೆ ಬರುತ್ತಿವೆ. ಮೋಟರ್ ಕಾರಿನ ಅನೇಕ ಸಣ್ಣಪುಟ್ಟ ಭಾಗಗಳು ಪ್ಲಾಸ್ಟಿಕ್‌ಗಳಿಂದ ತಯಾರಾಗುತ್ತವೆ. ಕ್ರಮೇಣ ಕಾರಿನ ಪೂರ್ಣ ದೇಹವನ್ನು ಪ್ಲಾಸ್ಟಿಕ್‌ನಿಂದಲೇ ತಯಾರಿಸುವ ಯೋಜನೆಯಿದೆ.

ಎರಡು ದಿನದಲ್ಲೊಂದು ಮನೆ

ಪ್ಲಾಸ್ಟಿಕ್‌ನ ಕೈಗಾರಿಕೆ ಮುಂದುವರಿದಂತೆ ದೊಡ್ಡ ದೊಡ್ಡ ವಸ್ತುಗಳನ್ನು ತಯಾರಿಸುವರು. ಈಗಾಗಲೇ ಕುರ್ಚಿ ಮೇಜುಗಳಷ್ಟು ದೊಡ್ಡ ವಸ್ತುಗಳು ತಯಾರಾಗುತ್ತಿವೆ. ಪ್ಲಾಸ್ಟಿಕ್‌ನ ಹೊಳಪು ಮತ್ತು ಬಗೆಬಗೆಯ ಬಣ್ಣಗಳು ಚಿತ್ತಾಕರ್ಷಕವಾಗಿವೆ. ಕಾಲಕ್ರಮೇಣ ಇಡೀ ಮನೆಯ ಬೇರೆ ಬೇರೆ ಭಾಗಗಳನ್ನು ಪ್ಲಾಸ್ಟಿಕ್‌ನಿಂದ ತಯಾರಿಸಿ ಜೋಡಿಸಬಹುದು. ಪ್ರಪಂಚದ ಬೇರೆ ಬೇರೆ ಭಾಗಗಳಲ್ಲಿ ಅನೇಕ ಕಡೆ ಪ್ಲಾಸ್ಟಿಕ್‌ನಿಂದ ಸಣ್ಣ ಸಣ್ಣ ಕೊಟ್ಟಿಗೆಗಳನ್ನು ಕಟ್ಟಿದ್ದಾರೆ. ಇವುಗಳ ಛಾವಣಿ ಮತ್ತು ಗೋಡೆಗಳು ಉಷ್ಣ ... ವಲ್ಲದೆ ಇರುವುದರಿಂದ ಗುಡಿಸಲುಗಳೊಳಗೆ ... [illegible]

ರೂಪರಂಗ

"ಚೂಲ ಆಣಿ ಮೂಲ"

('ಕರ್ಮವೀರ' ಪ್ರತಿನಿಧಿಯಿಂದ)

ಪುರುಷರಂತೆ ಸ್ತ್ರೀಯೂ ಸಮಾಜದಲ್ಲಿ ಸ್ವತಂತ್ರಳಾಗಿರಬೇಕೆನ್ನುವದು ಸುಧಾರಕರ ಕೂಗು. ಪತ್ನಿಯು ಪತಿಯ ಅರ್ಧಾಂಗಿ ಎನಿಸಿದರೂ ಅವಳ ಪತಿಯಂತೆ ಶಿಕ್ಷಣ ಪಡೆದು ನೌಕರಿ ಮಾಡಿ ನಾಲ್ಕು ಜನರೊಡನೆ ಪುರುಷರಷ್ಟೇ ಸ್ವತಂತ್ರವಾಗಿ ಅಡ್ಡಾಡಬಾರದೇಕೆ? ಸ್ತ್ರೀ ಸ್ವಾತಂತ್ರ್ಯದ ಪುರಸ್ಕರ್ತರು ವಿಚಾರಿಸಬೇಕಾದ ವಿಷಯವಿದು.

ಇದೇ ವಿಷಯವನ್ನೇ ಕಥಾವಸ್ತುವಾಗಿರಿಸಿ 'ಫೇಮಸ್' ಸಿನೇಮಾ ಕಂಪನಿಯವರು 'ಚೂಲ ಆಣಿ ಮೂಲ' ಎಂಬ ಮರಾಠೀ ಚಿತ್ರಪಟವನ್ನು ರಚಿಸಿದ್ದಾರೆ. ಈ ಚಿತ್ರಪಟದಲ್ಲಿ ಸ್ತ್ರೀ ಸ್ವಾತಂತ್ರ್ಯದ ಪುರಸ್ಕರ್ತನು 'ಅಣ್ಣ'. ಈತನು ಸಮಾಜದಲ್ಲಿ ಕ್ರಾಂತಿ ಮಾಡಲು ಹೊರಟ ಉತ್ಕಟ ಸುಧಾರಕನು. ತನ್ನ ಮೊಮ್ಮಗಳಾದ 'ಮಾಯಾ' ಅವಳಿಗೆ ಸ್ತ್ರೀ ಸ್ವಾತಂತ್ರ್ಯದ ವಿಚಾರವನ್ನು ಬಾಲ್ಯದಿಂದಲೇ ತಲೆಯಲ್ಲಿ ತುಂಬಿರುವನು. ಅವಳು 'ಅಣ್ಣ'ನ ಶಿಕ್ಷಣದಂತೆ ವರ್ತಿಸಲು ತೊಡಗುವಳು. ಸಮಾಜದ ವಿರುದ್ಧ ಬಂಡು ಹೂಡಿದ ಧೈರ್ಯಶಾಲಿನಿ; ಅವಳ ಸ್ವತಂತ್ರ ಜೀವನ ಸಾಗಿಸಲು ನಿರ್ಧಾರ ಮಾಡಿ ಸಮಾಜದ ವಿರುದ್ಧ ಬಂಡು ಹೂಡಿದ ಮಾಯಾ ಸ್ತ್ರೀ ಸಹಜವಾದ ಪ್ರೇಮದ ಪಾಶದಲ್ಲಿ ಸಿಲುಕುವಳು. ತನ್ನ ಇನಿಯನ ಒಲವಿಗೆ ಅಳಾಗಲು ಸಿದ್ಧಳಾಗುವಳು. ಪ್ರೇಮದಲ್ಲಿ ಗೆಲುವೇ ಸೋಲು, ಸೋಲೇ ಗೆಲುವು; ದಾಸ್ಯವೇ ಸ್ವಾತಂತ್ರ್ಯ, ಸ್ವಾತಂತ್ರ್ಯವೇ ದಾಸ್ಯ ಎಂಬುದೊಮ್ಮೆ ಅವಳಿಗೆ ಹೊಳೆಯಿತು. ಆದರೆ ಗಂಡನ ಮನೆತನವು ಹಳೆಯ ಸಂಪ್ರದಾಯದ ಮನೆತನ. ಅವರಿಗೆ ಇವಳ ಸ್ವತಂತ್ರ ವೃತ್ತಿ ಸರಿಬೀಳದು. ಆದುದರಿಂದಅವಳು ಗಂಡನೊಡನೆ ಇರುವದೆಂದರೆ ಆ ಮನೆತನದ ರೂಢಿ, ಸಂಪ್ರದಾಯ, ಹಳೆಯವಿಚಾರ ಎಲ್ಲವನ್ನೂ ಶಿರಸಾವಹಿಸಿ ಗುಲಾಮಗಿರಿಯನ್ನು ಒಪ್ಪಬೇಕಾಗುವದು. ಇದನ್ನು ಒಪ್ಪದೆ ಗಂಡನ ಮನೆಯಲ್ಲಿ ಬಂದು ಹೂಡಿ 'ಅಣ್ಣ'ನ ಮನೆಗೆ ಮರಳಿ ಬರುವ ಪ್ರಸಂಗ ಬರುವದು.

ಗಂಡನ ಚಾಕರಿ ಬಿಟ್ಟು ಅನ್ಯರ ಚಾಕರಿ ಮಾಡಿ, ಅಗತ್ಯವಿಲ್ಲದಾಗಲೂ ಹಣಗಳಿಸಿದರೆ ಅದು ಸ್ವತಂತ್ರ ಜೀವನವೆಂದು ತಿಳಿದು ಸಮಾಜದಲ್ಲಿ ತಾನು ಸ್ವತಂತ್ರಳಾಗಿ ಇರಬಯಸಿದ ಮಾಯೆಗೆ ಮಕ್ಕಳಾಗದಿದ್ದರೂ ಒಂದು ಅನಾಥ ಕೂಸಿನ ತಾಯಿಯಾಗುವ ಪ್ರಸಂಗ ಬಂತು. ಗಂಡನಿರುವಾಗಲೇ ವಿಧವೆ ಎಂದು ಜನರು ಭಾವಿಸುವಂತಾಯಿತು. ಕೆಲವರಂತೂ ಗಂಡನ ಹತ್ತಿರವೇ ಬಂದು ಅವಳನ್ನು ತಮಗೆ ಲಗ್ನ ಮಾಡಿಕೊಡಲು ಕೇಳಹತ್ತುವರು. ಲಗ್ನವಾಗಿ ಎಲ್ಲರಂತೆ ಸಂಸಾರ ನಡೆಸಲು ಒಪ್ಪದ ಸ್ತ್ರೀ ಸ್ವಾತಂತ್ರ್ಯದ ಹುಚ್ಚು ತಲೆಯಲ್ಲಿ ತುಂಬಿಕೊಂಡ ಮಾಯಾ ಎದುರಿಸಬೇಕಾದ ಈ ಪ್ರಸಂಗಗಳನ್ನು ನೋಡಿ ಸ್ತ್ರೀಯು ಅಡಿಗೆ ಮತ್ತು ಮಕ್ಕಳ ಪೋಷಣೆ ಮಾಡುತ್ತ ಗೃಹಿಣಿಯಾಗಿರುವದು ಒಳಿತೋ ಅಥವಾ ಸ್ವತಂತ್ರ ವೃತ್ತಿಯಿಂದ ಮನಬಂದಂತೆ ತಿರುಗಿ ಸಮಾಜದಲ್ಲಿಅವಹೇಳನಕ್ಕೆಗುರಿಯಾಗುವದು ಒಳಿತೋ ಎಂಬ ಪ್ರಶ್ನೆಯನ್ನು ಕಥೆಯ ಕೊನೆಯಲ್ಲಿ ಎತ್ತಿ ತೋರಿಸಲಾಗಿದೆ.

ಅಣ್ಣನ ಪಾತ್ರವು ಹಾಸ್ಯಪೂರಿತವಿದ್ದು ಪ್ರಸಿದ್ಧ ಹಾಸ್ಯ ನಟರಾದ ದಾಮೂ ಅಣ್ಣಾ ಮಾಲವಣಕರರು ಮಾಡಿದ್ದರಿಂದ ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸುವಂತಾಗಿದೆ. ಮಾಯೆಯ ಪಾತ್ರ ವಹಿಸಿದ ಕು. ಶಾಂತಾ ಮೋಡಕ (ಬಿಂಬಾ) ಪಾಶ್ಚಾತ್ಯ ಸ್ವತಂತ್ರ ಸ್ತ್ರೀಯ ಸ್ತ್ರೀಪಾತ್ರವನ್ನು ಚೆನ್ನಾಗಿ ಅಭಿನಯಿಸಿದ್ದಾಳೆ. ... ಅಭಿನಯವಲ್ಲದ್ದಿಲ್ಲ ... ಪೋಷಕವಾಗಿದೆ. ... ಮಗಳಿಗೆ ಅವರ ಪಕ್ಕದವರು ... ವರೆಗೆ ತಮ್ಮ ಮಾಯೆ ... ಹೋದಾಗ ಜನರು ಅವಳನ್ನು ... ನಿಲ್ಲುತ್ತಿದ್ದರು. ... ನೋಡಲು ಬರಹತ್ತಿದರೇ?" ಎಂಬ ... ಅಣ್ಣನ ಮಾತು ನಗಿಸದಿರಲಾರದು. ... ಹಾಸ್ಯದ ಕೊನರು ಇಷ್ಟೇ ಅಲ್ಲ. ... ನೋಡುವಾಗ, ಇಷ್ಟೇನು ... ಹೇಳ (ಮಾಯೆಯ ಗಂಡ) ... ಮುಂದೆ ಮಾಯೆಯ ಪ್ರೇಮ ಭಿಕ್ಷೆಗೆ ... ವಿದ್ಯಾರ್ಥಿಗಳು, ... ಎಲ್ಲರೂ ಬರುವದು, ಸಿನೇಮಾ ... ಮಾಯಾ ಅವರೊಡನೆ ... ಕುಚೇಷ್ಟೆ ಮಾಡಿದ್ದು, ... ಸೀರೆ ಆಭರಣ ಇವರು ಕಳಿಸಿದ್ದು, ... ಫೋನಿನಲ್ಲಿ ತನ್ನ ಸಮಕ್ಷಮ ... ನಿಮ್ಮ ಕಡೆಗೆ ಬರುವೆ ಎಂದು ಹೇಳಿದ್ದು ... ಅವಳನ್ನು ಪುನಃ ತನ್ನ ಮನೆಯಲ್ಲಿಟ್ಟುಕೊಳ್ಳಲು ಒಪ್ಪುವದು ಅಶಕ್ಯ. ಇದು ದುರಂತ ... ದಲ್ಲಿ ಪರಿಣಮಿಸುವಂತೆ ಕಥೆಯ ಓಟ ಸಾಗುವದು. ಆದರೆ ಕೊನೆಯ ... ಮಾಯೆ ಯಾವ ... ನಿರ್ಮಲ ಮೂರ್ತಿ, ಅವಳು ... ತಪ್ಪು ಮಾಡಿದ್ದರೆ ಅದು ತನ್ನ ಪತಿಯ ಮೇಲೆ ನಿಸ್ಸೀಮ ಪ್ರೇಮವಿಟ್ಟಿರುವಳೆಂದು ತಿಳಿದು, ಅವನು ಅಂಥ ಅಗತ್ಯವಿದೆಯೆಂದು ಹೇಳದಿದ್ದರೂ ಅವನ ... ಆರ್ಥಿಕ ದೃಷ್ಟಿಯಿಂದ ಅವಲಂಬಿಸದೆ ತಾನು ಸ್ವತಂತ್ರವಾಗಿ ಗಳಿಸಿ ತನ್ನ ಖಾಸಗಿತನ ಕಾದುಕೊಂಡು ಗಂಡನೊಡನೆ ಸಮರಸವಾದ ಕುಟುಂಬ ಜೀವನಕ್ಕೆ ಒಪ್ಪದೆ ಸ್ತ್ರೀ ಸ್ವಾತಂತ್ರ್ಯದ ಧ್ವಜವನ್ನು ತನ್ನ ಕೃತಿಯಿಂದ ಎತ್ತಿ ಹಿಡಿಯಲು ಪ್ರಯತ್ನಿಸಿದ್ದು. ಈ ಬುದ್ಧಿಯಿಂದ ಪ್ರೇಮದ ಆತ್ಮಸಮರ್ಪಣಾ ಭಾವವನ್ನು ತಿಳಿಯದೆ ವ್ಯಕ್ತಿತ್ವ ಹೀನಳಾಗಿ ದುಃಖಕ್ಕೆ ಗುರಿಯಾದಳು ಎಂದು ಎಲ್ಲರಿಗೂ ಮನವರಿಕೆಯಾಗುವುದು.

ಇದರ ಮೇಲೆ ಹೇಗಾದು ಸ್ಥಿರವಾಗಿ ಗಂಡನನ್ನು ಒಲಿಸಬೇಕಾದರೆ ಅವಳ ... ಸಾಲದು, ಅವರಿಗೆ ತಂದೆತನದ ಹೊಣೆ, ವಾತ್ಸಲ್ಯಗಳು ಹುಟ್ಟುವಂತೆ ನಡೆದುಕೊಂಡರೆ ಮಾತ್ರ ಅವನಿಂದ ನಿಜಪ್ರೇಮವನ್ನು ಪಡೆಯಬಹುದು ಎಂಬುದನ್ನೂ ಗಂಡನು ಹೆಣ್ಣಿಗೆ ತಾಯ್ತನದ ದೀಕ್ಷೆ ಕೊಡಿಸಿದಲ್ಲದೆ ಗೃಹಕೃತ್ಯದಲ್ಲಿ ಆಸಕ್ತಿ ಹುಟ್ಟದು, ಕಾರುಣ್ಯದ ಮತ್ತು ಕಲ್ಪನೆಗಳ ಹುಡುಗಾಟ ಹೋಗಿ ಹೊಣೆ, ಗಂಭೀರಪ್ರೀತಿ ಹುಟ್ಟದು ಎಂಬುದನ್ನು ಚಿತ್ರದಿಂದ ತಿಳಿದುಕೊಳ್ಳಬಹುದಾಗಿದೆ. ತಾಯ್ತನಕ್ಕೆ ಮನೆ ಅಗತ್ಯ. ... ದಿನದ ಈ ಕಾಲಗಳಲ್ಲಿ ತಾಯ್ತನಕ್ಕೆ ಅಗತ್ಯವಾದಷ್ಟು ಕಾಲಬೇಕು ಎಂಬುದನ್ನು ಇಂದಿನ ವಿದ್ಯಾವತಿಯರು ಕಲಿತರೆ ಅವರಿಗೆ ತಮ್ಮ ಸ್ಥಾನಮಾನದ ಅರಿವಾಗುವುದು. ಆದರೂ ಒಟ್ಟಿನ ಮೇಲೆ ಚಿತ್ರಪಟವು ನಗಿಸದಿರಲಾರದು ನಗಿಸುವದು.

ಈ ಚಿತ್ರಪಟವು ಕಳೆದ ಮೂರು ವಾರಗಳಿಂದ ಹುಬ್ಬಳ್ಳಿಯ ಸುದರ್ಶನ ಟಾಕೀಜದಲ್ಲಿ ಪ್ರದರ್ಶಿಸಲ್ಪಡುತಿದೆ ... ಈ ಚಿತ್ರವನ್ನು ನೋಡಲು ... ನೆರೆಯುತ್ತಿರುವರು.

ಕೂಲಿಕಾರರ ಪ್ರಶ್ನೆ

ಮುಂಬಯಿಯಲ್ಲಿ ಸಾಂಕೇತಿಕ ಸಂಪು?

ಜೀವನ ವೆಚ್ಚದ ಏರಿಕೆಯಿಂದಾದ ದುಷ್ಪರಿಣಾಮ

ಜೂಲೈ ತಾ. ೧೧ ಕ್ಕೆ ಮುಂಬಯಿಯಲ್ಲಿ ಸಮಾಜವಾದಿ (ಸೋಶಿಯಲಿಸ್ಟ) ಮತ್ತು ರಾಷ್ಟ್ರೀಯ ಮಜದೂರ ಸಂಘ ಈ ಎರಡು ಪಕ್ಷಗಳು ಮುಂಬಯಿ ಕೂಲಿಕಾರರ ನೇತೃತ್ವಕ್ಕಾಗಿ ಈಗ ಕೆಲ ತಿಂಗಳುಗಳಿಂದ ನಡೆಸಿದ ಸ್ಪರ್ಧೆಯ ಪ್ರಾಥಮಿಕ ಫಲಿತಾಂಶ ಹೊರಬೀಳುವದೆಂದು ಹೇಳಬಹುದು. ಸಮಾಜವಾದಿಗಳು, ಅಂದು ಜವಳಿ ಮತ್ತು ಇತರ ಕೂಲಿಕಾರರು ಒಂದು ದಿನದ ಸಾಂಕೇತಿಕ ಸಂಪು ಹೂಡಬೇಕೆಂದು ಕರೆಕೊಟ್ಟಿದ್ದಾರೆ. ಅದು [illegible] ಮಜದೂರ ಸಂಘದ ನಾಯಕರು ಸಂಪನ್ನು ವಿರೋಧಿಸಿದ್ದಾರೆ. ಮೇಲಾಗಿ ಈ ಸಂಪು ಅಕ್ರಮವೆಂದು ಸಾರಬೇಕೆಂದು ಮುಂಬಯಿ ಸರಕಾರದವರೂ ಔದ್ಯೋಗಿಕ ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದಾರೆ.

× × ×

ತಾ. ೧೧ ಕ್ಕೆ ಸಂಕಲ್ಪಿತರಾಗಿರುವ ಈ ಒಂದು ದಿನದ ಸಾಂಕೇತಿಕ ಸಂಪಿಗೆ ಸಮಾಜವಾದಿಗಳು ತೋರಿಸುವ ನೆವವೆಂದರೆ ಮುಂಬೈ ಗಿರಣಿಗಳಲ್ಲಿ ಬಳಕೆಗೆ ಬರುತ್ತಿರುವ "ಆರು-ಮಗ್ಗದ ಪದ್ಧತಿ" ಈ ಪದ್ಧತಿಯಿಂದ ಕೂಲಿಕಾರರಿಗೆ ಶ್ರಮ ಹೆಚ್ಚಾಗಿ ಅವರ ಆರೋಗ್ಯದ ಮೇಲೆ ದುಷ್ಪರಿಣಾಮವಾಗುವದೆಂದು ಹೇಳಲಾಗಿದೆ. ಈ ಪದ್ಧತಿಯ ವಿರುದ್ಧ "ಪ್ರತಿಭಟನೆ"ಯನ್ನು ಸೂಚಿಸಲು ಸಾಂಕೇತಿಕ ಸಂಪಿನ ಕರೆ ಕೊಡಲಾಗಿದೆ.

ಸಂಪಿನ ವಿರೋಧಿಗಳು ಇದೊಂದು ಸಮಾಜವಾದಿಗಳ "ಡೊಂಬರಾಟ"ವೆಂದು ತೆಗಳುತ್ತಾರೆ. ಏಕೆಂದರೆ ಕಳೆದ ಸೆಪ್ಟೆಂಬರದಲ್ಲಿಯೆ ಈ ಪ್ರಶ್ನೆ ಔದ್ಯೋಗಿಕ ನ್ಯಾಯಾಲಯದ ಮುಂದೆ ಬಂದಿತ್ತು. ಆಗ ನ್ಯಾಯಮೂರ್ತಿ ದಿವಾಟಿಯಾ ಅವರು ಇಡಿ ಪ್ರಕರಣವನ್ನು ಪರಿಶೀಲಿಸಿ, "ನಾಲ್ಕು-ಮಗ್ಗ"ದ ಪದ್ಧತಿಗಿಂತ [illegible] ಪಕ್ಕೆ ಆಧಾರವಾಗಲಿ ಅದರ ವಿರುದ್ಧ ಕೂಲಿಕಾರರ ದೂರಾಗಲಿ ಇದ್ದಂತಿಲ್ಲವೆಂದು ತೀರ್ಪು ಕೊಟ್ಟಿದ್ದರು. ಕೆಲಸದ ಸ್ಥಿತಿಗತಿಯಲ್ಲಿ ಸ್ವಲ್ಪ ಸುಧಾರಣೆಯಾಗಬೇಕೆಂದು ಅವರು ಸೂಚಿಸಿದ್ದರು. ಆ ಸೂಚನೆಗಳನ್ನು ಗಿರಣಿಯೊಡೆಯರು ಪೂರೈಸಿದ್ದರು. ಹೀಗೆ ನ್ಯಾಯಸ್ಥಾನದಲ್ಲಿ ನಿರ್ಣಯವಾದ ಪ್ರಶ್ನೆಯ ಬಗ್ಗೆ ಸಂಪಿನ ಮೂಲಕ ಬಲ ಪ್ರಯೋಗ ಮಾಡುವದು ಒಪ್ಪಂದದ ಭಂಗವೆಂದು ಮಜದೂರ ಕಾಂಗ್ರೆಸ್ಸಿನವರು ಸಾರಿದ್ದಾರೆ.

ಈ ಸಂಪು ನಡೆಯದಂತೆ ನೋಡಿಕೊಳ್ಳಬೇಕೆಂದು ಮಜದೂರ ಕಾಂಗ್ರೆಸ್ಸು ಹಟ ತೊಟ್ಟಿದೆಯೆಂಬಲ್ಲಿ ಸಂಶಯವಿಲ್ಲ. ಈ ಬಗ್ಗೆ ಕೂಡಿದ ಸಭೆಯಲ್ಲಿ ಮುಂಬಯಿ ಪ್ರಾಂತಿಕ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಕೆ. ಪಾಟೀಲರು ಭಾಷಣ ಮಾಡಿ ಸಂಪಿನ ಆಯುಧವನ್ನು ಹೀಗೆ ಹಗುರಾಗಿ ಉಪಯೋಗಿಸುವದು ಕೂಲಿಕಾರರ ಹಿತಕ್ಕೆ ವಿಘಾತಕವಾಗಿದೆಯೆಂದರು. ಈ ಸಂಬಂಧದಲ್ಲಿ ಸಮಾಜವಾದಿಗಳು ನೆರೆಸಬಯಸಿದ ಸಭೆಯನ್ನು ಮುಂಬಯಿ ಪೋಲೀಸರು ಪ್ರತಿಬಂಧಿಸಿದ್ದಾರೆ.

ಜೀವನ ವೆಚ್ಚ ಏರಿದೆ

ಸಮಾಜವಾದಿಗಳು ಮುಂದಾಳತನಕ್ಕೆ [illegible] ಈ "ಕಲ್ಪಿತ" [illegible] ಎತ್ತಿಕೊಂಡು ಸಂಪಿಗೆ ಪ್ರೇರಣೆ [illegible] ನಿಜವಾಗಿರಬಹುದು. ಆದರೆ ಅವರು ಇದಕ್ಕಾಗಿ ಒಳ್ಳೆಯ ಸಮಯವನ್ನಾರಿಸಿದ್ದಾರೆಂಬಲ್ಲಿ ಸಂಶಯವೇ ಇಲ್ಲ. ಮುಂಬಯಿ ನಗರದಲ್ಲಿ ಮಾತ್ರವೇ ಅಲ್ಲ, ದೇಶದ ಎಲ್ಲ [illegible] ಔದ್ಯೋಗಿಕ ಕೇಂದ್ರಗಳಲ್ಲಿಯೂ ಇಂದು ಅಸಂತೋಷ ಹಬ್ಬಿದೆ. ಜೀವನದ ವೆಚ್ಚ ಈಚೆಗೆ ಅತಿಶಯವಾಗಿ ಬೆಳೆದುದೇ ಇದಕ್ಕೆ ಕಾರಣ. ಅದಿಂದು ಹಿಂದೆಂದಿಗಿಂತಲೂ ಹೆಚ್ಚಾಗಿದೆ. ಕೂಲಿಕಾರ ಜೀವನ ವೆಚ್ಚದ ಅಂಕಿ ಕಳೆದ ತಿಂಗಳು ಮುಂಬಯಿಯಲ್ಲಿ [illegible] ಕ್ಕೇರಿತು. ನಿತ್ಯೋಪಯೋಗಿ ವಸ್ತುಗಳಲ್ಲಂತೂ ಏರಿಕೆ ಇನ್ನೂ ಹೆಚ್ಚಾಗಿದೆ. ಆಹಾರ ವಸ್ತುಗಳ ಬೆಲೆ ಮತಿ [illegible]

[illegible] ತುಟ್ಟಿಭತ್ತೆಯ ಪ್ರಮಾಣಗಳನ್ನು ನಿರ್ಧರಿಸಿದಾಗ ಜೀವನದ [illegible] ಕಡಿಮೆಯಾಗಿತ್ತು. ಈ ಪ್ರಶ್ನೆ [illegible] ಯಲ್ಲಿ ಸಮಾಜವಾದಿಗಳು [illegible] ದಂತ ಸಾಂಕೇತಿಕ ಸಂಪಿಗೆ ಕೂಲಿಕಾರರ ಸಹಾನುಭೂತಿ ಸಿಗುವ ಸಂಭವವೂ ಇದೆ. ಜೀವನದ ವೆಚ್ಚವನ್ನು ಇಳಿಸಲು ಸರಕಾರ ತೀಕ್ಷ್ಣ ಕ್ರಮಗಳನ್ನು ಕೈಕೊಳ್ಳದಿದ್ದರೆ ದೇಶದಲ್ಲಿ ದೊಡ್ಡ ಪ್ರಮಾಣದಲ್ಲಿ ಸಂಪುಗಳಾಗುವ ಭಯವಿದೆ.

ಮಲಯದಲ್ಲಿ ನಮ್ಮ ಧೋರಣೆಯ ಲೋಪದೋಷಗಳು

ಮಲಯದಲ್ಲಿ ಹೆಚ್ಚು ಕಡಿಮೆ ಏಳೂವರೆ ಲಕ್ಷ ಹಿಂದೀಯರಿದ್ದಾರೆ. ಅಲ್ಲಿಂದ ಉಗ್ರರೂಪದ "ಕಮ್ಯುನಿಸ್ಟ ಚಳವಳಿ"ಯೆಂದು ಹೇಳಲಾದ ಕಲಹ ನಡೆದಿದೆ. ಅದನ್ನು ನಿರ್ದಯದಿಂದ ಹತ್ತಿಕ್ಕೆಯೂ ಹತ್ತಿಕ್ಕಲಾಗುತಿವೆ. ಈ ಸ್ಥಿತಿಯಲ್ಲಿ ಅಲ್ಲಿರುವ ಹಿಂದೀ ಅಲ್ಪಸಂಖ್ಯಾಕರ ಅವಸ್ಥೆಯೇನು? ಮಲಯದಲ್ಲಿ ಹಿಂದೀ ಪ್ರತಿನಿಧಿಯೂ ಒಬ್ಬನಿದ್ದಾನೆ. ಅಲ್ಲಿ ಒಂದು ಹಿಂದೀ ಕಾಂಗ್ರೆಸ್ಸು ಇದೆ. ಇವರ ಮೂಲಕ ನಾವು ಅನುಸರಿಸುತಿರುವ ಮಲಯನ್ ಧೋರಣೆ ಹಿಂದೀ ಅಲ್ಪಸಂಖ್ಯಾಕರಿಗೂ ನಮ್ಮ ರಾಷ್ಟ್ರಕ್ಕೂ ಎಷ್ಟು ಹಿತಕಾರಿಯಾಗಿದೆ? ಈ ಎಲ್ಲ ಮಾತುಗಳನ್ನು ನಾವು ವಿಚಾರಿಸುವದು ಅವಶ್ಯ.

ಮಲಯದ ಹಿಂದೀಯರಲ್ಲಿ ಎರಡು ವರ್ಗಗಳು: ಶ್ರೀಮಂತ ಸಾವುಕಾರರ ಅಲ್ಪಸಂಖ್ಯ ಗುಂಪು ಮತ್ತು ಬಡ ಕೂಲಿಕಾರರ ಬಹುಸಂಖ್ಯ ರಾಶಿ. ಬಹುಸಂಖ್ಯರಾದ ಕೂಲಿಕಾರರು ಎಷ್ಟೋ ಪೀಳಿಗೆಗಳಿಂದ ಮಲಯಕ್ಕೆ ಹೋದವರು. ಅವರು ಹಿಂದೆ ಬಂದು ಈ ದೇಶದಲ್ಲಿ ನೆಲಸುವರೆಂಬುದು ಕಲ್ಪನಾತೀತ ಆದುದರಿಂದ ಅವರ ಹಿತ ಏತರಲ್ಲಿದೆಯೆಂಬುದು ಬೆಳಕಿನಷ್ಟು ಸ್ಪಷ್ಟವಾಗಿದೆ. ಮಲಯದಲ್ಲಿ ಬಹುಸಂಖ್ಯರಾದ ಚೀನೀಯರೊಡನೆಯೂ ಮಲಯಿಗರೊಡನೆಯೂ ಸಮರಸರಾಗಿ ಸ್ನೇಹದಿಂದ ಬಾಳುವದರಲ್ಲೆ ಅವರಹಿತ ಅಡಕವಾಗಿದೆ.

ಆದರೆ ನಾವೇನು ಮಾಡುತ್ತಿದ್ದೇವೆ?

ನಾವು ಮಲಯದ ಹಿಂದೀಯರಿಗೆ ಉಭಯ ರಾಷ್ಟ್ರಗಳ–ಅಂದರೆ ಭಾರತ ಮತ್ತು ಮಲಯದ ಪ್ರಜೆಯ ದರ್ಜೆಯನ್ನು ಕೊಡಿಸಹೊರಟಿದ್ದೇವೆ. ಮಲಯದಲ್ಲಿಯೆ ಹುಟ್ಟಿ ಬೆಳೆದ ಮತ್ತು ಸ್ವದೇಶಕ್ಕೆ ಮರಳಿ ಬಂದು ನೆಲಸುವ ವಿಚಾರವೇ ಇಲ್ಲದ ಅಲ್ಪ ಸಂಖ್ಯಾಕರರು ತಮ್ಮ ಮೂಲ ಮಾತೃಭೂಮಿಯಲ್ಲೊಂದು ಕಾಲು, ಸದ್ಯದ ಮಾತೃಭೂಮಿಯಲ್ಲೊಂದು ಕಾಲು ಇಟ್ಟು ನಿಂತರೆ ಮಲಯ ದೇಶೀಯರು ಅವರನ್ನು ಹೇಗೆ ವಿಶ್ವಾಸದಿಂದ ಕಂಡಾರು? ಭಾರತದ ಮುಸ್ಲಿಮರು ಒಡನೆಯೆ ಪಾಕಿಸ್ತಾನದ ಅಥವಾ ಅರಬಸ್ತಾನದ ನಾಗರಿಕರೂ ಆಗಿರಬಯಸಿದರೆ ಭಾರತೀಯರು ಏನೆಂದುಕೊಂಡಾರೋ ಅದನ್ನೇ ಮಲಯವಾಸಿಗಳೂ ಅಂದುಕೊಳ್ಳರೆ.?

ದ್ವೇಷಪಾತ್ರ ಚೆಟ್ಟಿಯಾರರು

ಭಾರತೀಯರ ಮೇಲಿನ ಸಂಶಯಕ್ಕೆ ಪುಟ ಕೊಡುವ ಇತರ ವಿದ್ಯಮಾನಗಳೂ ಮಲಯದಲ್ಲಿವೆ. ಅವು ಹಿಂದೀ ಜನತೆಯ ಇನ್ನೊಂದು ವರ್ಗದಿಂದ ಉದ್ಭವಿಸಿದವು. ಮಲಯದಲ್ಲಿರುವ ಹಿಂದೀ ವ್ಯಾಪಾರಿಗಳಿಗಿಂತ ಜನರ ದ್ವೇಷಕ್ಕೆ ಪಾತ್ರವಾದ ಇನ್ನೊಂದು ಗುಂಪು ಮಲಯದಲ್ಲಿ ಇಲ್ಲವೇ ಇಲ್ಲ. ದಕ್ಷಿಣ ಭಾರತದ ಚೆಟ್ಟಿಯಾರ ಲಕ್ಷಾಧೀಶರು ಮಲಯದ ಪ್ರಜೆಗಳ ರಕ್ತವನ್ನೇ ಹೀರಿದ್ದಾರೆನ್ನಬಹುದು. ಅಸಾಧ್ಯ ಬಡ್ಡಿಯಿಂದ ಸಾಲ ಕೊಟ್ಟು, ಮಂದಿಯ ಮನೆಮಾರು ಕಸಿದುಕೊಂಡು, ಜವಳಿ ಮೊದಲಾದ ವಸ್ತುಗಳ ವ್ಯಾಪಾರದಲ್ಲಿ ಎಣಿಸಲಾರದಷ್ಟು ಲಾಭ ಮಾಡಿ ಅವರು ಜನತೆಯ ಕ್ರೋಧಕ್ಕೊಳಗಾಗಿದ್ದಾರೆ.

ಇವರೀಗ ಮಲಯದಲ್ಲಿ ಹಿಂದೀಯರಿಗೆ ಉಭಯ ರಾಷ್ಟ್ರೀಯತ್ವ ಬೇಕೆನ್ನುವವರು. ಮಲಯನ್ ಹಿಂದೀ ಕಾಂಗ್ರೆಸ್ಸಿನ ಬೆಂಬಲಿಗರೆಂದರೆ ಇವರೆ. ಮಲಯವಿಂದು ಬ್ರಿಟಿಶ ಸಾಮ್ರಾಜ್ಯವಾದಿಗಳ ವಿರುದ್ಧ ಹೋರಾಟ ಹೂಡಿದೆಯೆಂಬವನ್ನು ನಾವು ಮರೆಯತಕ್ಕದ್ದಲ್ಲ. "ಈ ಹೋರಾಟ ಮಲಯವಾಸಿಗಳ ಕೆಲಸ, ನಾವು ಹಿಂದಿಯರು ನಮ್ಮ ಹಕ್ಕುಬಾಧ್ಯತೆಗಳನ್ನಷ್ಟು [illegible] ಎಂಬುದು ಮಲಯ ಹಿಂದೀ ಕಾಂಗ್ರೆಸ್ಸಿನ ಧೋರಣೆಯ ಗಾಳಿಯಷ್ಟು. ಹಿಂದುಸ್ತಾನದ ಮುಸ್ಲಿಂ ಲೀಗಿನ ಧೋರಣೆಯ ನಾತಕ್ಕೂ ಇದಕ್ಕೂ ಬಹಳ ಸಮೀಪದ ಬಾಂಧವ್ಯವಿದ್ದಂತೆ ಅನಿಸುವದಿಲ್ಲವೆ? ನಾಗರಿಕರಾಗಿಯಾರು ತಮ್ಮ ಧೋರಣೆಯನ್ನು ಪೂರೈಸದೆ ಅಡ್ಡಗೋಡೆಯ ಮೇಲೆ ಕೂತಿರುವರೋ ಅವರ ಹಕ್ಕುಗಳನ್ನು ಮೃಗಗಳೂ ಮನ್ನಿಸವು, ಪಕ್ಷಿಗಳೂ ಮನ್ನಿಸವು.

ಆದರೂ ಹಿಂದುಸ್ತಾನ ಸರಕಾರ ಮಲಯದಲ್ಲಿ ವಹಿಸಿದ ಧೋರಣೆ ಇದೇ. ಮಲಯದಲ್ಲಿ ಭಾರತೀಯ ಪ್ರತಿನಿಧಿಯಾಗಿ ನಾವು ಇಲ್ಲಿಯವನೊಬ್ಬನನ್ನು, ನೇಮಿಸದೆ, ಮಲಯದ ಒಬ್ಬ ಹಿಂದೀಯನನ್ನು, ಅದೂ ಮಲಯ ಹಿಂದೀ ಕಾಂಗ್ರೆಸ್ಸಿನ ಸ್ಥಾಪಕನನ್ನು, ನೇಮಿಸಿದ್ದೇವೆ. ಮತ್ತು ಅಲ್ಲಿ ಅವನು ದ್ವೇಷಪಾತ್ರರಾದ ಚೆಟ್ಟಿಯಾರರ ಪ್ರತಿಗಾಮಿ ಹಿತಸಂಬಂಧಗಳನ್ನು ಕಾಯ್ದುಕೊಳ್ಳುವದರಲ್ಲಿ ಬ್ರಿಟಿಶ ಸಾಮ್ರಾಜ್ಯವಾದಿಗಳೊಡನೆ ಸಹಕರಿಸುವದೇ ಭಾರತದ ಹಿತರಕ್ಷಣೆಯೆಂದು ತಿಳಿದುಕೊಂಡಂತಿದೆ.

ಸಮಸ್ಯೆ ಬೇರೆ ರೂಪದ್ದು

ಮಲಯದಲ್ಲಿರುವ ಹಿಂದೀ ಅಲ್ಪ ಸಂಖ್ಯಾಕರ ಸಮಸ್ಯೆ ಬಂಡವಳದ ದೋಷಾಸನದ್ದಕ್ಕಿಂತ ಭಿನ್ನವಾದುದು. ಬಹುಸಂಖ್ಯ ಬಡ ಹಿಂದೀ ಕೂಲಿಕಾರರು ಚೀನಿ ಅಥವಾ ಮಲಯಿ ಕೂಲಿಕಾರರಿಗಿಂತ ಕೀಳ್ತರಗತಿಯಲ್ಲಿದ್ದಾರೆ. ಅವರಲ್ಲಿ ಸಂಘಟನೆಯಿಲ್ಲದ್ದರಿಂದ ಅವರಿಗೆ ಚೀನಿ ಇಲ್ಲವೆ ಮಲಯಿ ಕೂಲಿಕಾರರಿಗಿಂತ ಕಡಿಮೆ ಸಂಬಳ ಬರುತ್ತದೆ. ಚೀನೀಯರು ಮಲಯದಲ್ಲಿ ಬಹುಸಂಖ್ಯಾಕರು. ಅವರು ಅದನ್ನು ಚೀನದ ಒಂದು ಪ್ರಾಂತವನ್ನಾಗಿ ಮಾಡಬೇಕೆಂಬ ಹವಣಿಕೆಯಲ್ಲಿದ್ದಾರೆ. ಹಿಂದೀಯರನ್ನು ಮಲಯದಿಂದ ಉಚ್ಚಾಟನೆ ಮಾಡಿದರೆ ತಮ್ಮ ಪ್ರಾಬಲ್ಯಕ್ಕೆ ಒಳಿತೆಂದು ಚೀನಿ ಕಮ್ಯುನಿಸ್ಟರು ಹಿಂದೀ ಕೂಲಿಕಾರರನ್ನು ಸಂಪು ಹೂಡಲು ಪ್ರೇರಿಸಿ, ಆ ಮೇಲೆ ಅವರ ಸ್ಥಾನದಲ್ಲಿ ಚೀನಿಯರನ್ನು ಹೊಗಿಸುವರು. ವಿಚಿತ್ರವೆಂದರೆ, ನಮ್ಮ ಚೆಟ್ಟಿಯಾರರಿಗೂ ಇದೆ ಬೇಕಾಗಿದೆ. ಈ ಕೂಲಿಕಾರರು ಕೆಲಸವಿಲ್ಲದೆ ಸ್ವದೇಶಕ್ಕೆ ಮರಳಿದರೆ ಚೆಟ್ಟಿಯಾರರ ಹಿಂದುಸ್ತಾನದಲ್ಲಿರುವ ಆಸ್ತಿಗಳಿಗೆ ಅಗ್ಗದ ಕೂಲಿಕಾರರು ದೊರೆಯುವರೆಂದು ಅವರು ಗಣಿತ ಹಾಕುವವರು.

ಈ ಸ್ಥಿತಿಯಲ್ಲಿ ಮಲಯದ ಬಹುಸಂಖ್ಯ ಹಿಂದೀಯರ ಹಿತ ಉಭಯ ರಾಷ್ಟ್ರೀಯತ್ವದಲ್ಲಿದೆಯೊ? ಅಥವಾ ಸ್ಥಳೀಯ ಜನರೊಡನೆ ಹೊಂದಿಕೊಂಡು ಹೋಗುವದರಲ್ಲಿದೆಯೊ? ಸದ್ಯದ ಧೋರಣೆಯನ್ನೆ ನಾವು ಮುಂದುವರಿಸಿದರೆ ಮತ್ತು ಅದಕ್ಕೆ ಮಲಯಿ ಹಿಂದೀಯರ ಬೆಂಬಲ ದೊರೆತರೆ ಬಡ ಹಿಂದೀಯರೂ ಚೆಟ್ಟಿಯಾರರಂತೆ ದ್ವೇಷಪಾತ್ರರಾಗಬೇಕಾಗುವದು.

ನಮ್ಮ ನಿಜವಾದ ಹಿತ

ಆದರೆ ಭಾರತದ ರಾಷ್ಟ್ರೀಯ ಹಿತ ಇವೆರಡು ವರ್ಗಗಳ ಹಿತದಾಚೆಗೆ ಇದೆ. ಮಲಯದ ದಕ್ಷಿಣ ತುದಿಯಾದ ಸಿಂಗಾಪೂರವನ್ನು ಸಾಮ್ರಾಜ್ಯವಾದಿ ಬ್ರಿಟನ್ನು ಅತ್ಯಂತ ಪ್ರಬಲವಾದ ನೌಕಾ ಕೇಂದ್ರವನ್ನಾಗಿ ಸಜ್ಜುಗೊಳಿಸುತಿದೆ. ಇದಕ್ಕಾಗಿಯೆ ಸಿಂಗಾಪುರವನ್ನು ಉಳಿದ ಮಲಯದಿಂದ ಪ್ರತ್ಯೇಕಿಸಲಾಗಿದೆ. ಸಿಂಗಾಪುರದಿಂದ ಭಾರತಕ್ಕೆ ಬರಿ ಸಾವಿರ ಮೈಲು. ಇಡಿ ಮಲಯದಲ್ಲಿ ಪ್ರಜಾತಂತ್ರವನ್ನು ಸ್ಥಾಪಿಸುವ ಬದಲು ಯಾರಿಗೂ ಬೇಡವಾದ ಸುಲ್ತಾನರ ಸಂಯುಕ್ತ ರಾಜ್ಯವನ್ನು ಸ್ಥಾಪಿಸಲಾಗಿದೆ. ಹೀಗೆ ಮಲಯದಲ್ಲಿ ಸಾಮ್ರಾಜ್ಯವಾದಿ ಶಕ್ತಿಗಳು ತಮ್ಮ ಬಲವನ್ನು ಹೆಚ್ಚಿಸುತಿರುವದು ಎಲ್ಲ ಏಶಿಯದ ರಾಷ್ಟ್ರಗಳಿಗೂ ಘಾತಕವೇ ಸೈ. ನಮ್ಮ ಸುರಕ್ಷಿತತೆಗೂ ಗಂಡಾಂತರವೆ. ನಾವು ಇದಕ್ಕೆ ಪ್ರೋತ್ಸಾಹ ಕೊಡುವ ಧೋರಣವನ್ನವಲಂಬಿಸಿದರೆ ಇಲ್ಲವೆ ಬ್ರಿಟಿಶ ಹಿತಸಂಬಂಧದೊಡನೆ ತಾದಾತ್ಮ್ಯ ಹೊಂದಿರುವ ಹಿಂದೀ ಹಿತಸಂಬಂಧಗಳಿಗೆ ಬೆಂಬಲ ನಿಂತರೆ ಆಗ ನಮ್ಮ ಸುರಕ್ಷಿತತೆಗೇ ನಾವು ಅಪಾಯವನ್ನುಂಟುಮಾಡಿಕೊಂಡಂತೆ, ಮಾತ್ರವಲ್ಲ, ಸ್ವಾತಂತ್ರ್ಯಾಪೇಕ್ಷಿ ಮಲಯಿಗರ ಕ್ರೋಧಕ್ಕೂ ಗುರಿಯಾಗುವಂತೆ. ದೂರದೃಷ್ಟಿಯಿಂದ ನೋಡಿದರೆ, ಚೆಟ್ಟಿಯಾರರ ಕೋಟ್ಯಂತರ ಬಂಡವಳವೂ ಅಲ್ಲ, ಏಳೂವರೆ ಲಕ್ಷ ಹಿಂದೀ ಜನಾಂಗದ "ಹಕ್ಕುಬಾಧ್ಯತೆ"ಗಳ ಭ[illegible]ಯೂ ಅಲ್ಲ, ಆದರೆ ಮಲಯಿ ಪ್ರಜಾಗಣದ ಎಲ್ಲ ಗುಂಪುಗಳ [illegible] ಭಾರತಕ್ಕೆ ಎಲ್ಲಕ್ಕೂ ಮಹತ್ವದ್ದು [illegible] ನಮ್ಮ ಈಗಿನ ಧೋರಣ ಚೆಟ್ಟಿಯಾರರಿಗಲ್ಲದೆ ನಮಗೂ ಬಡ ಮಲಯಿ ಹಿಂದೀಯರಿಗೂ [illegible] ವಲ್ಲ.

ಅಲೆಗ್ಸಾಂಡ್ರಿಯದಲ್ಲಿ [illegible] ಜುಲೈ [illegible] ರಾತ್ರಿ [illegible] ಎಚ್ಚರಿಕೆ ಕೊಡಲಾಗಿತ್ತು. [illegible] ಸುವ ಬಂದೂಕುಗಳ ಗರ್ಜನೆ [illegible] ಕೇಳಿಸುತ್ತಿತ್ತು.

ಕರ್ನಾಟಕ

ಧಾರವಾಡ

ಹೊಲದ ಒಡೆಯರ ಇಲ್ಲವೆ ಸಾಲುವಾಡು ವವರ ಉತ್ಪನ್ನವು ತಿಂಗಳಿಗೆ ೫೦ ರೂ. ಮಿಕ್ಕ ದಿದ್ದರೆ ಮಾತ್ರ ಅವರಿಗೆ ಅಗ್ಗದರದ ಅಂಗಡಿಗಳಲ್ಲಿ ಕಾಳು ಕೊಡಬೇಕೆಂದು ಸರಕಾರದವರು ನಿರ್ಧರಿಸಿರುವರೆಂದು ಧಾರವಾಡ ಜಿಲ್ಲಾ ಕಲೆಕ್ಟರರು ಪತ್ರಕಾರರ ಸಭೆಯಲ್ಲಿ ಹೇಳಿದರು. ಒಂದೇ ತರದ ಕಾಳು ಬೆಳೆದವರು ಸರಕಾರಕ್ಕೆ ಅವನ್ನು ಮಾರಿದರೆ ಬೇರೆ ಕಾಳುಕೊಡುವ ವ್ಯವಸ್ಥೆಯನ್ನು ಮಾಡುವದಾಗಿಯೂ ಅವರು ಹೇಳಿದರು.

ಅಳಣಾವರದ ಮುಸಲ್ಮಾನ ಸಮಾಜದ ಮುಂದಾಳುಗಳಾದ ಶ್ರೀ ಅಬ್ದುಲ್ಲಾ ಸಾಹೇಬ ತಿತ್ತೂರ ಫಾರೆಸ್ಟ ಕಂಟ್ರಾಕ್ಟರ ಅವರು ತಮ್ಮ ೫೨ ನೇ ವಯಸ್ಸಿನಲ್ಲಿ ೨ ನೇ ತಾರೀಕು ಮರಣ ಹೊಂದಿದರು.

ಮಹಾಂತಪ್ಪಾ ಶೆಟ್ಟರ ಎಂಬ ಗಜೇಂದ್ರಗಡದಲ್ಲಿಯ ಚಹಾದಂಗಡಿಯವರು ಹರಿಜನರನ್ನು ಒಳಗೆ ಬಿಡಲಿಲ್ಲೆಂಬ ಬಗ್ಗೆ ಖಟ್ಲೆಗೆ ಗುರಿಯಾಗಿದ್ದರು. ಅವರಿಗೆ ಮ್ಯಾಜಿಸ್ಟ್ರೇಟರು ಹತ್ತು ರೂಪಾಯಿ ದಂಡ ವಿಧಿಸಿದರು.

ಧಾರವಾಡದಲ್ಲಿ ಕರ್ನಾಟಕ ಕಾಲೇಜಿನ ಸಮೀಪದಲ್ಲಿ ಶ್ರೀ ಮೊಖಾಶಿಯವರ ಬಂಗಲೆಯ ಕಂಟಿಯಲ್ಲಿ ಹನುಮಂತ ತುಕಾರಾಮ ಪಾಢ ಎಂಬವರಿಗೆ ೯೫೦೨ ರೂ. ನೋಟು ಮತ್ತು ಕೆಲವು ಚಿಲ್ಲರು ಇದ್ದ ಒಂದು ಪಾಕೀಟು ದೊರೆತಿದ್ದು ಅವರು ಅದನ್ನು ಪೋಲೀಸರಿಗೆ ಕೊಟ್ಟಿರುವರು.

ಅಮೇರಿಕೆಯ ಅರಳೆ ಧಾರಣಿಯು ೬. ೭. ಆಡುತ್ತಿದ್ದ ೧೬ ಜನರನ್ನು ೧೫೭ ರೂಪಾಯಿಗಳ ಸಹಿತ ಧಾರವಾಡ ನಗರ ಫೌಜದಾರರು ಸಹಕಾರಿಗಳೊಂದಿಗೆ ಸೆರೆಹಿಡಿದರು.

ಹುಬ್ಬಳ್ಳಿ ರೇಲ್ವೆ ಕೆಲಸಗಾರ ಸಂಘದ ವಾರ್ಷಿಕ ಅಧಿವೇಶನದ ಉದ್ಘಾಟನ ಸಮಾರಂಭವನ್ನು ಶ್ರೀ ದಿವಾಕರ ರಂಗರಾಯರು ಜರುಗಿಸಿದರು. ಆಗ ಅವರು ಜಾತ್ಯತೀತ, ವರ್ಗರಹಿತ ಸಮಾಜ ನಿರ್ಮಾಣಕ್ಕಾಗಿ ಪ್ರಜಾಪ್ರಭುತ್ವ ರಾಜ್ಯಸ್ಥಾಪನೆಗಾಗಿ ಕೆಲಸಗಾರರು ಹೆಣಗಬೇಕು ಎಂದು ಉಪದೇಶಿಸಿದರು. ಸಂಘಕ್ಕೆ ಶ್ರೀ ಶಂಭುರಾವ ಜೋಶಿ ವಕೀಲರು ಅಧ್ಯಕ್ಷರು, ಎ. ಎಸ್. ನಾರಾಯಣರು ಕಾರ್ಯದರ್ಶಿಗಳಾದರು.

ಶ್ರೀ ರುಕ್ಮಾಂಗದರಾವ ದೇಶಪಾಂಡೆಯವರು ಮುಂಬಯಿ (ಮೊಫ್ಯುಸಿಲ) ಭಾಗದ ಇನ್ಕಮ್ ಟ್ಯಾಕ್ಸ ಕಮೀಶನರರ ಪರ್ಸನಲ್ ಅಸಿಸ್ಟಂಟರಾಗಿ ನೇಮಿಸಲ್ಪಟ್ಟಿರುವರು.

ವಿಜಾಪುರ

ಸಿಂದಗಿಯಲ್ಲಿ ನಿಜಾಮ ಗುಪ್ತಚಾರರೆಂಬ ಸಂಶಯದಿಂದ ಕಳೆದ ರವಿವಾರ ದಿನ ಮೂವರು ಹಾಗು ಸೋಮವಾರ ದಿನ ಇಬ್ಬರು ಹೀಗೆ ೫ ಜನರು ಬಂಧಿಸಲ್ಪಟ್ಟಿದ್ದಾರೆ. ಮೂವರ ಹತ್ತರ ಕುದುರೆಗಳಿದ್ದವು.

ವಿಜಾಪುರ ಜಿಲ್ಲೆಯ ಬಹು ಭಾಗದಲ್ಲಿ ಮಳೆ ಸಾಕಷ್ಟು ಆಗಿರುವದಿಲ್ಲ. ಕೆಲ ಕಡೆ ಬಿತ್ತುವ ಹಸಿ ಮಳೆಯಾಗಿ ಬಿತ್ತನೆಯಾಗಿದ್ದರೂ ಹಿಂದು ಗಡೆ ಮಳೆಯಿಲ್ಲದ್ದರಿಂದ ಬೆಳೆ ಒಣಗಹತ್ತಿವೆ. ಮಳೆ ಆಗದೆ ಇದ್ದ ಸ್ಥಳಗಳಲ್ಲಿ ಬಿತ್ತನೆಯೇ ಆಗಿಲ್ಲ. ಇದರಿಂದ ಪಶುಗಳಿಗೂ ಮೇವು ಇಲ್ಲದಾಗಿದೆ.

ಬದಾಮಿ ತಾಲೂಕ ಕಾಂಗ್ರೆಸ ಸಮಿತಿಯ ಕಾರ್ಯಕಾರೀ ಮಂಡಳದ ಆಯ್ಕೆಯ ಸಂಬಂಧದಲ್ಲಿ ಮತಭೇದವಾಗಿದ್ದು ಅದರಿಂದ ತಾಲೂಕಿನ ಗೌರವಕ್ಕೆ ಕುಂದುಂಟಾಗುತಿದೆ. ಇದೆಲ್ಲ ನ್ಯಾಯವಾಗಿ ಎಲ್ಲರೂ ಸಕಾಲಕ್ಕೆ ಪರಿವರ್ತನ ಹೊಂದದಿದ್ದರೆ ಇದೇ ೬ ನೇ ತಾರೀಕಿನಿಂದ ಉಪವಾಸ ಪ್ರಾರಂಭಿಸುವದಾಗಿ ಶ್ರೀ ಶಿವಲಿಂಗಯ್ಯ ಗಣಾಚಾರಿ ಇವರು ಪ್ರಕಟನೆ ಹೊರಡಿಸಿದ್ದಾರೆ.

ಬೆಳಗಾವಿ

ಅಮೇರಿಕೆಯ ಪ್ರೆಸ್‌ಬಿಟೇರಿಯನ್ ಚರ್ಚದ ವಿದೇಶ ಮಿಶನರಿಗಳ ಶಿಷ್ಟ ಮಂಡಳ ವೊಂದು ಇದೇ ಆಗಸ್ಟ ೧೭ ನೇ ತಾರೀಕಿನಿಂದ ಹಿಂದುಸ್ತಾನದಲ್ಲಿ ಸಂಚರಿಸಲಿದೆ. ಈ ಶಿಷ್ಟ ಮಂಡಳವು ಹಿಂದುಸ್ತಾನದ ಸುಮಾರು ೧೫ ಪ್ರಮುಖ ನಗರಗಳನ್ನು ಸಂದರ್ಶಿಸಲಿರುವದು.

ದಕ್ಷಿಣ ಕನ್ನಡ

ಪುತ್ತೂರು ತಾಲೂಕಿನ ಕಾಡುಮನೆ ಕೆಲಸಗಾರರ ಶಾಲೆಯಲ್ಲಿ ಜರುಗಿದ ಹರಿಜನರ ಸಭೆಯೊಂದರಲ್ಲಿ ೧) ಸರಕಾರವು ಹರಿಜನರಿಗೆ ವಸತಿಗೃಹಕ್ಕೆ ಅವಕಾಶವೀಯಬೇಕು. ೨) ಕಾಡುಮನೆಯ ಆಸುಪಾಸಿನ ಹರಿಜನರಿಗಾಗಿ ಕಾಡುಮನೆ ಲೇಬರ್ ಶಾಲೆಯಲ್ಲಿ ಒಂದು ಸಹಕಾರಿ ಸಂಘವನ್ನು ತೆರೆಯಬೇಕು. ೩) ೧೯೪೭ ನೇ ಇಸವಿಯ ಸಾಮಾಜಿಕ ನಿರ್ಬಂಧ ನಿವಾರಣೆಯ ಕಾನೂನಿನನ್ವಯ ಹರಿಜನರಿಗೆ ಹೊಟೇಲಲ್ಲಿ ಕಾಫಿ ತಿಂಡಿ ಕೊಡಬೇಕಾದರೂ ಇಲ್ಲಿನ ಹೊಟೇಲುಗಳು ನಿರಾಕರಿಸಿದ್ದನ್ನು ಸರಕಾರಕ್ಕೆ ತಿಳಿಸುವದು ಮುಂತಾದ ಠರಾವುಗಳು ಮಾನ್ಯವಾದವು. ಅಂದಿನ ಸಭೆಗೆ ಶ್ರೀ ಕೆ. ತನಿಯಪ್ಪನವರು ಅಧ್ಯಕ್ಷರಾಗಿದ್ದರು.

ಬೈಲೂರು ಸೇವಾದಳದ ಸಭೆಯು ಜರುಗಿದಾಗ 'ಬೋನಸ್ಸು ಕೂಪನ್'ಗಳದ್ದರೂ ರೈತರಿಗೆ, "ಡಿಪೋ" ದುರುಪಯೋಗಪಡಿಸಲ್ಪಟ್ಟಿದ್ದರಿಂದ ಯಾವ ರೀತಿಯ ಪ್ರಯೋಜನವಾಗದ್ದರಿಂದ ರೈತರು ನಿರಾಶೆಗೊಂಡಿದ್ದಾರೆಂದೂ ಆ ಪ್ರಯುಕ್ತ ಸಂಬಂಧಪಟ್ಟ ಅಧಿಕಾರಿಗಳು ತಕ್ಕ ವ್ಯವಸ್ಥೆ ಮಾಡಬೇಕೆಂದೂ ತೀರ್ಮಾನವಾಯಿತು.

ಕುಲಶೇಖರ ಅರ್ಬಾನ್ನಿಗೆ ಹೋಗುವ ಕೂಲಿ ಹೆಂಗಸರಿಗೆ ಉಪದ್ರವ ಕೊಟ್ಟನೆಂಬ ಆರೋಪದ ಮೇಲೆ ಪಡಿಲಿನವಜ್ಜ ಗುರುವಪ್ಪ ಕೊಟ್ಟನೆಂಬವನಿಗೆ ೪ ದಿನಗಳ ಕಠಿಣ ಸಜೆ ವಿಧಿಸಲಾಯಿತು.

ಕೆನರಾ ಹೈಯಸ್ಕೂಲಿನ ಹಳೆ ವಿದ್ಯಾರ್ಥಿ ಸಂಘದವರು ದಿನಾಂಕ ೧ ರಂದು ದಿವಂಗತ ಅಮ್ಮೆಂಬಳ ಶ್ರೀನಿವಾಸ ಪೈಗಳ ನಿಧನಕ್ಕಾಗಿ ಶೋಕಸೂಚಕ ಸಭೆಯನ್ನು ನೆರೆಯಿಸಿದಾಗ ದಿವಂಗತರು ಜಿಲ್ಲೆಯ ಅಭಿವೃದ್ಧಿಗಾಗಿ ಸಲ್ಲಿಸಿದ ಸೇವೆಯ ಕುರಿತು ಹಲವು ಮಹನೀಯರ ಭಾಷಣಗಳಾದವು.

ದಿನಾಂಕ ೧ ರಂದು ದಕ್ಷಿಣ ಕನ್ನಡ ಜಿಲ್ಲಾ ಅಧ್ಯಾಪಕ ಸಂಘದ ಕಾರ್ಯಸಮಿತಿಯ ಸಭೆಯು ಸೇರಿದಾಗ ಮದ್ರಾಸಿನ ಸೆಕೆಂಡರೀ ಶಿಕ್ಷಣದ ಹೊಸ ಸುಧಾರಣೆಗಳನ್ನು ಸ್ವಾಗತಿಸುವ ತೀರ್ಮಾನವೂ ಅಧ್ಯಾಪಕರೂ ಸಂಸ್ಥೆಗಳೂ ಅದನ್ನು ಫಲಕಾರಿಯಾಗುವಂತೆ ಪ್ರಯತ್ನಿಸಬೇಕೆಂಬ ವಿನಂತಿಯನ್ನೂ ಮಾಡಲಾಯಿತು. ಅಲ್ಲದೆ ಆ ಯೋಜನೆಯ ವಿಮರ್ಶಾತ್ಮಕ ಚರ್ಚೆಯಾಗಿ ಕೆಲವೊಂದು ಸೂಚನೆಗಳನ್ನು ಸರಕಾರದ ಮುಂದಿಡಲಾಯಿತು. ಅಂದಿನ ಸಭೆಗೆ ಶ್ರೀ. ಎಂ. ಎಸ್. ವಿಶ್ವಂಬರರಾಯರು ಅಧ್ಯಕ್ಷರಾಗಿದ್ದರು.

ಉತ್ತರ ಕನ್ನಡ

ಕುಂದಗೋಳದಿಂದ ಕಳ್ಳತನದಿಂದ ಗಾಂಜಾ ತಂದು ಮಾರುತ್ತಿದ್ದ ಗೋವಿಂದ ಮಹಾದೇವ ಇವರಿಗೆ ೩ ತಿಂಗಳ ಕಠಿಣ ಶಿಕ್ಷೆ ೫೦೧ ರೂಪಾಯಿ ದಂಡ ವಿಧಿಸಲಾಯಿತು.

ನಿಮ್ಮ ಮತ್ತು ಹಿಂದೀ ಒಕ್ಕೂಟದಲ್ಲಿಯ ಮುಸಲ್ಮಾನರ ಹಿತಕ್ಕಾಗಿ ನೀವು ಹಿಂದೀ ಒಕ್ಕೂಟದಲ್ಲಿ ಸೇರಬೇಕು. ವಿಲಂಬ ಮಾಡಬೇಡಿರಿ. ಕಾಶೀಮ ರಜ್ವಿಯವರ ಭಾಷಣಗಳು ಇಸ್ಲಾಮ ಧರ್ಮಕ್ಕೆ ಘಾತಕವಾದವುಗಳೂ ಹಿಂಸಾಪೂರಿತವಾದವುಗಳೂ ಇರುವವು. ಅವರನ್ನು ನಿಯಂತ್ರಿಸಿರಿ' ಎಂದು ಮುಂಬಾಗಿ ಘಟಕಳದ ಮುಸಲ್ಮಾನರು ಹೈದ್ರಾಬಾದ ನಿಜಾಮರಿಗೆ ತಂತಿ ಕಳಿಸಿರುವರೆಂದು ತಿಳಿಯುತ್ತದೆ.

ಕಾರವಾರದ ಪೋಲೀಸರು ಕಳೆದವಾರ ಜೂಜಾಟಗಾರರ ಅಡ್ಡೆಯ ಮೇಲೆ ದಾಳಿಮಾಡಿ ೮ ಜನರನ್ನು ಬಂಧಿಸಿದರು. ಅವರ ಹತ್ತರ ಸುಮಾರು ೩ ಸಾವಿರ ರೂಪಾಯಿಗಳಿಗಿಂತ ಹೆಚ್ಚು ಹಣವೂ ಕೆಲ ಆಭರಣಗಳೂ ದೊರೆತಿವೆ. ಬಂಧಿತರನ್ನು ಜಾಮೀನಿನ ಮೇಲೆ ಬಿಡಲಾಗಿದೆ.

ಸುಮಾರು ಏಳು ಕೋಟಿ ರೂಪಾಯಿ ವೆಚ್ಚ ಮಾಡಿ ಕಾರವಾರದಲ್ಲಿ ಒಂದು ಹಡಗ ಕಟ್ಟುವ ಕಾರಖಾನೆಯನ್ನು ಕಟ್ಟುವ ಬಗ್ಗೆ ಮುಂಬಯಿಯ ಕರೀಮಭಾಯಿ ಲಾಲಜಿ ಮತ್ತು ಕಂಪನಿಯವರು ಒಂದು ಯೋಜನೆ ತಯಾರಿಸಿದ್ದಾರೆ. ಅದಕ್ಕೆ ಸರಕಾರದ ಒಪ್ಪಿಗೆ ದೊರೆತಿದೆ.

ಚಿಕ್ಕೋಡಿ ತಾಲೂಕಿನ ಜಂಬೋಟಿ ಹಾಗು ಬೆಳಗಾವಿ ತಾಲೂಕಿನ ಕಾಲಕುಂದ್ರಿಯಲ್ಲಿ ಹೆಚ್ಚಿನ ಪೋಲೀಸರನ್ನು ನೇಮಿಸಲು ಸರಕಾರದವರು ನಿರ್ಧರಿಸಿದ್ದಾರೆ.

ಬಳ್ಳಾರಿ

ಹಿಂದುಸ್ತಾನ ಸರಕಾರದ ಅಧ್ಯಕ್ಷರು [illegible] ಬಳ್ಳಾರಿ ಜಿಲ್ಲಾ ಪ್ರಮುಖರಾದ ಶ್ರೀ. ಅನಂತರಾಮಯ್ಯನವರು [illegible] ಹೋಗಿ ಆ ಸಂಸ್ಥಾನದ [illegible] ಸಂಬಂಧದಲ್ಲಿ [illegible] ರಾಜೇಸಾಹೇಬರು [illegible] ತಮಗೆ [illegible] ಕೊಡದೆ [illegible] ಈ ಬಗ್ಗೆ ತಾವು ಹಿಂದುಸ್ತಾನ ಸರಕಾರಕ್ಕೆ ಬರೆದಿರುವದಾಗಿಯೂ ಹೇಳಿದರು.

ಬಳ್ಳಾರಿ ಜಿಲ್ಲಾ ರಾಜಕೀಯ ಸಂತ್ರಸ್ತರು ೨೫ ನೇ ತಾರೀಕು ಜಿಲ್ಲಾ ಕಾಂಗ್ರೆಸ ಅಧ್ಯಕ್ಷರಾದ ಶ್ರೀ ಟೇಕೂರ ಸುಬ್ರಹ್ಮಣ್ಯಂರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ನಾಸೂಚಿ ಮರಣದ ಬಗ್ಗೆ ದುಃಖ ಪ್ರದರ್ಶಿಸಿ ವಿಧಾಯಕ ಕಾರ್ಯಕ್ರಮವನ್ನು ಮುಂದರಿಸಿಕೊಂಡು ಹೋಗುವದೇ ಅವರ ನಿಜವಾದ ಸ್ಮಾರಕವೆಂದು ನಿರ್ಣಯಿಸಿದರು. ರಾಜಕೀಯ ಸಂತ್ರಸ್ತರಿಗೆ ಭೂಮಿಯನ್ನು ಹಂಚಿಕೊಡುವದನ್ನು ಯೋಗ್ಯರೀತಿಯಿಂದ ಸಾಗಿಸಬೇಕೆಂದೂ ಬಿನ್ನವಿಸಿಕೊಳ್ಳಲಾಯಿತು.

ಕನ್ನಡ ಸಂಸ್ಥಾನ

ಅನವಟ್ಟಿ ಹೋಬಳಿ ಬೆನ್ನೂರ ಎಲ್. ೬. ಹಾಯ್ಸ್ಕೂಲಿನಲ್ಲಿ ೨೭ ನೇ ತಾರೀಕು ಮಹಾರಾಜರ ವರ್ಧಂತಿ ಉತ್ಸವ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಉಪಾಧ್ಯಾಯರಾದ ಶ್ರೀ. ಟಿ ಎಚ್. ಧಂಗಾರಪ್ಪ ಗೌಡರು ಮಹಾರಾಜರ ಜೀವನ ಚರಿತ್ರವನ್ನು ವಿವರಿಸಿದರು. ಅನಂತರ ರಾಷ್ಟ್ರಭಕ್ತಿ ಗೀತಗಳು ಹೇಳಲ್ಪಟ್ಟವು. ಧ್ವಜಾರೋಹಣ ಶ್ರೀಯುತ ಪ್ರಾರ್ಥನೆ ಮೊದಲಾದವುಗಳೊಂದಿಗೆ ಕಾರ್ಯಕ್ರಮ ಕೊನೆಗಂಡಿತು.

ಕೊಲ್ಹಾಪುರದಲ್ಲಿ ವಾಸಿಸುತ್ತಿರುವ ಪಾಕ ಪಾಕಿಸ್ತಾನದ ಶ್ರೀ ಚೌಧರಿ ಅಬ್ದುಲ್ ಅಜೀಜ ಬಕ್ಷರು ಕೊಲ್ಹಾಪುರದಲ್ಲಿ ಇರುವದು ಗಂಡಾಂತರದ್ದೆಂದು ಕಂಡು ಬಂದದ್ದರಿಂದ ಅವರು ಆಗಸ್ಟ ೩ ರ ನಂತರ ಕೊಲ್ಹಾಪುರ ಸಂಸ್ಥಾನದಲ್ಲೆಲ್ಲಿಯೂ ಇರತಕ್ಕದ್ದಲ್ಲೆಂದು ವಿಧಿಸಲಾಗಿದೆ.

ಮೈಸೂರು ಸಂಸ್ಥಾನದಲ್ಲಿಯೆ ಅತಿ ಹೆಚ್ಚು ಮೋಟರಗಳ ಒಡೆಯರಾಗಿದ್ದ ಧರ್ಮರತ್ನಾಕರ ಪೆರುವಾಲ್ ಚೆಟ್ಟಿಯವರು ತಮ್ಮ ಕಪಿಲಾ ಜವಳಿ ಗಿರಣಿಯಿಂದ ಹಿಂದಿರುಗುತ್ತಿರುವಾಗ ಸಂಜನಗೂಡಿನಲ್ಲಿ ಚಿಕಲಿಂಗ ಮತ್ತು ಬಸವ ಎಂಬವರಿಬ್ಬರು ಅವರನ್ನು ಇರಿದು ಕೊಂದರು. ಪೋಲೀಸರು ಮುಂದಿನ ವಿಚಾರಣೆ ನಡೆಸಿದ್ದಾರೆ.

ಮಂಲೆವಾಡು [illegible] ಸಂಘದ ನಿಯೋಗಗೋಷ್ಠಿಯು ಮೈಸೂರಿಗೆ ಹೋಗಿ ಮೈಸೂರ ಸರಕಾರದ ಗೃಹ ಮಂತ್ರಿ, ಮುಖ್ಯ ಮಂತ್ರಿ, ವ್ಯವಸಾಯ ಮಂತ್ರಿ, ವಿದ್ಯಾಮಂತ್ರಿ ಸ್ಥಳೀಯ ಮಂತ್ರಿಗಳನ್ನು ಕಂಡು ತಮ್ಮ

ಪ್ಲಾಸ್ಟಿಕ್ಸ್

([illegible])

[illegible]

ಬೆಕ್ಕಿನ ಸಂಶೋಧನೆ

[illegible] ಪ್ಲಾಸ್ಟಿಕ್‌ಗಳನ್ನು [illegible] ಅವರ ವೃದ್ಧಿ ಯಾಗಬಹುದೆಂದು ಭವಿಷ್ಯ ನುಡಿಯುವವರಾರು!

[illegible]

ತಕ್ಕ ಪತ್ರಗಳನ್ನು [illegible]

[illegible]

ಹಿಂದುಸ್ಥಾನ

ಮುಂಬಯಿ

ಅಹಮ್ಮದಾಬಾದದ ಜವಳಿ ತೋಕ ವ್ಯಾಪಾರಸ್ಥರ ಸಂಘದವರು, ಬಟ್ಟೆಯ ಪುನರ್ನಿಯಂತ್ರಣವನ್ನು ನಿಷೇಧಿಸಿ, ಪಂ. ನೆಹರೂರಿಗೂ ಸರದಾರ ಪಟೇಲರಿಗೂ ಡಾ. ರಾಜು ಪ್ರಸಾದರಿಗೂ ತಂತಿ ಕಳಿಸಿದ್ದಾರೆ.

ಸಂಯುಕ್ತ ಮಹಾರಾಷ್ಟ್ರ ಪರಿಷತ್ತಿನ ಕಾರ್ಯದರ್ಶಿಗಳು ಭಾಷಾವಾರ ಪ್ರಾಂತ ರಚನಾ ಸಮಿತಿಯ ಅಧ್ಯಕ್ಷರಿಗೆ, ಈ ಬಗ್ಗೆ ತೆಗೆದ ಪ್ರಶ್ನಾವಳಿಗೆ ಉತ್ತರ ಕೊಡಲು ಇನ್ನಷ್ಟು ಅವಧಿ ಕೊಡಬೇಕೆಂದು ತಂತಿ ಮೂಲಕ ಬೇಡಿಕೊಂಡಿದ್ದಾರೆ.

ಸೇಂಗಾ ಹಿಂಡಿಯು ನಿನಿಯಂತ್ರಣಗೊಳಿಸಬಾರದೆಂದು ನಿರ್ಧರಿಸಲಾಗಿದೆಯೆಂದು ಮುಂಬಯಿ ಸರಕಾರದ ಪ್ರಕಟನೆ ಹೊರಟಿದೆ.

ಪುಣೆಯ ಟಿಳಕ ಸ್ಮಾರಕ ಮಂದಿರದಲ್ಲಿ ತಾ. ೧ ಕ್ಕೆ ಬಿಹಾರ ಗವರ್ನರರಾದ ಶ್ರೀ ಎಂ. ಎಸ್ ಅಣೆಯವರು ಲೋಕಮಾನ್ಯ ಟಿಳಕರ ಪುಣ್ಯಸ್ಮರಣಾರ್ಥ ಭಾಷಣ ಮಾಡುತ್ತ, ಹೈದರಾಬಾದ ಪರಿಸ್ಥಿತಿಯು ಜ್ವಾಲಾಮುಖಿಯಂತಿದ್ದು ಯುದ್ಧ ಪ್ರಸಂಗವೇ ಬಂದಲ್ಲಿ ಹಿಂದೀ ಯುವಕರು ಸೈನ್ಯಪಡೆಯಲ್ಲಿ ಕಿಕ್ಕಿರಿದು ಸೇರಬೇಕೆಂದು ಉದ್ಗರಿಸಿದರು.

ಶ್ರೀ ಕರ್ವೆಯವರು ಸ್ಥಾಪಿಸಿದ ಥ್ಯಾಕರಸೆ ಮಹಿಳಾ ವಿಶ್ವ ವಿದ್ಯಾಲಯಕ್ಕೆ ಮುಂಬಯಿ ಸರಕಾರವು ಕೊಡುತ್ತಿದ್ದ ೫೦೦೦ ರೂ. ಗಳ ಗ್ರ್ಯಾಂಟನ್ನು ೬೫೦೦ ರೂ. ಗಳಿಗೆ ಏರಿಸಿದೆಯೆಂದು ಮುಂಬಯಿಯ ಗವರ್ನರರಾದ ರಾಜಾ ಸರ ಮಹಾರಾಜ ಸಿಂಗರು ತಾ ೩೧ ಕ್ಕೆ ಈ ವಿಶ್ವ ವಿದ್ಯಾಲಯದ ಘಟಿಕೋತ್ಸವದ ಕಾಲಕ್ಕೆ ಭಾಷಣ ಮಾಡುತ್ತ ಹೇಳಿದರು. ಇಷ್ಟಲ್ಲದೆ ಕಟ್ಟಡಕ್ಕಾಗಿ ಸರಕಾರವು ೬ ಲಕ್ಷ ರೂ. ಕೊಡಲೊಪ್ಪಿದ್ದು ಇತ್ತೀಚೆಗೆ ೧॥ ಲಕ್ಷ ಮಂಜೂರ ಮಾಡಲಾಗಿದೆ. ಹಿಂದುಸ್ಥಾನ ಸರಕಾರವೂ ಗ್ರ್ಯಾಂಟ ಕೊಡಲೊಪ್ಪಿದೆ.

ಶ್ರೀ ದಿವಾಕರ ರಂಗರಾಯರು ಬರೆದ ಸತ್ಯಾಗ್ರಹ ಎಂಬ ಇಂಗ್ಲೀಷ ಪುಸ್ತಕಕ್ಕೆ ಸ್ವೀಡನ್ ನಾರ್ವೆಗಳಿಂದ ಬೇಡಿಕೆಗಳು ಬಂದಿವೆಯೆಂದು ಮುಂಬಯಿಯಿಂದ ಸುದ್ದಿ ಬಂದಿದೆ.

ಮುಂಬಯಿ ಸಿ. ಆಯ್. ಡಿ. ಶಾಖೆಯ ಕಳ್ಳ ಪೇಟೆಯ ನಿರ್ಮೂಲನ ದಳದವರು ತಾ. ೨ ಕ್ಕೆ ಒಂದು ಹೋಟಲನ್ನು ಮುತ್ತಿ ೬ ಮಾರ್ವಾಡಿ ವ್ಯಾಪಾರಸ್ಥರನ್ನು ಬಂಧಿಸಿದ್ದಾರೆ. ಈ ವ್ಯಾಪಾರಿಗಳು ಹೈದರಾಬಾದಕ್ಕೆ ಅನೇಕ ಅರಿವೆ ಗಂಟುಗಳನ್ನೂ ಇನ್ನುಳಿದ ಸರಕುಗಳನ್ನೂ ಕಳ್ಳತನದಿಂದ ಸಾಗಿಸತಕ್ಕವರಿದ್ದರು.

ನಿಜಾಮರ ಪರವಾಗಿ ಗುಪ್ತಚಾರನ ಕೆಲಸ ಮಾಡುತ್ತಿದ್ದನೆಂದು ಮುಂಬಯಿ 'ಎ' ವಾರ್ಡ ಮುಸ್ಲಿಂಲೀಗಿನ ಅಧ್ಯಕ್ಷರಾದ ಗಾಜಿಯವರನ್ನು ತಾ. ೨ ಕ್ಕೆ ಪೋಲೀಸರು ಬಂಧಿಸಿದ್ದಾರೆ.

ಪಶ್ಚಿಮ ಕರಾವಳಿ ಬಂದರ ಸಮಿತಿಯು ಕಾರವಾರ ಬಂದರ ಅಭಿವೃದ್ಧಿಪರ ಸಾಕ್ಷ್ಯವನ್ನು ತಾ. ೨೮ ಕ್ಕೆ ಕೇಳಿಕೊಂಡಿತು. ಸಾಕ್ಷಿ ಕೊಟ್ಟವರಲ್ಲಿ ಶ್ರೀ. ಕಾಕಾ ಕಾಲೇಲಕರ, ಶ್ರೀ ಕೃಷ್ಣಕುಮಾರ ಕಲ್ಲೂರ (ಮುಂಬಯಿ ಸರಕಾರದಿಂದ ನಿಯಮಿತ ಬಂದರ ಸಮಿತಿಯ ಸದಸ್ಯರು), ಶ್ರೀ. ಎ. ಕೆ ರಾವ, ಶ್ರೀ. ನರಸಿಂಹಯ್ಯ ಮೊದಲಾದವರಿದ್ದರು.

ಈ ವರ್ಷ ಜಾನೇವರಿಯಲ್ಲಿದ್ದ ಉರುಟ ಬಟ್ಟೆಯ ದರಗಳ ಮೇಲೆ ನೂರಕ್ಕೆ ೨೦ ರಷ್ಟು ಜಿನುಗು ಬಟ್ಟೆಯ ಮೇಲೆ ನೂರಕ್ಕೆ ೩೦ ರಷ್ಟು ತೀರ ಜಿನುಗಿದ್ದರೆ ನೂರಕ್ಕೆ ೪೦ ರಷ್ಟು, ಹೊಸ ನಿಯಂತ್ರಿತ ಬೆಲೆಗಳು ಹೆಚ್ಚಿಗೆ ಆಗುವವೆಂದು ತಿಳಿಯುತ್ತದೆ.

ಮದ್ರಾಸ

ನೆಲ್ಲೂರ ಜೇಲಿನಲ್ಲಿದ್ದ ೧೪ ಕಮ್ಯುನಿಸ್ಟರು ಕ್ಷಮೆ ಕೇಳಿ ಇನ್ನು ತಾವು ಈ ಪಕ್ಷದಲ್ಲಿ ಸೇರುವದಿಲ್ಲವೆಂದೂ ಹಿಂದಿ ಕಮ್ಯುನಿಸ್ಟ ಪಕ್ಷದವರ ವಿಘಾತಕ ಧೋರಣೆ ತಮಗೆ ಸರಿಬಂದಿಲ್ಲವೆಂದೂ ಇದೆಲ್ಲದರ ಅರಿವಿಲ್ಲದೆ ತಾವು ಈ ಸರೋದೆಹೋರರ ತಂಡ ಸೇರಿದ್ದಕ್ಕೆ ಸರಕಾರವು ತಮ್ಮನ್ನು ಕ್ಷಮಿಸಬೇಕೆಂದೂ ಕೇಳಿಕೊಂಡಿದ್ದಾರೆ.

ಹೊಸದಿಲ್ಲಿ

ಕಾಶ್ಮೀರ ರಂಗದಲ್ಲಿ ಹಿಂದೀ ಸೈನಿಕರಿಗೆ ಮಹತ್ವದ ವಿಜಯ ದೊರಕಿದೆ. ಈ ವರೆಗೆ ವೈರಿವಶದಲ್ಲಿದ್ದ ನ್ಯುರೆಸದಲ್ಲಿಯ ಒಂದು ಮಹತ್ವದ ದಿನ್ನೆಯ ಪ್ರದೇಶವನ್ನು ಹಿಂದೀ ಸೈನಿಕರು ವಶಪಡಿಸಿಕೊಂಡಿದ್ದಾರೆ. ಊರಿ ವಿಭಾಗದಲ್ಲಿ ವೈರಿಗಳ ಮದ್ದಿನ ಸಂಗ್ರಹಕ್ಕೆ ಒಂದು ಗುಂಡು ತಾಗಿ ಅದು ಧ್ವಂಸವಾಗಿ ಹೋಯ್ತು. ಆ ಭಾಗದಿಂದ ಓಡಿ ಹೋದವರು ಈಗ ನಿರ್ಋತಿಯಿಂದ ಮರುಳಿ ಬರುತ್ತಿದ್ದಾರಾಗಿ ತಿಳಿಯುತ್ತದೆ.

ತಾ. ೧ ಕ್ಕೆ ಕರಾಚಿಯ ಹತ್ತಿರ ಒಂದು ವಿಮಾನವು ಅಪಘಾತಕ್ಕೀಡಾಗಿ ಧ್ವಂಸವಾಗಿದ್ದು ಅದು ಹೈದರಾಬಾದಕ್ಕೆ ಕಳ್ಳತನದಿಂದ ಶಸ್ತ್ರಾಸ್ತ್ರ ಸಾಗಿಸುತ್ತಿದ್ದಿತೆಂದೂ ಅದರಲ್ಲಿದ್ದವರು ಸಿಡ್ನೆ ಕಾಟನ್ನನ ಹಸ್ತಕರೆಂದೂ ತಿಳಿದುಬರುತ್ತದೆ.

ಪ್ರಾಂತಿಕ ಸರಕಾರಗಳು ರಾಷ್ಟ್ರೀಯ ಹಾಗೂ ಪ್ರಾದೇಶಿಕ ಭಾಷೆಗಳಿಗೆ ಈಗ ಹೆಚ್ಚು ಮಹತ್ವ ಕೊಡುತ್ತಿರುವವದರಿಂದ ಈ ಭಾಷೆಗಳನ್ನು ಆಂಗ್ಲೊ ಇಂಡಿಯನ್ ಶಾಲೆಗಳಲ್ಲಿ ಕಲಿಸಲು ಪ್ರಾರಂಭಿಸಬೇಕೆಂದು ಆಂಗ್ಲೋ ಇಂಡಿಯನ್ ಶಿಕ್ಷಣದ ಅಂತಃಪ್ರಾಂತೀಯ ಮಂಡಲವು ತನ್ನ ದ್ವಿತೀಯ ವಾರ್ಷಿಕಾಧಿವೇಶನದಲ್ಲಿ ತೀರ್ಮಾನಿಸಿತು.

ಕಾಂಗ್ರೆಸ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ವಿಶ್ರಾಂತಿಗಾಗಿ ಅಗಸ್ಟಕ್ಕೆ ಜಯಪೂರ ಸಂಸ್ಥಾನದ ಪಿಲಾನಿಗೆ ಹೋಗಲಿದ್ದಾರೆ.

ಮ. ಗಾಂಧಿಯವರು ಮಡಿದು ೬ ತಿಂಗಳಾದ್ದರಿಂದ ತಾ. ೩೦ ಕ್ಕೆ ರಾಜಘಾಟದಲ್ಲಿ ವಿಶೇಷ ಪ್ರಾರ್ಥನೆ ನಡೆಯಿತು. ಗ. ಜ. ರಾಜಗೋಪಾಲಾಚಾರ್ಯರೂ ಪಂ. ಜವಾಹರಲಾಲರೂ ಸರ್ ಮಿರ್ಝಾ ಇಸ್ಮಾಯಿಲರೇ ಮೊದಲಾದವರು ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು. ಪ್ರಾರ್ಥನಾನಂತರ ರಾಜಾಜಿ ಜವಾಹರಲಾಲರು ಸಮಾಧಿಗೆ ಪುಷ್ಪಾರ್ಪಣ ಮಾಡಿದರು.

ರಾಜಘಾಟದಲ್ಲಿ ತಾ. ೨೯ ಕ್ಕೆ ಕಾಶ್ಮೀರ ಸಮಿತಿಯ ಸದಸ್ಯರು ಮ. ಗಾಂಧೀಜಿಗೆ ಗೌರವ ಸಲ್ಲಿಸಿದರು. ಆಗ ಡಾ. ಗ್ರ್ಯಾಫಿ ಅವರು ಮಾತನಾಡುತ್ತ, ಭಾರತದ ಪುತ್ರಶ್ರೇಷ್ಠರೂ ಅಖಂಡ ಜಗತ್ತಿನ ಪ್ರೇಮಾದರಗಳಿಗೆ ಪಾತ್ರರಾದವರೂ ಪೂಜ್ಯರೂ ಆದ ಮಹಾತ್ಮಾ ಗಾಂಧೀ ಅವರಿಗೆ ಗೌರವ ಸಲ್ಲಿಸಲು ಕಾಶ್ಮೀರ ಸಮಿತಿಯ ಸದಸ್ಯರಾದ ನಾವು ಇಲ್ಲಿಗೆ ಬಂದಿದ್ದೇವೆ ಎಂದು ಮೊದಲಾಗಿ ಹೇಳಿದರು.

ಪಾಕಿಸ್ಥಾನ ಅಧಿಕಾರಿಗಳು ಜೋಧಪುರ ರೇಲ್ವೆಯ ಸಿಂಧ ವಿಭಾಗವನ್ನು ವಶಪಡಿಸಿಕೊಂಡು ಜೋಧಪುರಕ್ಕೆ ಹೊರಟ ೨ ಬಂಡಿಗಳನ್ನು ತಡೆಹಿಡಿದು ನಿಲ್ದಾಣ, ನಿಯಂತ್ರಣ ಕಚೇರಿಗಳನ್ನು ಆಕ್ರಮಿಸಿ ತಮ್ಮ ಅಧಿಕಾರಿಗಳನ್ನು ನೇಮಿಸಿದ್ದಾರೆಂದು ತಿಳಿಯುತ್ತದೆ.

ಸೇಗಾವದ ಹತ್ತಿರ ಖರಾತುಕಲಿ ಎಂಬ ಹಳ್ಳಿಯ ಮೇಲೆ ತಾ. ೨೭ ಕ್ಕೆ ೨೦೦ ರಜಾಕಾರರು ದಾಳಿ ಮಾಡಲು ಹಿಂದೀ ಸೈನಿಕರು ಪ್ರತಿಭಟಿಸಿ ೩೫ ರಜಾಕಾರರನ್ನು ಬಾಧಿಸಿರುವರೆಂದು ಸಂರಕ್ಷಣ ಶಾಖೆಯ ಪ್ರಕಟನೆ ಹೇಳುತ್ತದೆ.

ಬಾರಾಮುಲಾ ಜಿಲ್ಹೆಯಲ್ಲಿ ನೆರೆಹಾವಳಿಯಾಗಿ ೨೦೫ ಹಳ್ಳಿಗಳು ನೀರಲ್ಲಿ ಮುಳುಗಿದ್ದು ದನಕರು ಬೆಳೆಗಳು ಮಕ್ಕಳುಮರಿಗಳು ಹಾನಿಗೀಡಾಗಿದ್ದಾರೆ.

ಮಧ್ಯಭಾರತದ ಝಾಬುವಾ ಜಿಲ್ಹೆಯೊಳಗಿನ ಠಾಕೂರವಾಡಾ ಜಹಾಗೀರನ್ನು ಠಾಕೂರ ನರವಾರಸಿಂಗ ಎಂಬ ಜಾಗೀರದಾರನು ಸರಕಾರಕ್ಕೆ ಒಪ್ಪಿಸಲು ನಿರಾಕರಿಸಿದ್ದಾರೆಂದೂ ಕೊತ್ವಳಕ್ಕೆ ತೋಫು ಹಚ್ಚಿರುವನೆಂದೂ ತಿಳಿಯುತ್ತದೆ. ಭಾರತ ಸರಕಾರ ಅಲ್ಲಿಗೆ ಸೈನ್ಯ ಕಳಿಸಿದೆ.

ಪಶ್ಚಿಮ ಬಂಗಾಲ

ಕಲಕತ್ತೆಯ ಉತ್ತರ ಭಾಗದಲ್ಲಿ ಮೂರು ಲಾರಿಗಳು ಹುಣಿಸೇ ಬೀಜ ಹೇರಿಕೊಂಡು ಹೊರಟಿದ್ದವು. ಗೋದಿಯ ಹಿಟ್ಟಿನಲ್ಲಿ ಬೆರೆಸಲು ಇವನ್ನು ಒಯ್ಯಲಾಗುತ್ತಿದೆಯೆಂದು ಜನರು ಆ ಲಾರಿಗಳನ್ನು ತಡೆದು ಹುಣಿಸೇ ಬೀಜ ಬೀದಿಗೆಸೆದರು. ಸಣಬಿನ ಉದ್ಯೋಗಕ್ಕೆ ಈ ಬೀಜ ಬೇಕಾಗಿದೆಯೆಂದು ತಿಳಿಸಿ ಹೇಳಿದರೂ ಜನ ಕೇಳದಾಗಲು ಪೋಲೀಸರು ಲಾಠಿ ಪ್ರಹಾರದಿಂದ ಜನರನ್ನು ಚದುರಿಸಬೇಕಾಯ್ತೆಂದು ತಿಳಿಯುತ್ತದೆ.

ಮುಸ್ಲಿಂರ ದೇಶನಿಷ್ಠೆಯ ಒರೆ

ಅಬ್ದುಲಕ್ಯುಯಾಮ ಅನಸಾರಿಯವರ ಪ್ರಕಟನೆ

ಬಿಹಾರದ ಲೋಕೋಪಯೋಗಿ ಶಾಖೆಯ ಮಂತ್ರಿಗಳೂ ಅ. ಭಾ. ಮೋಮಿನ ಪರಿಷತ್ತಿನ ಅಧ್ಯಕ್ಷರೂ ಆದ ಜನಾಬ ಅಬ್ದುಲ ಕ್ಯುಯಾಮ ಅನಸಾರಿಯವರು ತಾ. ೨ ಕ್ಕೆ ಒಂದು ಪ್ರಕಟನೆ ಹೊರಡಿಸಿ ಹಿಂದೀ ಒಕ್ಕೂಟದ ಮುಸ್ಲಿಂರ ದೇಶನಿಷ್ಠೆಗೆ ಆಹ್ವಾನವಿತ್ತಿದ್ದಾರೆ. ಅವರ ಹೇಳಿಕೆಯ ಸಾರ ಹೀಗೆ:

ಹೈದರಾಬಾದ ಕಾಶ್ಮೀರ ಪ್ರಶ್ನೆಗಳ ವಿಷಯದಲ್ಲಿ ಹಿಂದುಸ್ಥಾನದ ಮುಸ್ಲಿಂಲೀಗ ಧುರೀಣರು ಸ್ಪಷ್ಟಾಭಿಪ್ರಾಯವನ್ನು ಈ ವರೆಗೆ ಪ್ರಕಟಗೊಳಿಸಿಲ್ಲ. ಕಾಸೀಮ ರಜವಿಯ ಮತ್ತು ಪಾಕಿಸ್ಥಾನದ ಮುಖಂಡರ ಉದ್ಧಾಮ ನುಡಿಗಳನ್ನು ಒಬ್ಬ ಮುಸ್ಲಿಂಧುರೀಣನೂ ಖಂಡಿಸಿಲ್ಲ. ಎಂದ ಮೇಲೆ ಮುಸ್ಲಿಂರನ್ನು ಹಿಂದುಸ್ಥಾನದ ಜನರು ಸಾಶಂಕ ದೃಷ್ಟಿಯಿಂದಲೂ ಅವಿಶ್ವಾಸದಿಂದಲೂ ನೋಡಿದರೆ ಅದರಲ್ಲೇನು ಆಶ್ಚರ್ಯ? ಹಿಂದುಸ್ಥಾನಕ್ಕೆ ನಿಷ್ಠರಾಗಿರುವೆವೆಂದು ಬರೀ ಬಾಯಿಂದ ಹೇಳಿದರೇನು ಪ್ರಯೋಜನ? ಅದನ್ನು ಕೃತಿಗಿಳಿಸಬೇಡವೆ? ಮುಸ್ಲಿಂರ ನಿಷ್ಠೆಯನ್ನು ಒರೆಗೆ ಹಚ್ಚಲು ಹೈದರಾಬಾದ ಮತ್ತು ಕಾಶ್ಮೀರ ಪ್ರಶ್ನೆಗಳು ಅವರಿಗಾಗಿ ಕಾಯ್ದಿವೆ. ಈ ಸಂದರ್ಭದಲ್ಲಿ ಅವರೇಕೆ ಮೌನವಾಗಿದ್ದಾರೆ ಅಥವಾ ಈ ಜೀವಾಳದ ವಿಷಯದಲ್ಲಿ ತಮಗೆ ಮಾಡುವದಾಗಲೀ ಹೇಳುವದಾಗಲೀ ಏನೂ ಇಲ್ಲವೆಂದು ಈ ಧುರೀಣರ ಅಭಿಪ್ರಾಯವೆ? ದೇಶವನ್ನು ಕತ್ತರಿಸಬೇಕೆನ್ನುವಾಗ ವೀರಾವೇಶದಿಂದ ಕೋಲಾಹಲವೆಬ್ಬಿಸಿದ ಮುಸಲ್ಮಾನರು ಹೈದರಾಬಾದ ಗಂಭೀರ ಪರಿಸ್ಥಿತಿಯಲ್ಲಿದ್ದಾಗ ಪಿಟ್ಟೆನ್ನದೆ ಕುಳಿತದ್ದು ಹಿಂದೀಯರ ತಲೆತಿನ್ನಹತ್ತಿದೆ. ಹಿಂದೀಯರ ಅವಿಶ್ವಾಸಕ್ಕೆ ಪುಟಕೊಡಲು ಇನ್ನು ಬೇರೆ ಕಾರಣಗಳೂ ಇವೆ. ಮುಸ್ಲಿಂಲೀಗ ಸಂಸ್ಥೆಯ ವಿಸರ್ಜನೆಯಾಗಿಲ್ಲ. ಬೇರೆ ಬೇರೆ ಪ್ರಾಂತಗಳ ಶಾಸನ ಸಭೆಯಲ್ಲಿ ಮುಸ್ಲಿಂಲೀಗ ಪಕ್ಷವು ತನ್ನ ಹೆಸರು ಬದಲಿಸಿಕೊಂಡಿದ್ದರೂ ಅವರ ಧ್ಯೇಯ ಧೋರಣ ಗತ್ತುಗಾರಿಕೆ ಬದಲಾಗಿಲ್ಲ. ಕೆಲವು ಲೀಗ ಧುರೀಣರು ಹಿಂದುಸ್ಥಾನ ಬಿಟ್ಟು ಪಾಕಿಸ್ಥಾನಕ್ಕೆ ಹೋಗಲು ತಮ್ಮ ಆಸ್ತಿ ಮಾರಲು ಹಚ್ಚಿದ ವಾರ್ತೆ ದಟ್ಟವಾಗಿ ಹಬ್ಬಿದೆ. ಈ ಎಲ್ಲ ಕಾರಣಗಳ ಮೂಲಕವಾಗಿಯೇ ಉದಾತ್ತ ಹೃದಯರಾದ ಪಂ. ಜವಾಹರಲಾಲರಂಥವರು ಸಹ ಮದ್ರಾಸದ ತಮ್ಮ ಭಾಷಣದಲ್ಲಿ, ಮುಸಲ್ಮಾನರಿಂದ ದೇಶನಿಷ್ಠೆ ನಿರೀಕ್ಷಿಸುವದು ಮೂರ್ಖತನವೆಂದು ಉದ್ಗಾರ ತೆಗೆದರು. ಆದ್ದರಿಂದ ಇನ್ನಾದರೂ ಹಿಂದೀ ಮುಸಲ್ಮಾನರು ತಮ್ಮ ದೇಶನಿಷ್ಠೆಯನ್ನು ಕಾರ್ಯರೂಪದಲ್ಲಿ ವ್ಯಕ್ತಮಾಡಿ ತೋರಿಸಲಿ. ಮುಸಲ್ಮಾನರು ಮಾಡಿದ ದೇಶವಿಚ್ಛೇದನೆಯ, ಅದರ ಫಲವಾಗಿ ಆದ ಅಸಂಖ್ಯಾತ ಜನಗಳ ಪ್ರಾಣಹರಣದ ಪಾಪಕ್ಷಾಲನೆಯನ್ನು ಹಿಂದೀ ಮುಸಲ್ಮಾನರು ಮಾಡಿಕೊಳ್ಳಲೇಬೇಕು. ಈ ಸಂದರ್ಭದಲ್ಲಿ ದೇಶಕ್ಕಾಗಿ ವೀರಸ್ವರ್ಗವನ್ನು ಸ್ವಾಗತಿಸಿದ ಬ್ರಿ. ಉಸ್ಮಾನರ ಉಜ್ವಲ ಉದಾಹರಣೆಯನ್ನು ಹಿಂದೀ ಮುಸಲ್ಮಾನರು ಅನುಸರಿಸಿತೋರಿಸಲಿ. ಆಗ ಮಾತ್ರ ಹಿಂದೀಯರಲ್ಲಿ ಮುಸಲ್ಮಾನರ ಬಗ್ಗೆ ಉಂಟಾದ ಅವಿಶ್ವಾಸವು ದೂರಾಗಬಲ್ಲದು.

ಮಂತ್ರಿಯ ಮಗನಿಗೆ ೧ ವರ್ಷ ಶಿಕ್ಷೆ

ಹಿಂದುಸ್ಥಾನದ ರೇಲ್ವೆ ಮಂತ್ರಿ ಡಾ. ಜಾನ್ ಮಥಾಯರ ಮಗ ರವಿ ಜಾನ್ ಮಥಾಯ ಸಿಕ್ಕಾಬಟ್ಟೆ ಮೋಟಾರ ನಡೆಸಿ ಸೈಕಲ್ ಮೇಲೆ ಬರುತ್ತಿದ್ದ ಗೊಂಡಾ ಜಿಲ್ಹೆಯ ಮ್ಯಾಜಿಸ್ಟ್ರೇಟರ ಮಗ ರಜನಿಮೋಹನ ಶ್ರೀವತ್ಸನಿಗೆ ಡಿಕ್ಕಿ ಹೊಡೆದನು. ರಜನಿಮೋಹನನನ್ನು ಆಸ್ಪತ್ರಿಗೆ ಒಯ್ದ ನಂತರ ಅಲ್ಲಿ ಅವನು ತೀರಿಕೊಂಡನು. ಈ ಬಗ್ಗೆ ವಿಚಾರಣೆ ನಡೆದು ಅಲಹಾಬಾದ ಮ್ಯಾಜಿಸ್ಟ್ರೇಟರು ರವಿ ಮಥಾಯರಿಗೆ ಒಂದು ವರ್ಷ ಸಶ್ರಮ ಶಿಕ್ಷೆ ವಿಧಿಸಿದರು. ರವಿ ಮಥಾಯಿಗೆ ಅಪೀಲ ಮಾಡಲು ಅಗಸ್ಟ ೧೫ ರ ವರೆಗೆ ಜಾಮೀನ ಮೇಲೆ ಬಿಡಲಾಗಿದೆ.

ಮತ್ತೆ ಬಟ್ಟೆಯ ನಿಯಂತ್ರಣ

ಭಾರತ ಸರಕಾರದ ಪ್ರಕಟನೆ

೪೦೦ ಗಿರಣಿಗಳ ಜವಳಿ ಜಪ್ತಿ

ಪೇಟೆಗೆ ಬರುವ ಬಟ್ಟೆಯ ಬೆಲೆಯನ್ನು ಅದರ ಮೇಲೆ ಮುದ್ರಿಸಿಬಿಡಬೇಕೆಂದು ಹಿಂದುಸ್ಥಾನ ಸರಕಾರವು ೪೦೦ ಜವಳಿ ಗಿರಣಿಗಳ ಬಟ್ಟೆಯನ್ನೆಲ್ಲ ವಶಪಡಿಸಿಕೊಂಡಿದೆ. ಈ ಬಗ್ಗೆ ಒಂದು ಸರಕಾರೀ ಪ್ರಕಟನೆ ತಾ. ೩೦ ಕ್ಕೆ ಹೊರಟಿದ್ದು ಜವಳೀ ಧೋರಣವನ್ನು ಹೀಗೆ ವ್ಯಕ್ತಗೊಳಿಸಲಾಗಿದೆ.

ತೋಕ ಮತ್ತು ಕಿರುಕಳ ಜವಳಿ ವ್ಯಾಪಾರಿಗಳು ಮುದ್ರೆ ಇಲ್ಲದ ಬಟ್ಟೆಯನ್ನೆಲ್ಲ ೩೧ನೇ ಅಕ್ಟೋಬರದೊಳಗಾಗಿ ಮಾರಿಬಿಡಬೇಕು. ಯೋಗ್ಯ ಬೆಲೆಗೆ ತೋಕ ವ್ಯಾಪಾರಿಗಳಿಂದ ಬಟ್ಟೆಯನ್ನೆಲ್ಲ ಸರಕಾರ ವಶಪಡಿಸಿಕೊಳ್ಳಬಹುದು ನಾಗರಿಕರಿಗೆ ನಿಯಂತ್ರಿತ ಬೆಲೆಗೆ ದೊರಕಲೆಂದು ಬಟ್ಟೆಯನ್ನು ಸಹಕಾರೀ ಸಂಘಗಳಿಗೂ ವ್ಯಾಪಾರಸ್ಥರಿಗೂ ಕೊಡಲಾಗುವದು.

ಜವಳಿ ಪೂರೈಕೆ ಕಡಿಮೆಯಾಗದಂತೆ ಮತ್ತು ಗಿರಣಿಗಳು ತಾಳಿಕೆ ಬಾರದ ಬಟ್ಟೆಗಳನ್ನು ತಯಾರಿಸದಂತೆ ಈ ಶಾಖೆ ನೋಡಿಕೊಳ್ಳುವದು. ಗಿರಣಿಯಲ್ಲಿ ಹುಟ್ಟಿದ ನೂಲಿಗೂ ಬಟ್ಟೆಗೂ ಬೆಲೆ ಮುದ್ರಿಸಲಾಗುವದು.

ಮೇಲ್ಕಾಣಿಸಿದ ಬಟ್ಟೆಯ ಬೆಲೆಯ ನಿಯಂತ್ರಣ ವಿಷಯವನ್ನು ಸ್ಪಷ್ಟೀಕರಿಸುತ್ತ ಕೇಂದ್ರ ಸರಕಾರದ ಪೂರೈಕೆ ಮಂತ್ರಿ ಡಾ. ಶಾಮಪ್ರಸಾದರು ತಾ. ೩೦ ಕ್ಕೆ ಹೀಗೆ ನುಡಿದರು.

ಸರಕಾರವು ಈಗ ಪ್ರಕಟಿಸಿದ ಜವಳೀ ಧೋರಣವು ಕೈಮಗ್ಗಗಳಿಗೂ ವಿದ್ಯುಚ್ಛಕ್ತಿ ಮಗ್ಗಗಳಿಗೂ ಅನ್ವಯಿಸುವದಿಲ್ಲ. ಕೈಮಗ್ಗಗಳಿಂದ ೧೫೦ ಕೋಟಿ ಗಜ ವಿದ್ಯುಚ್ಛಕ್ತಿಯ ಮಗ್ಗಗಳಿಂದ ೩೦ ಕೋಟಿ ಗಜ ಬಟ್ಟೆ ನಮ್ಮಲ್ಲಿ ಸಿದ್ಧವಾಗುತ್ತಿದ್ದು ಇದು ಪರದೇಶಕ್ಕೆ ಸಾಗದಿದ್ದರೆ ಜನರಿಗೆ ಯಾವ ನಿಯಂತ್ರಣವೂ ಇಲ್ಲದೆ ಸಾಕಷ್ಟು ಅರಿವೆ ದೊರಕುವದು.

ಈ ಮೊದಲು ವರ್ತಕರು ಗಿರಣಿಯಿಂದ ತಮಗೆ ಬಟ್ಟೆ ದೊರಕುತ್ತಲೇ ಅದನ್ನು ಬಚ್ಚಿಟ್ಟುಬಿಡುತ್ತಿದ್ದರು. ಇನ್ನು ಪ್ರಾಂತಿಕ ಮತ್ತು ಸಂಸ್ಥಾನಿಕ ಸರಕಾರಗಳೇ ಗಿರಣಿಯ ಬಟ್ಟೆಯನ್ನೆಲ್ಲ ಪ್ರಾಮಾಣಿಕ ವರ್ತಕರ ಮುಖಾಂತರ ಪಡೆಯುವವು. ಪ್ರಾಮಾಣಿಕ ವ್ಯಾಪಾರಮಾಡುವವರಿಗೆಲ್ಲ ಈ ಬಟ್ಟೆಯನ್ನು ಪ್ರಾಂತಿಕ ಸರಕಾರವು ಹಂಚಿಕೊಡಬಹುದು. ಬೆಲೆಯನ್ನು ನಿಯಂತ್ರಿಸಲಾಗಿದೆಯಲ್ಲದೆ ನಿಯಂತ್ರಿತ ಬೆಲೆಗೆ ಬಟ್ಟೆ ಸಿಕ್ಕುವ ಏರ್ಪಾಟನ್ನೂ ಮಾಡಲಾಗುವದು. ಈಗ ಪೇಟೆಯಲ್ಲಿ ೪ ತಿಂಗಳಿಗೆ ಸಾಲುವಷ್ಟು ಬಟ್ಟೆಯಿದ್ದು ಅದನ್ನು ಯೋಗ್ಯ ದರದಿಂದ ಆಕ್ಟೋಬರ ೩೧ರ ಒಳಗೆ ಮಾರಿಕೊಳ್ಳಲು ವರ್ತಕರಿಗೆ ಅವಕಾಶಕೊಡಲಾಗಿದೆ. ಮಾರಾಟವಾಗದ್ದನ್ನು ಆ ಮೇಲೆ ವಶಪಡಿಸಿಕೊಳ್ಳಲಾಗುವದು. ಈ ನಿಯಂತ್ರಣವನ್ನು ಮೀರಿ ನಡೆದವರಿಗೆ ತತ್ಕಾಲಕ್ಕೇ ದಂಡಿಸುವ ಯೋಜನೆಯನ್ನೂ ಮಾಡಲಾಗಿದೆ.

ನಮ್ಮಲ್ಲಿಂದ ಪಾಕಿಸ್ತಾನಕ್ಕೆ ಸಾವಿರಾರು ಬಟ್ಟೆಯ ಗಂಟುಗಳು ಕಳ್ಳತನದಿಂದ ಹೋಗುತ್ತಿದ್ದು ಪ್ರಾಂತಿಕ ಸರಕಾರಗಳು ಇದನ್ನು ತಡೆಗಟ್ಟಲು ಯತ್ನಿಸುತ್ತಿವೆ. ಈ ಕಳ್ಳ ವ್ಯಾಪಾರಿಗಳನ್ನು ಉಗ್ರವಾಗಿ ಶಿಕ್ಷಿಸಲಾಗುವದು. ಜನರು ಅವಶ್ಯವಿದ್ದಷ್ಟಕ್ಕಿಂತ ಹೆಚ್ಚಿಗೆ ಬಟ್ಟೆಯನ್ನು ತೆಗೆದುಕೊಳ್ಳಬಾರದು.

ಈಗ ಬಟ್ಟೆಯ ಉತ್ಪಾದನೆ ಹೆಚ್ಚಿದೆ. ೧೯೪೬ರಲ್ಲಿ ೪೦೦ ಕೋಟಿ ಗಜ, ೧೯೪೭ರಲ್ಲಿ ೩೮[illegible] ಕೋಟಿ ಗಜ, ೧೯೪೮ರ ಪೂರ್ವಾರ್ಧದಲ್ಲಿಯೇ ೨೩೧ ಕೋಟಿ ಗಜ ಬಟ್ಟೆಯ ಉತ್ಪಾದನವಾಗಿದೆ.

ಯಂತ್ರಯುಗದ ಭವಿಷ್ಯ

ಲೇಖಕರು— ಶ್ರೀ "ಅರ್ಜುನ"

ಇಂದಿನ ನಾಗರಿಕತೆ ಪಾಶ್ಚಾತ್ಯ ವಿಜ್ಞಾನದ ತಳಹದಿಯ ಮೇಲೆ ನಿಂತಿದೆ. ಈ ವಿಜ್ಞಾನ ಮಾನವನ ದೈಹಿಕ ಮತ್ತು ಬೌದ್ಧಿಕ ಶಕ್ತಿಗಳನ್ನು ಎಷ್ಟು ಉಳಿತಾಯ ಮಾಡಲು ಸಾಧ್ಯವೋ ಅಷ್ಟನ್ನು ಮಾಡಲು ಹೊರಟಿದೆ; ಅಂದರೆ ಸುಖ ಸೌಕರ್ಯಗಳನ್ನು ಹೆಚ್ಚಿಸಲು (ಮತ್ತು ಅದರ ಜೊತೆಜೊತೆಗೇ ದುರ್ಬುದ್ಧಿಯ ಪರಿಣಾಮವಾಗಿ ದುಃಖವನ್ನು ಹೆಚ್ಚಿಸಲು) ಅವಶ್ಯಕವಾದ ಯಾಂತ್ರಿಕ ಸಾಧನಗಳನ್ನು ತಯಾರಿಸಿ ಕೊಟ್ಟಿತು. ಮಾರಕ ಯಂತ್ರೋಪಕರಣಗಳಿಂದ ಮಾನವಕುಲ ನಾಶೋನ್ಮುಖವಾಗುವುದು ಸನ್ನಿಹಿತವೆಂದು ಅಂತಾರಾಷ್ಟ್ರೀಯ ಪರಿಸ್ಥಿತಿಯ ಅವಲೋಕನದಿಂದ ಇಂದು ತಿಳಿಯಬಹುದಾಗಿದೆ. ಆದರೆ ಆಶ್ಚರ್ಯಕರವಾದ ಸಂಗತಿಯೆಂದರೆ ಸೌಲಭ್ಯ ಸಾಧನಗಳು ಕೂಡ ಮಿತಿಮೀರಿ ಹೆಚ್ಚಿದರೆ ಅದರಿಂದಲೂ ಮಾನವ ಜೀವನ ಕಲ್ಪನಾತೀತವಾದ ದುಃಸ್ಥಿತಿಗೆ ಮುಟ್ಟುವುದೆಂಬುದೇ.

ಪ್ರೊ. ಸೀಗ್‌ಫ್ರೀಡ್ ಗೈಡಿಯನರು ಇಂದು ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚುತ್ತಿರುವ ಕಾರ್ಯ ಸಾಧನಗಳತ್ತ ಹೊರಳಿ ವ್ಯಾಪಾರ, ಉದ್ಯೋಗ, ಕೃಷಿ ಮುಂತಾದ ಜೀವನಕ್ಕೆ ಅವಶ್ಯವಾದ ಪ್ರತಿಯೊಂದು ಕಾರ್ಯರಂಗದಲ್ಲೂ ಯಂತ್ರದ ಬಳಕೆ ಬಹಳ ಹೆಚ್ಚಿ ಮಾನುಷ ಶರೀರದ ಶಕ್ತಿವ್ಯಯ ಕಟ್ಟಕಡೆಗೆ ಸಂಪೂರ್ಣ ಅನವಶ್ಯಕವಾಗಬಹುದೆಂದೂ ಹಾಗಾದರೆ ಅದು ಮಾನವನನ್ನು ಯಂತ್ರದಾಸನನ್ನಾಗಿ ಮಾಡಿ ಸಂಪೂರ್ಣ ಪರಾವಲಂಬಿ ಮತ್ತು ಯಂತ್ರಸಹಜ ಜೀವಿಯನ್ನಾಗಿ ಮಾಡಿ ಮುಂದಿನ ಪೀಳಿಗೆಗಳು ನಮ್ಮ ನಾಗರಿಕತೆಯನ್ನು ಅತ್ಯಂತ ಅಧಮಾಧಮ ಅನಾಗರಿಕತೆ ಎಂದು ಕರೆವಂತಾದೀತು ಎಂದೂ ಎಚ್ಚರಿಸುತ್ತಾರೆ. ಇದು ನೂರಕ್ಕೆ ನೂರು ದೇಹಶ್ರಮ ಬೇಕೆಂಬ ವಾದವನ್ನು ಪುರಸ್ಕರಿಸಿ ಹೇಳುವ ಮಾತಲ್ಲ. ಅಮೇರಿಕ ಮೊದಲಾದ ಪಾಶ್ಚಾತ್ಯ ದೇಶಗಳಲ್ಲಿ ಇಂದು ಕಾಣುವ ವಿಪರೀತದಶೆಯ ಯಂತ್ರ ನಿಯಂತ್ರಿತ ಜೀವನದ ಅಸ್ವಾಭಾವಿಕತೆಯನ್ನೂ ಅದರಿಂದುಂಟಾಗುವ ಮಾನವ ಬುದ್ಧಿ ಮತ್ತು ಶರೀರಗಳ ಕ್ಲೈಬ್ಯ, ದೌರ್ಬಲ್ಯ, ಪರಾವಲಂಬಿತ್ವ, ಅಸಹಾಯಕತೆಗಳನ್ನು ಲಕ್ಷ್ಯಕ್ಕೆ ತಂದುಕೊಂಡು ಹೇಳಿದ್ದಾಗಿದೆ.

"೨೦ ನೆಯ ಶತಮಾನದ ಆಧುನಿಕತೆ ಪೂರ್ಣವಿರುವ ನಾಗರಿಕನು ವಿಜ್ಞಾನಸಿದ್ಧ ಗೃಹ ಸೌಲಭ್ಯಗಳನ್ನು ಬಳಸುತ್ತಾನೆ. ಅವನು ತನ್ನ ಕೈಕಾಲುಗಳನ್ನೂ ಬಾಯಿ, ಹಲ್ಲು, ಹೊಟ್ಟೆ ಮುಂತಾದವುಗಳನ್ನೂ ಮೊದಲಿನಷ್ಟು ದುಡಿಸಬೇಕಾಗಿಲ್ಲ. ಅಂದರೆ ಅವುಗಳ ಕೆಲಸವನ್ನು ಯಂತ್ರ ಸಾಧನಗಳು ಸುಲಭ ಮಾಡಿಕೊಟ್ಟವೆ. ಸನಾನಾಂಗ ಮತ್ತು ತಟಸ್ಥ ಪ್ರತಿಕ್ರಿಯೆಯ ಸಾಮಗ್ರಿಗಳನ್ನು ಅವನು ಹೆಚ್ಚಾಗಿ ಮೆಚ್ಚಿಕೊಳ್ಳುತ್ತಾನೆ. ೧೯ ನೆಯ ಶತಕದ ತೋಟಗಾರನು ೩೦ ತರಹದ ಸೇಬುಗಳನ್ನು ಬೆಳೆಯುತ್ತಿದ್ದ. ಅವು ಕಹಿಯಿಂದ ಸಿಹಿಯ ವರೆಗೆ ವರ್ಗೀಕೃತವಾಗಿದ್ದವು. ಇಂದು ದೊಡ್ಡಗಾತ್ರದ ಕೆಂಪು ಸೇಬು ಸರ್ವಾದರಣೀಯ, ಸರ್ವ ರುಚಿಕರ ಎನಿಸಿಬಿಟ್ಟಿದೆ. ಗಟ್ಟಿಯಾಗಿದ್ದ ರೊಟ್ಟಿಯಿಂದು ಅರ್ಧ ಅಗಿದು ನುಣ್ಣಗೆ ಮಾಡಿದಂತೆ ಮೃದುವಾಗಿರುತ್ತದೆ. ಜನರಿಂದು ಹಣ್ಣಿಗಿಂತ ಹಣ್ಣಿನ ರಸ, ಇಡಿ ತುಂಡಿಗಿಂತ ಹೋಳು ಮಾಡಿದ ಮಾಂಸಖಂಡ ಬೇಕೆನ್ನುತ್ತಾರೆ; ನುಣ್ಣಗೆ ಅರೆದ ಬಟಾಟಿ, ಐಸ್‌ಕ್ರೀಂ ಮತ್ತು ಇತರ ವಿವಿಧವಾದ್ಯ ಹಿಟ್ಟಿನ ಪೊಟ್ಟಣಗಳನ್ನು (ಅವನ್ನು ನೀರಿನಲ್ಲಿ ಬೆರೆಸಿದರೆ ಅನೇಕವಿಧದ ಖಾದ್ಯಗಳನ್ನು ತಯಾರಿಸಬಹುದು) ಅವರು ಕೊಳ್ಳುತ್ತಾರೆ."

"ಪಾಲಿಶ ಮಾಡುತ್ತ ಹೋಗಿ ಆಹಾರ ವಸ್ತುವಿನ ಸತ್ವ ನಾಶವಾಗುವ ವರೆಗೆ ಬಂತು; "ಮಾಲಿಶ್" ಮಾಡಿದ್ದು ಹೆಚ್ಚಾಗಿ ಕುದುರೆ ಮರಣೋನ್ಮುಖವಾಯಿತು" ಎಂಬ ಸ್ಥಿತಿ ಬಂದಿದೆ ಎಂಬುದೇ ಮೇಲೆ ಹೇಳಿದ ಪ್ರೊಫೆಸರರ ವಾಕ್ಯಗಳ ಸಾರಾಂಶ. ಅತ್ಯಲೌಕಿಕತೆಯಿಂದ ಹಿಂದೀ ನಾಗರಿಕತೆ ಪರದಾಸ್ಯದಲ್ಲಿ ಹೇಗೆ ಅನೇಕ ವರ್ಷಗಳ ವರೆಗೆ ಕೊಳೆವಂತಾಯಿತೋ ಹಾಗೇ ಅತಿಲೌಕಿಕತೆಯಿಂದ ಪಾಶ್ಚಾತ್ಯ ನಾಗರಿಕತೆಯಿಂದು ಮರಣಶಯ್ಯೆಯನ್ನು ಕಾಣುತ್ತಿದೆ ಎಂಬುದು ವಿಚಾರವನ್ನು ಕೆರಳಿಸುವ ಮಾತಾಗಿದೆ. ಈ ದೃಷ್ಟಿಯಿಂದಲೇ ಗಾಂಧಿಯವರು ಕೈಗಾರಿಕೆ, ಅಧಿಕಾರಗಳ ವಿಕೇಂದ್ರೀಕರಣವನ್ನೂ ಯಂತ್ರೋಪಕರಣಗಳ ಅತಿ ಬಳಕೆಯ ತಿರಸ್ಕಾರವನ್ನೂ ಉಪದೇಶಿಸಿದರು.

ಹಿ. ಎಚ್. ಜಿ. ವೆಲ್ಸರು "ಪ್ರಪಂಚಗಳ ಯುದ್ಧ" ಎಂಬ ತಮ್ಮ ಕಾಲ್ಪನಿಕ ಕಾದಂಬರಿಯಲ್ಲಿ ನಾಗರಿಕತೆ ವಿಜ್ಞಾನದ ಮೆಟ್ಟಿಲನ್ನೇರಿ ನಮಗಿಂತ ಮುಂದೆ ಹೋದ ಮಂಗಳ ಲೋಕದ ಅತಿಮಾನವರನ್ನು ವರ್ಣಿಸುತ್ತ, ಆಹಾರ ಸೌಲಭ್ಯಕ್ಕಾಗಿ ದುರ್ಬಲರ ರಕ್ತವನ್ನು ಸಬಲರು ಯಂತ್ರದ ಕೊಳವೆಯೊಂದನ್ನು ಬೇಟೆಗಳ ಮೈಗೆ ಹಚ್ಚಿ ಹೀರುತ್ತಿದ್ದರು, ನಡಿಗೆಯ ಅವಶ್ಯಕತೆಯುಂಟಾಗದಂತೆ ಯಾವಾಗಲೂ ಅವರು ನೆಲಜಲಗಳಲ್ಲಿ ಸಂಚರಿಸುವ (ಈಗ ಬೇಕಾದರೆ ವಾಯು ಮಂಡಲವನ್ನು ಸೇರಿಸಿಕೊಂಡು ಮೂರೂ ಕಡೆ ಹೋಗಬಲ್ಲ ವಾಹನವೊಂದನ್ನೂ ಬಳಸುವ ವಿಚಾರವನ್ನೂ ತೆಗೆದುಕೊಳ್ಳಬಹುದು) (ವಾಹನವೊಂದನ್ನು ಸದಾ ಏರಿ ಸಂಚರಿಸುತ್ತಿದ್ದರು. ಅವರ ಕೈಗಳಿಗೆ ಕೆಲಸವಿಲ್ಲದೆ ಅವು ಲತಾಪ್ರತಾನಗಳಂತೆ ಜೋತು ಬಿದ್ದಿದ್ದು, ಶತ್ರುನಿಗ್ರಹಕ್ಕಾಗಿ ವಿಚಿತ್ರ ವಿಧದ ಹೊಗೆಯುಗುಳುವ ಬಂದೂಕೊಂದನ್ನೂ ಮರಣ ಕಿರಣವನ್ನೂ (Death Ray) ಅವರು ಇಟ್ಟುಕೊಂಡಿದ್ದರು ಎಂದು ಮುಂತಾಗಿ ಹೇಳಿ, ಲಂಡನ್ನಿನಲ್ಲಿಯ ಮಾನವರನ್ನು ನಾಶ ಮಾಡಿ ಅವರಲ್ಲಿ ಕೆಲವರ ರಕ್ತ ಕುಡಿದು ತದ್ಗತವಾದ ಕ್ರಿಮಿಗಳ ಪ್ರತಿಕ್ರಿಯೆಯಿಂದ ಹತರಾದರು ಎಂದು ವಾಚಕರ ವಿಸ್ಮಯವನ್ನು ಗಗನಕ್ಕೊಯ್ಯುತ್ತಾರೆ. ಕಥೆ ಕಾಲ್ಪನಿಕವಾದುದಾದರೂ ವಿಜ್ಞಾನಸೃಷ್ಟಿಯ ದಾಸ್ಯದ ದುಷ್ಪರಿಣಾಮವು ಮಾನವನ ಶರೀರ, ಬುದ್ಧಿ ಮತ್ತು ನಡತೆಗಳ ಮೇಲೆ ಎಷ್ಟರ ಮಟ್ಟಿಗೆ ತರ್ಕಶುದ್ಧವಾಗಿ ಆಗಬಲ್ಲುದೆಂಬುದು ಅದರಿಂದ ಸ್ಪಷ್ಟವಾಗುತ್ತದೆ.

ಪ್ರೊ. ಜೆ. ಬಿ. ಎಸ್. ಹಾಲ್ಡೇನರು ತಮ್ಮ ಒಂದು ಪ್ರಬಂಧದಲ್ಲಿ ಆಧುನಿಕ ಅಮೇರಿಕವು ಕೃಮಿಯುದ್ಧದ (Germ warfare) ಕ್ರಮಗಳನ್ನು ಸಿದ್ಧಪಡಿಸಿಕೊಂಡು ಅವನ್ನು ತಮ್ಮ ನಾಡಿಗೆ ಅವರು ಪ್ರಯೋಗಿಸದಿರುವಂತೆ ನೋಡಿಕೊಂಡು ಬೇರೆ ನಾಡುಗಳ ಮೇಲೆ ತಾವು ಹೇಗೆ ಪ್ರಯೋಗಿಸಬಹುದು ಎಂದು ವಿಚಾರ ಮಾಡುತ್ತಿರುವ ಅಂಶವನ್ನು ಬಯಲಿಗೆಳದಿದ್ದಾರೆ.

ಅಣುಬಾಂಬಿನ ನಿಯಂತ್ರಣದ ಬಗ್ಗೆ ರಶಿಯ ಅಮೇರಿಕಗಳಲ್ಲಿ ಒಮ್ಮತವಾಗದೆ ಇರುವದೇ ಮೂರನೆಯ ಮಹಾಯುದ್ಧದಿಂದಾಗಬಹುದಾದ ಮಾನವ್ಯವಿತ್ತ ಜೀವಿತಗಳ ಅಪಾರ ಹಾನಿಯ ಕಲ್ಪನೆಯನ್ನು ಮಾಡಿಕೊಟ್ಟಿದೆ. ಅದರ ಜೊತೆಗೆ ಕೃಮಿಪ್ರಯೋಗದಿಂದ ಚರಾಚರಗಳ ಮೈಯಲ್ಲಿ ನಾನಾ ವಿಧದ ರೋಗರುಜೆಗಳುದ್ಭವಿಸುವಂತೆ ಮಾಡುವ ಈ ಹೊಸ ಮಾರಕ ಸಾಧನದ ಸಂಶೋಧನಪೂರ್ಣತೆಗೆ ಮುಟ್ಟುತ್ತಿರುವುದು ಈಗ ತಿಳಿದುಬಂದಿದೆ. ಇದು ಯಂತ್ರೋಪಕರಣಗಳ ವಿಜ್ಞಾನಜನ್ಯ ಪದಾರ್ಥಗಳ ದುರುಪಯೋಗದಿಂದಾಗಬಹುದಾದ ಹಾನಿಯನ್ನು ಕಣ್ಣೆದುರಿಗಿಡುತ್ತದೆ. ಒಟ್ಟು ಸುಖಸಾಧನಗಳಲ್ಲಿ ಅತ್ಯವಸ್ಥೆಗೆ ಮುಟ್ಟುವುದರಿಂದ ಮತ್ತು ಅನ್ಯ ದುಃಖ ಸಾಧಕ ಆಯುಧಗಳ ಉತ್ಕರ್ಷದಿಂದ ನಾಡುಗಳು ಪರಸ್ಪರ ವಿನಾಶಕ್ಕೆ ಕಾರಣವಾಗುವದನ್ನು ಗಮನಿಸಿದರೆ ಈ ಯಂತ್ರಯುಗದ ನಾಗರಿಕತೆಯ ಭೀಕರವಾದ ನಗ್ನ ಸ್ವರೂಪವು ಎದುರು ನಿಲ್ಲುತ್ತದೆ!

'ನಾಹಂ ಕರ್ತಾ ಹರಿಃ ಕರ್ತಾ' ಎಂಬುದು ಭಕ್ತಬುದ್ಧಿಯಾದರೆ, "ಅಹಂ ಕರ್ತಾ ಅಹಂ ಹರ್ತಾ" ಎಂಬುದು ಉತ್ಸಿಕ್ತ ಬುದ್ಧಿಯೆನಿಸುತ್ತದೆ. ಈ ಬುದ್ಧಿಯಿಂದ ಉಂಟಾಗುವ ವಿನಾಶದಿಂದ ಉಳಿಯಬೇಕಾದರೆ ಜಗತ್ತಿನ ರಾಷ್ಟ್ರಗಳು ಪರಿಣಾಮದ ಭೀಕರ ಸ್ವರೂಪವನ್ನು ಮನಗಂಡು ಸ್ವಪರ ಹಿತಕ್ಕಾಗಿ ಯಂತ್ರೋಪಯೋಗವನ್ನು ಮಾರಕ ಮತ್ತು ಪೂರಕ ಈ ಎರಡೂ ಮುಖಗಳಲ್ಲಿ — ಮಿತವಾಗಿಡಲು ಯೋಜನೆಯನ್ನು ಸಿದ್ಧಪಡಿಸಿ ಆ ರೀತಿ ನಡೆದುಕೊಳ್ಳುವದೊಂದೇ ತರಣೋಪಾಯ. ವಿಜ್ಞಾನ ಮತ್ತ ಬುದ್ಧಿಗೆ ಸುಜ್ಞಾನದ ಕಿರಣ ಕಾಣಿಸಿದೆ ಹೋದರೆ ಇದಾವುದೂ ಸಾಧಿಸದು. ಅಂಥ ಮಾರ್ಗವನ್ನು ಮಾನವಕುಲ ಹಿಡಿದೀತೆ? ಯಂತ್ರಮಾಯೆಯಿಂದ ಮುಕ್ತವಾಗಿ ಬಾಳುವತ್ತ ಲಕ್ಷವೀಯುವುದೋ ?

ನಾರದ ಭವಿಷ್ಯ

ಜ್ಯೋತಿಷಿ—ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯಕಥನ ಆಫೀಸ ಖಡೇಬಝಾರ, ಬೆಳಗಾವಿ.

ಅಗಸ್ಟ ೯ ರಿಂದ ೧೫ ರ ವರೆಗೆ

ಮೇಷ

ನಿಮ್ಮ ಮತ್ತು ನಿಮಗಿಂತ ಹಿರಿಯರಾದವರ ಪ್ರಕೃತಿ ಅಲ್ಪಸ್ವಲ್ಪ ಕೆಡುವದು. ಆದರೆ ಹೆಂಡತಿಯ ಮತ್ತು ಉಳಿದ, ಪ್ರಾಪಂಚಿಕ ಸುಖ ಉತ್ತಮ. ಮಕ್ಕಳಲ್ಲಿ ಒಬ್ಬರಿಂದ ವಿಶೇಷ ಲೌಕಿಕದ ಆದರೆ ಮತ್ತೊಬ್ಬರಿಂದ ಲೋಕಾಪವಾದ ಬರುವಂತಹ ಕೃತಿಗಳು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅಷ್ಟಕ್ಕಷ್ಟೇ. ಆದರೆ ಲಾಭ ಅನುಕೂಲ. ಮಿತ್ರಸುಖ ಉತ್ತಮ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು ಇಲ್ಲವೆ ಒಳ್ಳೆ ಅನುಕೂಲತೆ. ಇದ್ದರೂ ಮನಸ್ಸಿನಲ್ಲಿ ಒಂದು ಬಗೆಯ ಹುರುಹುರಿ ಇದ್ದುದೇ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಅಶ್ವಿನಿಯ ಕೊನೆಯ ೩ ಮತ್ತು ಭರಣಿಯ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೦, ೧೧, ೧೨, ೧೫ ಅನುಕೂಲ.

ವೃಷಭ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಉತ್ತಮ. ಆದರೆ ಆಪ್ತರು ಮತ್ತು ನೆರೆಯವರಿಂದ ಹೊಟ್ಟೆತನದಿಂದ ಬಹಳ ತೊಂದರೆ. ಪೂಜ್ಯ ವ್ಯಕ್ತಿಗಳಲ್ಲಿ ಒಬ್ಬರಿಗೆ ಕ್ಲೇಶ ಕ್ವಚಿತ್ ವಿಯೋಗದ ಸಂಭವ. ಉದ್ಯೋಗದಲ್ಲಿ ಪ್ರಗತಿ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಉತ್ತಮ. ಪ್ರಿಯಜನರ ಆಕಸ್ಮಿಕ ಭೆಟ್ಟಿ ಮತ್ತು ಸಹವಾಸದ ಯೋಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರಸುಖ ಉತ್ತಮ. ವಿದ್ಯೆಯ ಮತ್ತು ಬುದ್ಧಿಮತ್ತೆಯ ಕೆಲಸಗಳಲ್ಲಿ ಒಳ್ಳೆ ಯಶಸ್ಸು. ಅಲ್ಪಸ್ವಲ್ಪ ವಾಹನ ಸುಖ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಆದರೆ ರೋಹಿಣಿಯ ಕೊನೆಯ ೩ ಮತ್ತು ಮೃಗಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೯, ೧೩, ೧೪ ಅನುಕೂಲ.

ಮಿಥುನ

ಪ್ರಕೃತಿ ಅನುಕೂಲ. ಆದರೆ ಹೆಂಡತಿ ಮತ್ತು ಮಕ್ಕಳದು ಕೆಡುವದು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಬಹಳ ಉತ್ತಮ. ಉದ್ಯೋಗದಲ್ಲಿ ಪ್ರಗತಿ ಹೆಚ್ಚು. ಆದರೆ ಲಾಭ ಮತ್ತು ಪ್ರತಿಷ್ಠೆ ಧಂದೆದವರಿಗಿಂತ ನೋಕರದಾರರಿಗೆ ಹೆಚ್ಚು ಅನುಕೂಲ. ವಾದದಲ್ಲಿ ಹಿಮ್ಮೆಟ್ಟುವದು. ಶತ್ರುಗಳು ನಿಮ್ಮ ಸಹಾಯಕಕರ್ತರ ಮನಸ್ಸನ್ನು ಕಲುಷಿತ ಮಾಡುವ ಪ್ರಯತ್ನ ನಡೆಸುವರು. ಮಿತ್ರರೂ ಸ್ವಲ್ಪ ತಿರುಗಿ ಬೀಳುವರು. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಪುನರ್ವಸುವಿನ ಕೊನೆಯ ೩ ಮತ್ತು ಆರಿದ್ರಾದ ೧ ನೇ ಚರಣಕ್ಕೆ ಬಹಳ ತೊಂದರೆ. ತಾ. ೧೦, ೧೧, ೧೫ ಅನುಕೂಲ.

ಕರ್ಕ

ಪ್ರಕೃತಿ ಅನುಕೂಲ. ಆದರೆ ಹೆಂಡತಿಗೂಡ ಅಲ್ಪಸ್ವಲ್ಪ ವಿರೋಧ ಬರುವಂಥ ಘಟನೆಗಳು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ತೊಂದರೆಯಿಂದಲೇ ಸಾಧ್ಯ. ಆಪ್ತರು ಮತ್ತು ನೆರೆಯವರಿಂದ ಸುಳ್ಳುಸುಳ್ಳೆ ಆರೋಪ ಮತ್ತು ಮಿತ್ರರಿಂದಲೂ ಉಪಹಾಸದ ಮಾತುಗಳು. ಸ್ತ್ರೀ ವರ್ಗದಲ್ಲಿ ನಿಮ್ಮ ಬಗ್ಗೆ ಬಹಳ ಅನಾದರ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಉತ್ತಮ. ಆದರೆ ಲಾಭಕ್ಕಿಂತ ವೆಚ್ಚ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯೋಜಿಸಿದ ಗತ್ತುಗಾರಿಕೆ ತಿರುಗಿ ನಿಮ್ಮ ಮೈಮೇಲೆಯೇ ಬೀಳುವ ಪ್ರಸಂಗ. ಪ್ರವಾಸ ಉತ್ತಮ ಮತ್ತು ಭೆಟ್ಟಿ ಮತ್ತು ಪತ್ರವ್ಯವಹಾರ ಅದಕ್ಕಿಂತ ಕಡಮೆ ಅನುಕೂಲ. ಪುಷ್ಯದ ಕೊನೆಯ ೩ ಮತ್ತು ಆಶ್ಲೇಷಾದ ೧ ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೯, ೧೦, ೧೧, ೧೨ ಅನುಕೂಲ.

ಸಿಂಹ

ಪ್ರಕೃತಿ ಸಾಧಾರಣವೇ. ಮಿತ್ರರು ಮತ್ತು ಮಕ್ಕಳಲ್ಲಿ ಕೆಲ ಜನರಿಗೆ ಕಾಹಿಲೆ. ಪ್ರಾಪಂಚಿಕ ಸುಖ ಸಾಮಾನ್ಯವಾಗಿ ಅನುಕೂಲ. ಆದರೆ ಪ್ರತಿಯೊಂದರಲ್ಲಿಯೂ ಹೆಂಡತಿಯದೇ ಮೇಲುಗೈ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಕಡಮೆ. ಆದರೆ ಪ್ರತಿಷ್ಠೆ ಅನುಕೂಲ. ಸ್ಥಾವರದಲ್ಲಿ ಕೆಲ ಅನುಕೂಲ ಘಟನೆಗಳು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಆದರೆ ಅದಕ್ಕಾಗಿ ವೆಚ್ಚ ಮತ್ತು ತೊಂದರೆಯೂ ಬಹಳ ಹೆಚ್ಚು. ಪತ್ರವ್ಯವಹಾರಕ್ಕಿಂತ ಪ್ರವಾಸ ಮತ್ತು ಭೆಟ್ಟಿ ಅನುಕೂಲ. ಮಘಾದ ಕೊನೆಯ ೩ ಮತ್ತು ಪೂರ್ವಾದ ೧ ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೯, ೧೦, ೧೧, ೧೨ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಮಕ್ಕಳಿಂದ ತೊಂದರೆಯುಂಟಾಗುವ ಕೃತ್ಯಗಳು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಸಮ್ಮಿಶ್ರ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಕುಂಠಾ. ಆದರೆ ವೆಚ್ಚ ಬೆಳೆಯುತ್ತ ಹೋಗುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು. ಪ್ರವಾಸಾದಿ ಕೆಲಸ ಒಟ್ಟಾರೆ ಅನುಕೂಲ. ಹಸ್ತಾದ ಕೊನೆಯ ೩ ಮತ್ತು ಚಿತ್ರಾದ ೧ ನೇ ಚರಣಕ್ಕೆ ತೊಂದರೆ ಹೆಚ್ಚು. ತಾ. ೯, ೧೦, ೧೧, ೧೨ ಅನುಕೂಲ.

ತುಲಾ

ನಿಮ್ಮ ಪ್ರಕೃತಿ ಅನುಕೂಲ. ಆದರೆ ಹೆಂಡತಿಯದು ಕೆಡುವದು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಸಾಧಾರಣವಾಗಿ ತೊಂದರೆಯದು. ಅಪ್ರಿಯ ಜನರು ಹೆಚ್ಚಾಗಿ ಬರುವದು ಹೋಗುವದು ನಡೆಯುತ್ತಲೆ ಹೋಗುವದು. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಉತ್ತಮ. ಆದರೆ ಪ್ರತಿಷ್ಠೆಯ ಮೇಲೆ ಬಹಳ ದೊಡ್ಡ ಆಘಾತವಾಗುವ ಅಂಜಿಕೆ. ಅನೇಕರೊಡನೆ ನಿರರ್ಥಕ ವೈರ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹಿಮ್ಮೆಟ್ಟುವದು. ಧಾರ್ಮಿಕ ಇಲ್ಲವೆ ಮಂಗಲ ಕೃತ್ಯಗಳಲ್ಲಿ ಅಡಚಣಿಗಳು. ಪ್ರವಾಸಾದಿ ಕೆಲಸ ಕಷ್ಟಸಾಧ್ಯ. ಸ್ವಾತಿಯ ಕೊನೆಯ ೩ ಮತ್ತು ವಿಶಾಖಾದ ಒಂದನೇ ಚರಣಕ್ಕೆ ಹೆಚ್ಚು ತೊಂದರೆ. ತಾ. ೧೨, ೧೩, ೧೪ ಅನುಕೂಲ.

ವೃಶ್ಚಿಕ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಮಕ್ಕಳಲ್ಲಿ ಬಹಳ ಉನ್ನತಿ. ಪ್ರಿಯ ಜನರ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಅಕಲ್ಪಿತ ಲಾಭದ ಸಂಭವ, ಮಹತ್ವ ಹೆಚ್ಚುವಂಥ ಸಹಾಯವನ್ನು ಮಿತ್ರರು ಮಾಡುವರು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಸ್ವಪ್ನ ಶುಭ ಮತ್ತು ಭಾವೀ ಸೂಚಕ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಅನುರಾಧಾದ ಕೊನೆಯ ೩ ಮತ್ತು ಜ್ಯೇಷ್ಠಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೯, ೧೩, ೧೪, ೧೫ ಅನುಕೂಲ.

ಧನು

ನಿಮ್ಮ ಹೆಂಡತಿಯ ಮತ್ತು ಮಕ್ಕಳ ಪ್ರಕೃತಿಯ ಬಗ್ಗೆ ಬಹಳ ತಕರಾರು. ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಸಾಧಾರಣವೇ. ಉದ್ಯೋಗದಲ್ಲಿ ಲಾಭ ಅನುಕೂಲ. ಆದರೆ ಪ್ರಗತಿ ಮತ್ತು ಪ್ರತಿಷ್ಠೆ ಕಡಮೆ. ಸರಕಾರೀ ಕೆಲಸದಲ್ಲಿ ಅಧಿಕಾರಿವರ್ಗದ ಭಯದಲ್ಲಿ ಅಯಾ ಜನರಿಂದ ಬಹಳ ತೊಂದರೆ. ಮಿತ್ರಸುಖ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆ

—ಮುಂದಿನ ಪುಟಕ್ಕೆ

Reg. No. B. 3148

LICENCE No. 3
Licensed to Post without Prepayment

KARMAVEER 9-8-48



ಪುಸ್ತಕ ಪರಿಚಯ

(ನಮಗೆ ಬಂದ ಎಲ್ಲ ಪುಸ್ತಕಗಳನ್ನು ಸಾದರದಿಂದ ಸ್ವೀಕರಿಸಿದ ಉಲ್ಲೇಖ ಮಾಡುವೆವಾದರೂ ಆ ಎಲ್ಲವುಗಳ ವಿಮರ್ಶೆ ಮಾಡಿಯೇ ತೀರುವೆವೆಂದು ಸ್ವೀಕರಿಸಲಾದುದಾಗಿ ಈ ಮೂಲಕ ತಿಳಿಸಬಯಸುತ್ತೇವೆ. —ಸಂ.)

ಇಂಜೆಕ್ಷನ್ ವಿಜ್ಞಾನಶಾಸ್ತ್ರ (ಸೂಚಿಕಾಭರಣವಿದ್ಯೆ)

ಲೇಖಕರು ಮತ್ತು ಪ್ರಕಾಶಕರು, ವೈದ್ಯ [illegible] ಕಾಲ [illegible] ಮುಂದಿದೆ, ಬೆಲೆ [illegible]. ಪುಟಗಳು [illegible].

[illegible] ಸೂಚಿಕಾ ಭರಣ ವಿದ್ಯೆಯ ಉಲ್ಲೇಖವಿದ್ದರೂ ಅದರ ಬಳಕೆ ನಮ್ಮ ದೇಶದ ವೈದ್ಯದಲ್ಲಿ [illegible]. ಪಾಶ್ಚಾತ್ಯ ಚಿಕಿತ್ಸಾ ಪದ್ಧತಿಯಲ್ಲಿ ಇದಕ್ಕೆ ಅಗ್ರಸ್ಥಾನ [illegible] ಇಂಜೆಕ್ಷನಕ್ಕೆ [illegible]. ಈ ವಿಷಯವನ್ನು ಕನ್ನಡ ವೈದ್ಯರಿಗೆ [illegible] ಸಾಹಿತ್ಯ ಕನ್ನಡದಲ್ಲಿ ಇದೇ ಮೊದಲಿನದು. [illegible] ಈ ಪುಸ್ತಕದ ಲೇಖಕರಿಗೆ ಕನ್ನಡ ವೈದ್ಯರೂ ಕನ್ನಡ ಸಾಹಿತ್ಯ ಲೋಕವೂ ಬಹಳ [illegible]. ವಿವೇಚಿತ ವಿಷಯ ವನ್ನು ಎಲ್ಲರಿಗೂ ತಿಳಿವಂತೆ ಸರಳವಾಗಿ [illegible] ವಿಪುಲ ರೇಖಾ ಚಿತ್ರಗಳನ್ನು ಕೊಟ್ಟು [illegible] ಸ್ಪಷ್ಟಗೊಳಿಸಲಾಗಿದೆ. ಈ ಪುಸ್ತಕದಲ್ಲಿ [illegible] ಕಾಣುವ ಕುಂದೆಂದರೆ ಮುದ್ರಾ ದೋಷ. [illegible] ಈ ಗ್ರಂಥವು ಅತ್ಯವಶ್ಯ ಮಾರ್ಗದರ್ಶಕ [illegible].

ರಜತಮಹೋತ್ಸವ ಸ್ಮಾರಕ ಪ್ರಕಟಣೆ

ಸಂಪಾದಕರು, ಶ್ರೀ. [illegible] ಪ್ರಕಾಶಕರು ಶ್ರೀ. [illegible] ಪುಟಗಳು [illegible].

[illegible] ಈ ರಜತ ಮಹೋತ್ಸವದ [illegible] ಪ್ರಕಟವಾಗಿದೆ. ಇದರಲ್ಲಿ [illegible] ಭಾಗಗಳನ್ನು [illegible] ನಾನಾ [illegible] ಪ್ರಮುಖ ಕಾರ್ಯಕರ್ತರ ಪರಿಚಯ [illegible] ಅನೇಕ ವಿಷಯಗಳನ್ನು ಕುರಿತು [illegible] ವಿವರಣೆ ಕೊಡಲಾಗಿದೆ. ಪುಸ್ತಕವನ್ನು ವಿಪುಲ ಚಿತ್ರಗಳಿಂದ ಅಲಂಕರಿಸಲಾಗಿದೆ. ಸಹಕಾರಿ ಸಂಘಗಳಲ್ಲಿ ಆಸಕ್ತಿ ಇದ್ದವರೆಲ್ಲ ನೋಡ ಬೇಕಾದ ಪುಸ್ತಕ.

ಕಾಂಗ್ರೆಸ್ ಸೇವಾದಳ ಹಿಂದೀ ಕವಾಯತ್

ಲೇಖಕರು, ಸ. ವಾಸುದೇವರಾವ, ಪ್ರಕಾಶಕರು, ಕೇಂದ್ರ ಸೇವಾದಳ ಸಮಿತಿ, ಅರಳೇಪೇಟೆ, ಬೆಂಗಳೂರು. ಪುಟಗಳು ೬೨. ಬೆಲೆ ೮ ಆಣೆ.

ಅ. ಭಾ. ಕಾಂಗ್ರೆಸ ಕಾರ್ಯಕಾರಿ ಸಮಿತಿಯ ನಿರ್ಣಯದ ಪ್ರಕಾರ ಕಾಂಗ್ರೆಸ ಸೇವಾದಳ ಸಮಿತಿಯವರು ಕವಾಯತಿಗಾಗಿ ಹೊಸ ಆಜ್ಞೆ ಗೊತ್ತು ಮಾಡಿದ್ದಾರೆ. ಹಿಂದುಸ್ಥಾನದಲ್ಲೆಲ್ಲ ಕವಾಯಿತಿನ ಈ ಆಜ್ಞೆಗಳಲ್ಲಿ ಏಕರೂಪತೆ ಇರುವದು ಅವಶ್ಯವಿದ್ದು ಕರ್ನಾಟಕಕ್ಕೆ ಅನುಕೂಲವಾಗಲೆಂದು ಈ ಪುಸ್ತಕ ಬರೆಯಲಾಗಿದೆ. ದಕ್ಷಿಣ ಆಫ್ರಿಕದಲ್ಲಿ ಸ್ವಯಂಸೇವಕ ವೇಷದಲ್ಲಿದ್ದ ಮ. ಗಾಂಧಿಯವರ ಮತ್ತು ಅ. ಭಾ. ಕಾಂ. ಸೇವಾದಳದ ಸಂಚಾಲಕರಾದ ಡಾ. ಹರ್ಡೀಕರರ ಭಾವಚಿತ್ರಗಳಿವೆ.

ಸಾದರ ಸ್ವೀಕಾರ

ನೊಗ್ಗೆಯ ಮಾಲೆ ಬರೆದವರು, ಮಹಾಂತದೇವ, ಶಿವಯೋಗ ಮಂದಿರ, ಇಲಕಲ್ಲ. ಪ್ರಕಾಶಕರು, ಜಿ. ಎಲ್. ಚನ್ನಪ್ಪಾ ಬುಕ್ ಸೆಲರ, ಬಾಗಲಕೋಟೆ. ಪುಟಗಳು ೪೧. ಬೆಲೆ ೪ ಆಣೆ.

ದಿಲ ಪುರಾಣ ಬರೆದವರಾರು? ಲೇಖಕರು, ಪಂ. ಲಕ್ಷ್ಮಣದೇವ ವಿದ್ಯಾರ್ಥಿ, ಸಂಪಾದಕರು ವೈದಿಕ ಧರ್ಮ ಪ್ರಚಾರಕ ಮತ್ತು ಸದ್ಧರ್ಮ ಗ್ರಂಥ ಮಾಲೆ ಮಂಗಳೂರು. ಬೆಲೆ ೨॥ ಆಣೆ.

Fundamental Rights

In the Draft Constitution of India By S. G. Vaze (servants of India society, Poona) Published by Mr. J. R. Gharpure, Law College Poona 4.

ವಾರದ ಭವಿಷ್ಯ

(ಗತಕ ಪುಟದಿಂದ)

[illegible] ಪ್ರವಾಸಾದಿ ಕೆಲಸ [illegible] ಕೊನೆಯ ೪ [illegible] ಚರಣಕ್ಕೆ ಹೆಚ್ಚು [illegible]. ತಾ. ೯, ೧೦, ೧೧ ಅನುಕೂಲ.

ಮಕರ

ಪ್ರಕೃತಿ ಮತ್ತು ಸ್ತ್ರೀ ಸುಖ ಹೆಚ್ಚು ಕೆಡುವದು. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಅನುಕೂಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ತುಂಬಾ. ಆದರೆ ನಿರರ್ಥಕವಾದ ವೆಚ್ಚವೂ ಬಹಳ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಮಿತ್ರ ಸುಖ ಉತ್ತಮ. ದೂರಿನ ಮತ್ತು ಸುಖದ ಪ್ರವಾಸ. ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಶ್ರವಣಾದ ಕೊನೆಯ ೩ ಮತ್ತು ಧನಿಷ್ಠಾದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೯, ೧೦, ೧೩, ೧೪ ಅನುಕೂಲ.

ಕುಂಭ

ಸ್ವತಃ ನಿಮ್ಮ ಪ್ರಕೃತಿ ಅನುಕೂಲ. ಆದರೆ, ಹೆಂಡತಿ ಮತ್ತು ಮಕ್ಕಳಿಗೆ ಕಿರಕಳ ಕಾಹಿಲೆ. ಬಾಂಧು ವರ್ಗದವರಲ್ಲಿ ಒಬ್ಬರಿಂದ ಬಹಳ ವಿರೋಧ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಮ್ಮಿಶ್ರ. ಮನರಂಜನೆಯ ಯೋಗ ಮೇಳಿಂದ ಮೇಲೆ ಬರುತ್ತ ಹೋಗುವ ಸಂಭವ. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಆದರೆ ಪ್ರತಿಷ್ಠೆ ಮತ್ತು ಲಾಭ ಸಾಧಾರಣ. ಮಿತ್ರತ್ವದಲ್ಲಿ ವಿರೋಧ ಇಲ್ಲದೆ ಅವರಿಂದ ಅತ್ಯಂತಿಕವಾಗಿ ಹಾನಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳ ಜೋರು ಹೆಚ್ಚು. ಪತ್ರವ್ಯವಹಾರಕ್ಕಿಂತ ಭೆಟ್ಟಿ ಮತ್ತು ಪ್ರವಾಸ ಅನುಕೂಲ. ಶತತಾರಿಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ೧ ನೇ ಚರಣಕ್ಕೆ ತೊಂದರೆಯಿಂದಲೆ ಯಶಸ್ಸು. ತಾ. ೧೦, ೧೩, ೧೪, ೧೫ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಪ್ರತಿಯೊಂದರಲ್ಲಿ ಹೆಂಡತಿಯ ಮೇಲುಗೈ. ಮಕ್ಕಳಲ್ಲಿ ಬಹಳ ಉನ್ನತಿ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಆದರೆ ಮಿತಿಮೀರಿ ವೆಚ್ಚ ಮಾಡಿ ತನ್ನ ಮಹತ್ವವನ್ನು ಹೆಚ್ಚಿಸಿಕೊಳ್ಳುವ ಈರ್ಷೆ. ಮಿತ್ರತ್ವದಲ್ಲಿ ವಿರೋಧ. ಪ್ರವಾಸಾದಿ ಕೆಲಸ ಹಿತಸ್ಥ. ಉತ್ತರಾಭಾದ್ರಪದದ ಕೊನೆಯ ೩ ಮತ್ತು ರೇವತಿಯ ೧ ನೇ ಚರಣಕ್ಕೆ ತೊಂದರೆಯಿಂದಲೇ ಯಶಸ್ಸು. ತಾ. ೯, ೧೩, ೧೪, ೧೫ ಅನುಕೂಲ.

ಮಕ್ಕಳಿಗೆ ಸ್ಕೂಲ್ ಮನೆಲಲ್ಲೇ

(೬ನೇ ಪುಟದಿಂದ)

ಶಾಲೆಗಳಲ್ಲಿ ಬರತೊಡಗಿವೆ. ಭಾವನೆಗಳನ್ನು ಪರಿಶೋಧಿಸುವಂತೆ, ಡಾಕ್ಟರರು ಹೇಳುವ ಕುಂದುಕೊರತೆಗಳನ್ನು ಸರಿಪಡಿಸಿಕೊಂಡಲ್ಲಿ ಪಾಲಕರು ದೇಶಕ್ಕೆ ಹಿತಮಾಡುವರಷ್ಟೇ ಅಲ್ಲ, ತಮ್ಮ ಮಕ್ಕಳ ಹಿತವನ್ನು ಸಾಧಿಸಿದಂತಾಗುವದು.

ಶಿಕ್ಷಣ ಸುಧಾರಣೆ

ಮುಂದುಗಡೆ ದೇಶದ ಆರೋಗ್ಯ ಗೊತ್ತು [illegible] ಅವುಗಳ ಆಗು-ಹೋಗುಗಳ ಕಡೆಗೆ ಸರಕಾರವು ಲಕ್ಷ್ಯ ಪೂರೈಸುತ್ತದೆ. ಇಂಗ್ಲಂಡ, ಅಮೇರಿಕಾ ಮುಂತಾದ ದೇಶಗಳಲ್ಲಿದ್ದಂತೆ, ನಮ್ಮ ದೇಶದಲ್ಲಿಯೂ ಮೂರು [illegible] ಮಕ್ಕಳಿಗೆ "ಶಿಶು ವಿಹಾರ" ಗಳನ್ನು ಸ್ಥಾಪಿಸಲು ಪ್ರಯತ್ನಿಸಲಾಗುತ್ತದೆ. [illegible] ಬರಬೇಕಾದರೆ, ಇನ್ನೂ [illegible] ಕಾಲ ಹಾಗಬೇಕು.

ನಮ್ಮ [illegible] ಹೊಸ ಶಾಲೆಯಲ್ಲಿ ಶಿಕ್ಷಣವು [illegible] ಶಾಸ್ತ್ರದ [illegible] ಮೇಲೆ ನಡೆಸ [illegible]. [illegible] ಪ್ರತಿಯೊಂದು ಶಾಲೆ [illegible] ಅವಶ್ಯಕತೆಯು [illegible]. ಆದರೆ, ಇಂಥ [illegible] ಶಾಲೆಯಲ್ಲಿ [illegible] ಬರುವದಿಲ್ಲ. ಪ್ರತಿಯೊಂದು ಶಾಲೆಯು ಒಬ್ಬ ಮಾನಸ ಶಾಸ್ತ್ರಜ್ಞನ ಅಂಕಿತಕ್ಕೆ ಒಳಪಟ್ಟಾಗ ಮಾತ್ರ ನಮ್ಮ ದೇಶದ ಏಳ್ಗೆ.

ಅಲ್ಲಿಯ ವರೆಗೆ ಶಿಕ್ಷಕರೂ ಪಾಲಕರೂ ಕೈಮುಚ್ಚಿಕೊಂಡು ಕುಳಿತಿರುವದುಚಿತವಲ್ಲ. ಇತರ ದೇಶ ಮತ್ತು (ನಮ್ಮ ದೇಶದ) ಇತರ ಪ್ರಾಂತಗಳಲ್ಲಿದ್ದಂತೆ ಅಲ್ಲಲ್ಲಿ ಶಿಕ್ಷಕ—ಪಾಲಕರ ಸಂಘಗಳನ್ನೇರ್ಪಡಿಸಬೇಕು. ಪ್ರತಿವಾರ ಈ ಸಂಘದ ಸಭೆಸೇರಿ ಸದಸ್ಯರು ಮಕ್ಕಳ ವೈಚಿತ್ರ್ಯಗಳನ್ನೂ ಸ್ವಭಾವಗಳನ್ನೂ ಚರ್ಚಿಸಬಹುದು. ಸಮಸ್ಯೆಗಳಾಗಿ ಪರಿಣಮಿಸಿದ ಎಷ್ಟೋ ಮಾತುಗಳು ಇಂಥ ಚರ್ಚೆಯಿಂದ ಹಗುರಾಗಬಹುದು. ನಮ್ಮ ನಾಡಿನಲ್ಲಿ ಇಂಥ ಸಂಘಗಳು ಇಲ್ಲವೆನ್ನಲು ಬಿನೂ ಸಾಧ್ಯವಿಲ್ಲ. ಈಗ ಕೆಲವು ವರ್ಷಗಳಿಂದ ಹಲಕೆಲವು ಶಾಲೆಗಳು 'ಪಾಲಕರ ದಿನ' ಗಳನ್ನು ಆಚರಿಸತೊಡಗಿವೆ. ಆದರೆ, ಇಂಥ ಪ್ರಸಂಗಗಳಿಗೆ ಹಾಜರಿರುವ ಪಾಲಕರೇ ಕಡಿಮೆ, ಇದ್ದವರೂ ಅಲ್ಪೋಪಚಾರ, ಮನರಂಜನೆಗಳನ್ನು ತೀರಿಸಿ ಹೋಗುವರಾಗುತ್ತಾರೆ. ಈ ತರದ ಕಾರ್ಯ ಅಥವಾ ಬೇಜವಾಬ್ದಾರಿತನದಿಂದ ಯಾವ ಮಹತ್ವದ ಕಾರ್ಯ ಆಗಲಾರದು. ಸ್ವತಂತ್ರ ಹಿಂದುಸ್ಥಾನದ ಭಾವೀ ಜನತೆಯನ್ನು ತೀಡಿ ಯೋಗ್ಯ ಪ್ರಜೆಗಳನ್ನಾಗಿ ಮಾಡಲು ಪಾಲಕರು ಸಹಕರಿಸುವರೆ?

ಈ ಪತ್ರಿಕೆಯನ್ನು [illegible] ಕರ್ನಾಟಕ ಮುದ್ರಣಾಲಯದಲ್ಲಿ "ಲೋಕಶಿಕ್ಷಣ ಟ್ರಸ್ಟ" ಪರವಾಗಿ [illegible] ಮುದ್ರಿಸಿ ಪ್ರಕಟವಾಯಿತು.